

ಹೊಸ ಸಮಾಜದ
ಕನಸು ಹೊತ್ತ
ಹೋರಾಟಗಾರ

ಇದು ಕ್ರಾಂತಿನಂತರದ ಚೀಣಾದಲ್ಲಿ ಸೃಷ್ಟಿಯಾದ ಶಿಲ್ಪ ಕಲೆಯ ಒಂದು ಉದಾಹರಣೆ. ಪಾನ್ ಹೋ ಎಂಬ ಶಿಲ್ಪಕಾರ ರಚಿಸಿದ ಈ ಶಿಲ್ಪದ ಹೆಸರು "ದುರ್ಗಮ ವರ್ಷಗಳು

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ವಿ.ಪಿ.ಸಿಂಗ್ ರಾಜಿನಾಮೆ

ರಾಷ್ಟ್ರೀಯ ರಂಗ ಬಿಕ್ಕಟ್ಟುಗಳನ್ನು ತಪ್ಪಿಸಬೇಕು

– ಜ್ಯೋತಿ ಬಸು.

ಸಂಪುಟ 12 ಸಂಚಿಕೆ 29
ಜುಲೈ 22 - 1990 ರೂ 1.50

ಒಳಪುಟಗಳಲ್ಲಿ

ಹರ್ಯಾಣದ ಮುಖ್ಯ ಮಂತ್ರಿಯಾಗಿ ಚೌತಾಲಾ ಪುನರಾಯ್ಕೆ ಕಂತುಕಂತಾಗಿ 15 ಮಂತ್ರಿಗಳ ರಾಜಿನಾಮೆ, ಕೊನೆಗೆ ಸ್ವತಃ ಪ್ರಧಾನಿ ವಿ.ಪಿ.ಸಿಂಗ್‌ರವರ ರಾಜಿನಾಮೆ ಇವುಗಳಿಂದ ಆದ ಗೊಂದಲ ಚೌತಾಲಾ ಮತ್ತೆ ರಾಜಿನಾಮೆನೀಡುವುದರಿಂದ ಒಂದು ಘಟ್ಟಕ್ಕೆ ಬಂದಿದೆ. ಈ ಸಂಧರ್ಭದಲ್ಲಿ ಚೌತಾಲಾ ಮರಳಿ ಮುಖ್ಯ ಮಂತ್ರಿಯಾಗಿ ನೇಮಕವಾದದ್ದರ ಬಗ್ಗೆ ಪಕ್ಷ ಕೂಡಲೇ ಪ್ರತಿಕ್ರಿಯೆ ವ್ಯಕ್ತಪಡಿಸಿ "ಇದೊಂದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ತೀವ್ರ ಆಘಾತ ನೀಡದ ನೀತಿ ಬಾಹಿರ ಕ್ರಮ" ಎಂದು ಖಂಡಿಸಿತು. ಈ ಮಧ್ಯೆ ಎಡಪಕ್ಷಗಳು ಸಭೆ ಸೇರಿ ವಿ.ಪಿ.ಸಿಂಗ್ ರಾಜೀನಾಮೆ ನೀಡಿದ್ದರ ಬಗ್ಗೆ ಖೇದ ವ್ಯಕ್ತಪಡಿಸಿ ಕೂಡಲೇ ರಾಜೀನಾಮೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದವು.

> ಈ ಘಟನೆ ಕೆಲವರ ಆಂತರಿಕ ವ್ಯವಹಾರವಲ್ಲ. ಜನತಾದಳ ನಾಯಕರು ತಮ್ಮ ಗುಂಪುಗಾರಿಕೆ ರಾಜಕೀಯವನ್ನು ತಮ್ಮೊಳಗೆ ಸೀಮಿತ ಗೊಳಿಸಬೇಕು, ಜನತೆ ಇಂತಹ ಘಟನೆಗಳನ್ನು ಸಹಿಸುವುದಿಲ್ಲ.

ಸಿ.ಪಿ.ಐ. (ಎಂ) ಪಾಲಿಟ್ ಬ್ಯುರೋ ಸದಸ್ಯ ಕಾಂ. ಸುರ್ಜಿತ್‌ರವರು ಪ್ರಧಾನಿಯನ್ನು ಭೇಟಿಯಾಗಿ ಪಕ್ಷದ ಅಭಿಪ್ರಾಯವನ್ನು ತಿಳಿಸಿದರು. ಈ ಮಧ್ಯೆ ಯೂರೋಪ್‌ನಲ್ಲಿ ಪ್ರವಾಸದಲ್ಲಿದ್ದ ಕಾಂ. ಜ್ಯೋತಿ ಬಸುರವರನ್ನು ಅರುಣ್ ನೆಹರೂ, ಆರಿಫ್ ಮಹಮದ್ ಖಾನ್ ಹಾೂ ಸತ್ಯಪಾಲ್ ಮಲಿಕ್ ರವರು ದೇವಿ ಲಾಲ್, ವಿ.ಪಿ.ಸಿಂಗ್ ರವರು ಫೋನ್ ಮೂಲಕ ಸಂಪರ್ಕಿಸಿದಾಗ ಬಿಕ್ಕಟನ್ನು ಕೂಡಲೇ ನಿವಾರಿಸಿಕೊಳ್ಳಬೇಕು ಪ್ರಧಾನಿಯವರು ರಾಜಿನಾಮೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಯಿತು.

ಈ ಎಲ್ಲಾ ಗೊಂದಲಗಳು ಸದ್ಯಕ್ಕೆ ಒಂದು ಪರಿಹಾರನ್ನು ಕಂಡಿರುವಾಗ ಈ ಬಿಕ್ಕಟ್ಟಿನ ಮೂಲವೇನು? ಈ ಪರಿಸ್ಥಿತಿಯಿಂದ ಕಲಿಯಬೇಕಾದ ಪಾಠ ಗಳೇನು? ಮುಂದೆ ಇಂತಹ ಪರಿಸ್ಥಿತಿ ಉದ್ಭವಿಸದಂತೆ ತಡೆಗಟ್ಟುವ ಮಾರ್ಗಗಳೇನು? ಎಂಬುದರ ಕಡೆಗೆ ಜನತಾ ದಳ ತೀವ್ರವಾಗಿ ಗಮನ ಕೊಡಬೇಕೆಂಬುದು ಸಿ.ಪಿ.ಐ (ಎಂ)ನ ಅಭಿಪ್ರಾಯ. ಅಲ್ಲದೆ ರಾಷ್ಟ್ರೀಯ ರಂಗ ಸರ್ಕಾರದ ಕೈಗಾರಿಕಾ ನೀತಿಯ ಸ್ವರೂಪದ ಹಿನ್ನೆಲೆಯಲ್ಲಿ ಪ್ರಮುಖ ನೀತಿಗಳ ವಿಷಯದಲ್ಲಿ ಬೆಂಬಲಿಗ ಪಕ್ಷಗಳ ಅಭಿಪ್ರಾಯ ಪಡೆಯಬೇಕೆಂದು ಒತ್ತಾಯಿಸಲಾಗಿದೆ. ಇದನ್ನು ಪ್ರಧಾನ ಮಂತ್ರಿ ಹಾಗೂ ಜನತಾದಳದ ಅಧ್ಯಕ್ಷರೊಡನೆ ಚರ್ಚಿಸಿದ ಪ.ಬಂಗಾಲದ ಮುಖ್ಯ ಮಂತ್ರಿ ಹಾಗೂ ಪಾರ್ಲಿಮೆಂಟ್ ಬ್ಯುರೋ ಸದಸ್ಯ ಕಾಂ. ಜ್ಯೋತಿ ಬಸುರವರು ನಂತರ ಪತ್ರಿಕಾ ಗೋಷ್ಟಿಯಲ್ಲಿ ಚರ್ಚೆಯ ಫಲಿತಾಂಶವನ್ನು ವಿವರಸಿದರು.

ಕೇಂದ್ರದಲ್ಲಿ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಪರ್ಯಾಯವಾದ ಸರ್ಕಾರ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ ಕಾಂ ಬಸು ರಾಷ್ಟ್ರೀಯ ರಂಗ ಹೆಚ್ಚು ಐಕ್ಯತೆಯಿಂದ ಕೆಲಸ ಮಾಡ ಬೇಕೆಂದು ಒತ್ತಾಯಿಸಿದರು.

ಈ ಘಟನೆ ಕೆಲವರ ಆಂತರಿಕ ವ್ಯವಹಾರವಲ್ಲ. ಜನತಾದಳ ನಾಯಕರು ತಮ್ಮ ಗುಂಪುಗಾರಿಕೆ ರಾಜಕೀಯವನ್ನು ತಮ್ಮೊಳಗೆ ಸೀಮಿತ ಗೊಳಿಸಬೇಕು, ಜನತೆ ಇಂತಹ ಘಟನೆಗಳನ್ನು ಸಹಿಸುವುದಿಲ್ಲ. ಚೌತಾಲಾ ಘಟನೆ ರಾಷ್ಟ್ರೀಯ ರಂಗ ಸರಕಾರಕ್ಕೆ ಮಸಿ ಬಳಿದಿದೆ. ಆದುದರಿಂದ ಇಂತಹ ಘಟನೆಗಳ ಪುನರಾವರ್ತನೆಯಾಗಬಾರದು. ಈಗ ಸಂಭವಿಸಿದ ಘಟನೆಯೇ ನಡೆಯ ಬಾರದಾಗಿತ್ತು ಎಂದು ಘೋಷಿಸಿದರು.

ರಾಷ್ಟ್ರೀಯ ರಂಗ ದೊಳಗೆ ಹೆಚ್ಚು ಹೆಚ್ಚು ಸಮಾಲೋಚನೆಗಳು ನಡೆಯಬೇಕು. ಪ್ರಧಾನ ಮಂತ್ರಿಯವರು ತಮ್ಮ ಮಂತ್ರಿಗಳೊಡನೆ ಅವಶ್ಯವಾದ ವಿಷಯಗಳಲ್ಲೆಲ್ಲಾ ಸಮಾಲೋಚಿಸಬೇಕು. ಮಾತ್ರವಲ್ಲ ಸರ್ಕಾರಕ್ಕೆ ಬೆಂಬಲ ನೀಡಿದ ಪಕ್ಷಗಳೊಡನೆಯೂ ಹೆಚ್ಚು ಸಮಾಲೋಚಿಸಬೇಕು ಪ್ರಧಾನಿ ಹಾಗೂ ಬೆಂಬಲಿತ ಪಕ್ಷಗಳ ನಾಯಕರ ನಡುವೆ ಈಗ ವಾರಕ್ಕೊಮ್ಮೆ ನಡೆಯುತ್ತಿರುವ ಸಭೆಗಳನ್ನು ಬಲಪಡಿಸಬೇಕು ಮತ್ತು ಇದಕ್ಕೊಂದು ಸರಿಯಾದ ವ್ಯವಸ್ಥೆಯನ್ನು ರೂಪಿಸಬೇಕು. ಪ್ರಮುಖ ರಾಜಕೀಯ ಬೆಳವಣಿಗೆಗಳು ಮಾತ್ರವಲ್ಲ ಸರ್ಕಾರ ಪ್ರಧಾನ ನೀತಿಗಳ ವಿಷಯದಲ್ಲಿಯೂ ನಮ್ಮೊಡನೆ ಸಮಾಲೋಚಿಸಬೇಕು. ರಾಷ್ಟ್ರೀಯ ರಂಗ ಸರ್ಕಾರ ಹಾಗೂ ಬೆಂಬಲಿತ ಪಕ್ಷಗಳ ಸಂಸದೀಯ ವಿಭಾಗಗಳ ನಡುವೆ ಹೆಚ್ಚು ಪರಿಣಾಮ ಕಾರಿಯಾದ ಸಮನ್ವಯ ಅವಶ್ಯಕವಾಗಿದೆ. ಮುಂದಿನ ಸಂಸತ್ ಅಧಿವೇಶನದೊಳಗೇ ಇಂತಹ ವ್ಯವಸ್ಥೆ ಜಾರಿಗೆ ಬರಬೇಕೆಂದು, ತಿಳಿಸಿರುವುದಾಗಿ ಹೇಳಿದರು.

ಮಹತ್ವದ ಈ ಘಟನೆಯಿಂದ ಸರಿಯಾದ ಪಾಠ ಗಳನ್ನು ಕಲಿಯಬೇಕೆಂಬ ಮಾತನ್ನು ಹಾಗು ಸಮಾಲೋಚನೆಯ ಅವಶ್ಯಕತೆಯನ್ನು ಪ್ರಧಾನಿ ಒಪ್ಪಿಕೊಂಡರೆಂದು ಅವರೂ ತಿಳಿಸಿದ್ದಾರೆ.

ಚೌತಾಲಾ ಮತ್ತೆ ಪ್ರತಿಷ್ಠಾಪನೆ ಯತ್ನ

ಪಿ.ಬಿ.ಖಂಡನೆ

ಜನತಾದಳದಲ್ಲಿ, ರಾಷ್ಟ್ರೀಯ ರಂಗ ಸರಕಾರದಲ್ಲಿ ಒಂದು ತೀವ್ರ ಬಿಕ್ಕಟ್ಟು ಸೃಷ್ಟಿಸಿದ ಓಂ ಪ್ರಕಾಶ್ ಚೌತಾಲಾರು ಮುಖ್ಯಮಂತ್ರಿಯಾಗಿ ಮರು ಸ್ಥಾಪನೆಗೊಂಡ ಘಟನೆ ಪ್ರಧಾನ ಮಂತ್ರಿಗಳು ಹಾಗೂ ಜನತಾದಳದ ಇತರ ಮುಖಂಡರ ಘೋಷಣೆಗಳಿಗೆ ವ್ಯತಿರಿಕ್ತವಾಗಿತ್ತು ಎಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಜುಲೈ 13 ರಂದು (ಪ್ರಧಾನಿ ರಾಜೀನಾಮೆ, ಅದರ ವಾಪಸಾತಿ, ನಂತರ ಚೌತಾಲಾರ ಮರು ರಾಜೀನಾಮೆಯ ಮೊದಲು) ನೀಡಿದ ಹೇಳಿಕೆಯೊಂದರಲ್ಲಿ, ತೀವ್ರವಾಗಿ ಖಂಡಿಸಿದೆ. ಮೆಹಮದಲ್ಲಿ ಚುನಾವಣೆ ನಡೆಯುವವರೆಗೆ, ಮೆಹಂ ಘಟನೆಗಳ ಕುರಿತ ವಿಚಾರಣೆಯ ತೀರ್ಪು ಬರುವವರೆಗೆ ಚೌತಾಲಾರು ಮತ್ತೆ ಮುಖ್ಯಮಂತ್ರಿಯಾಗುವ ಪ್ರಶ್ನೆಯೇ ಇಲ್ಲವೆಂದು ಜನತಾದಳ ಮುಖಂಡರು ಸಾರಿ ಸಾರಿ ಹೇಳಿದ್ದರು.

ಇದಕ್ಕೆ ವ್ಯತಿರಿಕ್ತವಾಗಿ ಇದಕ್ಕಿದ್ದಂತೆ ಚೌತಾಲಾರು ಮತ್ತೆ ಮುಖ್ಯಮಂತ್ರಿಯಾದದ್ದು ಜನತಾದಳ ಮುಖಂಡರ ವಿಶ್ವಾಸಾರ್ಹತೆಯನ್ನು: ನೈತಿಕ ಬಲವನ್ನು ಕಳೆಗುಂದಿಸಿದೆ ಎಂದಿರುವ ಪಿ.ಬಿ. ಈಗಾಗಲೇ ಗಂಭೀರ ಸೆಳೆತಕ್ಕೆ ಒಳಗಾಗಿರುವ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಈ ನೀತಿಬಾಹಿರ ಕ್ರಮ ತೀವ್ರ ಆಘಾತ ನೀಡಿದೆ ಎಂದು ಖೇದ ವ್ಯಕ್ತಪಡಿಸಿದೆ.

ತ್ರಿಪುರಾದಲ್ಲಿ ಕಾಂಗ್ರೆ- ಟಿ, ಯು. ಜೆ ಎಸ್. ನೀಚಕೃತ್ಯ

ಭಾರತ ಸರ್ಕಾರದ ಮಧ್ಯ ಪ್ರವೇಶಕ್ಕೆ ಪಿಬಿ. ಕರೆ

ಸ್ವಾಯತ್ತ ಬುಡಕಟ್ಟು ಜಿಲ್ಲಾ ಮಂಡಳಿ ಚುನಾವಣೆಗಳಲ್ಲಿ ಮೋಸ ನಡೆಸಿದ ನಂತರ ತ್ರಿಪುರಾದ ಕಾಂಗ್ರೆ-ಟಿ.ಯು. ಜೆ.ಎಸ್. ಸರಕಾರ ಕೊಲೆ, ಸುಲಿಗೆ, ಎಡರಂಗ ಮತ್ತು ಸಿ.ಪಿ.ಐ.(ಎಂ) ಬೆಂಬಲಕ್ಕೆ ನಿಂತವರ ವಿರುದ್ಧ ನಿರ್ದಯ ಹಿಂಸಾಚಾರ ಮುಂತಾದ ನೀಚಕೃತ್ಯಗಳಲ್ಲಿ ತೊಡಗಿದೆ. ಆದ್ದರಿಂದ ಭಾರತ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಈ ಭಯೋತ್ಪಾದನೆಯನ್ನು ನಿಲ್ಲಿಸಬೇಕು. ಈ 'ಅರೆ-ಫ್ಯಾಸಿಸ್ಟ್ ಹಿಂಸಾಚಾರಕ್ಕೆ ಒಳಗಾದವರಿಗೆ ರಕ್ಷಣೆ ನೀಡಬೇಕುಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ. ಚುನಾವಣೆ ಸಮಯದಲ್ಲಿ ರಾಜ್ಯಕ್ಕೆ ಕಳಿಸಿದ ಅರೆ-ಸೈನಿಕ ಪಡೆಗಳು ಕೆಲಸ ನಿರ್ವಹಿಸಿದಂತೆ ಕಾಂಗ್ರೆ-ಟಿ.ಯು.ಜೆ.ಎಸ್. ಕೂಟ ಸರಕಾರ ಮಾಡಿತ್ತು. ತಕ್ಷಣ ಜನರ ಜೀವ ರಕ್ಷಣೆಯಲ್ಲಿ ಕಾರ್ಯನಿರ್ವಹಿಸುವಂತೆ, ರಾಜ್ಯದಲ್ಲಿ ಸಾಮಾನ್ಯ ಸ್ಥಿತಿ ತರುವಂತೆ ಮಾಡಬೇಕು ಎಂದು ಪಿ.ಬಿ. ಒತ್ತಾಯಿಸಿದೆ.

ಚುನಾವಣಾ ಮೋಸದ ಫಲಶ್ರುತಿಯಾಗಿ ಇಡೀ ತ್ರಿಪುರಾ ರಾಜ್ಯವನ್ನು ಸಶಸ್ತ್ರ ಗೂಂಡಾಗಳಿಗೆ ಒಪ್ಪಿಸಿಬಿಟ್ಟಂತೆ ಕಾಣುತ್ತಿದೆ. ಈ ಗೂಂಡಾ ಗಳು ಪೋಲೀಸರ ರಕ್ಷಣೆಯಲ್ಲಿ ತಮ್ಮ ನೀಚತನ ತೋರುತ್ತಾ ಅಡ್ಡಾಡುತ್ತಿದ್ದಾರೆ. ಸಿ.ಪಿ.ಐ.(ಎಂ), ಎಡರಂಗ ಬೆಂಬಲಿಗರ ಮನೆಗಳ ಮೇಲೆ ಆಕ್ರಮಣ ನಡೆಸುತ್ತಿದ್ದಾರೆ. ಈಗಾಗಲೇ ನೂರಕ್ಕೂ ಹೆಚ್ಚು ಮನೆಗಳನ್ನು ಸುಟ್ಟಿದ್ದಾರೆ. ಒಂಭತ್ತು ಕಾರ್ಯಕರ್ತರ ಕೊಲೆ ಮಾಡಿದ್ದಾರೆ. ಚುನಾವಣೆಯ ದಿನವೇ ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯ ಹಾಗೂ ಸಿಮ್ನಾ ಸಿ.ಪಿ.ಐ(ಎಂ) ಸ್ಥಳೀಯ ಸಮಿತಿ ಸದಸ್ಯ ಅರುಣ್ ದೇವ್‌ರನ್ನು ಮತಗಟ್ಟೆಯೊಳಗೆ ಕಾಂಗ್ರೆ-ಟಿ.ಯು.ಜೆ.ಎಸ್. ಗೂಂಡಾಗಳು ಕೊಚ್ಚಿಹಾಕಿದರು. ತೆಲಿಯಾಮೂರಾದಲ್ಲಿ ತೊಂಭತ್ತು ವರ್ಷದ ಹಿರಿಯ ಸಿ.ಪಿ.ಐ. (ಎಂ) ಸದಸ್ಯ ನಳಿನಿ ಚಕ್ರವರ್ತಿ ಯವರನ್ನು ಕೊಲೆ ಮಾಡಿದ್ದಾರೆನ್ನುವುದು ಈ ಕೂಟದ ಅಮಾನುಷ ಕ್ರೂರ ಕೃತ್ಯಗಳಿಗೊಂದು ನಿದರ್ಶನ.

ಏಳು ಪಕ್ಷದ ಕಚೇರಿಗಳನ್ನು ಸುಟ್ಟುಹಾಕಲಾಟದೆ. ಬೀರಚಂದ್ರ ಯಾನುವಿನಲ್ಲಿರುವ ಪಕ್ಷದ ಕಚೇರಿಯನ್ನು ಸಶಸ್ತ್ರ ಗೂಂಡಾಗಳು ಆಕ್ರಮಿಸಿಕೊಂಡಿದ್ದಾರೆ. ಈ ಕಚೇರಿಯಲ್ಲಿ ಆಕ್ಟೋಬರ್ 1988 ರಲ್ಲಿ ಕಾಂಗ್ರೆಗಳು 11 ಕಾರ್ಯಕರ್ತರ ಕೊಲೆ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮಾನು, ದಾಸದಾ, ದಮ್‌ಚೇರಾದಲ್ಲಿರುವ ತ್ರಿಪುರಾ ರಾಜ್ಯ ಸರ್ಕಾರಿ ನೌಕರರ ಸಂಯೋಜನಾ ಸಮಿತಿಯ ಕಚೇರಿಗಳನ್ನೂ ಗೂಂಡಾಗಳು ಆಕ್ರಮಿಸಿಕೊಂಡಿದ್ದಾರೆ. ಸಿ.ಪಿ.ಐ.(ಎಂ) ದೈನಿಕ 'ದೇಶೇರ್ ಕಥಾ' ಗೂಂಡಾಗಳ ಹಲ್ಲೆಯ ವಿಶೇಷ ಗುರಿ.

ಖೋವಾ, ಸಬ್ರೂಮ್, ಬೆಲೋನಿಯಾ, ಉದಯ್‌ಪುರ್ ಮತ್ತು ಸದರ್ ಕಾಂಗ್ರೆ-ಟಿ.ಯು.ಜೆ.ಎಸ್. ಗೂಂಡಾಗಳ ಭಯೋತ್ಪಾದನೆಗೆ ತುತ್ತಾಗಿ ರುವ ಪ್ರದೇಶಗಳು. ತ್ರಿಪುರಾದಲ್ಲಿ ಈಗ

ಪುಟ 8 ಕ್ಕೆ

ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಬೆಂಬಲಿಗರಿಗೆ ಚಿರಸ್ಮರಣೀಯ ಹೆಸರು

ಪಂಡಿತ್ ಕಿಶೋರಿಲಾಲ್‌ರಿಗೆ ಸಿ.ಪಿ.ಐ(ಎಂ) ಧೀರ ನಮನ

ಮಹಾನ್ ಕ್ರಾಂತಿಕಾರಿ, ಹುತಾತ್ಮ ಭಗತ್ ಸಿಂಗ್‌ರ ಸಂಗಾತಿ, ಸಹಯೋಗಿ ಪಂಡಿತ್ ಕಿಶೋರಿಲಾಲ್ ಇನ್ನಿಲ್ಲ. ಜುಲೈ 11 ರ ಸಾಯಂಕಾಲ ಜಾಲಂಧರ್‌ನ ಆಸ್ಪತ್ರೆಯೊಂದರಲ್ಲಿ ಅವರು ಕೊನೆಯುಸಿರೆಳೆದರು. ಅವರಿಗೆ 74 ವರ್ಷವಾಗಿತ್ತು.

ಪಂಜಾಬಿನ ಹೋಶಿಯಾರ್‌ಪುರ ಜಿಲ್ಲೆಯ ಮುಖೇರಿಯಾದಲ್ಲಿ 1916 ರ ಆರಂಭದಲ್ಲಿ ಶಾಲಾ ಮಾಸ್ತರ್ ಪಂಡಿತ ರಘುವೀರ್ ದತ್ತರ ಕುಟುಂಬದಲ್ಲಿ ಹುಟ್ಟಿದ ಕಿಶೋರಿಲಾಲ್ 13 ವರ್ಷದವರಿದ್ದಾಗಲೇ ಕ್ರಾಂತಿಕಾರೀ ಆಂದೋಲನದತ್ತ ಸೆಳೆಯಲ್ಪಟ್ಟರು. ಭಗತ್‌ಸಿಂಗ್ ಸ್ಥಾಪಿಸಿದ ನೌಜವಾನ್ ಭಾರತ ಸಭಾ ಸೇರಿದರು. 1929 ರ ಅಂತ್ಯದಲ್ಲಿ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳ ವಿರುದ್ಧ ಹೊರಡಿಸಿದ್ದ ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಇವರ ಹೆಸರೂ ಇತ್ತು ಆಪಾದಿತರಲ್ಲಿ ಇವರು ಅತ್ಯಂತ ಚಿಕ್ಕವರಾಗಿದ್ದರು. ಆಗಿನ್ನೂ ಮೈನರ್ ಎಂಬುದರಿಂದಾಗಿ ಅವರಿಗೆ ಗಲ್ಲು ಶಿಕ್ಷೆಯ ಬದಲು ಜೀವಾವಧಿ ಶಿಕ್ಷೆಯನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ವಿಧಿಸಿದರು. ಬ್ರಿಟಿಷ್ ಆಡಳಿತದ ಕರಾಳ ದಿನಗಳನ್ನು ಅವರ ಬಹುಪಾಲು ಜೈಲಿನಲ್ಲೇ ಕಳೆದರು.

ಭಗತ್‌ಸಿಂಗ್ ತನ್ನ ಕೊನೆಯ ದಿನಗಳಲ್ಲಿ ಸಂಪೂರ್ಣವಾಗಿ ವೈಜ್ಞಾನಿಕ ಸಮಾಜವಾದವನ್ನೂ ತನ್ನ ಧ್ಯೇಯವಾಗಿ ಅಂಗೀಕರಿಸಿದ್ದರು ಎಂದು ನಿಮಗೆಲ್ಲಾ ತಿಳಿದಿದೆ. ದುಡಿಯುವ ಜನಗಳಿಗೆ ನೈಜ ಸ್ವಾತಂತ್ರ್ಯ ಮನುಷ್ಯ ಮನುಷ್ಯನನ್ನು ಶೋಷಿಸುವ ವ್ಯವಸ್ಥೆ ಕೊನೆಗೊಳ್ಳದೆ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಅವರು ಬಂದಿದ್ದರೂ ತರುಣ ಕಿಶೋರಿಲಾಲ್ ಅವರ ಈ ವಿಚಾರಗಳಿಂದ, ಆದರ್ಶಗಳಿಂದ ಪ್ರೇರಿತರಾಗಿದ್ದರು.

ಪಂಡಿತ್ ಕಿಶೋರಿಲಾಲ್ ತನ್ನ ಸೆರೆವಾಸದ ದಿನಗನ್ನು ಬಹುಪಾಲು ಲಾಹೋರ್ ಸೆಂಟ್ರಲ್ ಜೈಲಿನಲ್ಲೇ ಕಳೆದರು. ಅಲ್ಲಿ ಅವರು ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಕೃತಿಗಳ ಆಳವಾದ ಅಧ್ಯಯನ ನಡೆಸಿದರು. 1942 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು.

ಸ್ವಾತಂತ್ರ್ಯದ ಒಂದು ವರ್ಷದ ಮೊದಲು ಅವರ ಬಿಡುಗಡೆಯಾದಾಗ ನೇರವಾಗಿ ಪಕ್ಷದ ಕಚೇರಿಗೆ ಬಂದು ತಾನು ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುವುದಾಗಿ ಹೇಳಿದರು. ಅಂದಿನಿಂದ ಪಕ್ಷಕ್ಕೆ ಪಕ್ಷದ ಮೂಲಕ ದುಡಿಯುವ ಜನಗಳ ಚಳುವಳಿಗೆ ಅವರ ಜೀವನ ಸಮರ್ಪಿತ.

ನಂತರ ಅವರು ಪಕ್ಷದ ಲಾಹೋರ್ ಜಿಲ್ಲಾ ಸಮಿತಿಯ ಸದಸ್ಯರಾದರು. ದೇಶದ ವಿಭಜನೆಯ ನಂತರ ಪಂಜಾಬ್ ರಾಜ್ಯ ಸಮಿತಿಯ ಸದಸ್ಯರಾದರು. ಕೊನೆಯ ದಿನದವರೆಗೂ ಇದೇ ಸ್ಥಾನದಲ್ಲಿ ಮುಂದುವರೆದರು. ಪರಿಷ್ಕರಣವಾದ ಮತ್ತು ಪಂಥವಾದದ ವಿರುದ್ಧ ಹೋರಾಟದಲ್ಲೂ ಅವರು ಮಂಚೂಣಿಯಲ್ಲಿದ್ದರು. ಪಕ್ಷ ಇಬ್ಭಾಗವಾದಾಗ ಸಿ.ಪಿ.ಐ(ಎಂ) ಸ್ಥಾಪಕರ ಬೆಂಬಲಕ್ಕೆ ನಿಂತರು.

ದೇಶದ ಕ್ರಾಂತಿಕಾರಿ ಚಳುವಳಿ ಅವರ ಕಾಣಿಕೆ ವಿವಿಧ ರೂಪದ್ದು. ಹಲವಾರು ವರ್ಷ ಅವರು ಸಿ.ಐ.ಟಿ.ಯು. ಪಂಜಾಬ್ ರಾಜ್ಯ ಸಮಿತಿಯ ಅಧ್ಯಕ್ಷರಾಗಿದ್ದರು. ಪಕ್ಷದ ರಾಜ್ಯಸೆಕ್ರೆಟಾರಿಯೆಟ್ ಸದಸ್ಯರೂ. ಅದರ ನಿಯಂತ್ರಣ ಆಯೋಗದ ಅಧ್ಯಕ್ಷರೂ ಆಗಿದ್ದರು. ಪಂಜಾಬಿನಲ್ಲಿ ಅವರು ಭಾಗವಹಿಸದ ರೈತರ ಕಾರ್ಮಿಕರ ಆಂದೋಲನವೆಂಬುದೇ ಇಲ್ಲ.

ಅವರದ್ದು ಅನುಕರಣೀಯ ಕ್ರಾಂತಿಕಾರಿ ಜೀವನ. ಬ್ರಿಟಿಷ್ ಜೈಲಿನಿಂದ ಬಿಡುಗಡೆಯಾದ ನಂತರ ಪಕ್ಷದ ಕಚೇರಿಯೇ ಅವರ ಮನೆಯಾಗಿತ್ತು. ಪಕ್ಷದ ಸಂಬಂಧಗಳಲ್ಲದೆ ಬೇರೆ ಯಾವ ಸಂಬಂಧಗಳೂ ಅವರಿಗಿರಲಿಲ್ಲ. ಕಾರ್ಮಿಕ ವರ್ಗಕ್ಕಾಗಿ ಸಮಾಜವಾದ ಸಮತಾವಾದದ ಧ್ಯೇಯಕ್ಕಾಗಿ ದುಡಿಯಲು ಅವರು ಅವಿವಾಹಿತರಾಗಿಯೇ ಉಳಿಯಲು ನಿರ್ಧರಿಸಿದ್ದರು.

ತಮ್ಮ 61 ವರ್ಷಗಳ ರಾಜಕೀಯ ಜೀವನದಲ್ಲಿ 24 ವರ್ಷಗಳನ್ನು ಜೈಲಿನಲ್ಲಿ ಕಳೆದ ಕ್ರಾಂತಿಕಾರಿ ಪಂಡಿತ್ ಕಿಶೋರಿಲಾಲ್ ಎರಡೂವರೆ ವರ್ಷ ಭೂಗತರಾಗಿದ್ದರು. ರಾಜ್ಯದ ಎಲ್ಲಾ ಜನ ವಿಭಾಗಗಳ ನಡುವೆ, ಪಕ್ಷದ, ಕಾರ್ಯಕರ್ತರ, ಹಿತ ಚಿಂತಕರಿಗೆ ಕ್ರಾಂತಿಕಾರಿ ಧ್ಯೇಯಕ್ಕೆ ತಮ್ಮನ್ನು ಮುಡಿಪಿಟ್ಟು ನೂರಾರು ಯುವಜನಕ್ಕೆ ಅವರ ಪ್ರೇರಣೆಯ ಸೆಲೆಯಾಗಿದ್ದರು. ತಮ್ಮ ಇಳಿ ವಯಸ್ಸಿನಲ್ಲೂ ದೇಶದ ಐಕ್ಯತೆಯ ರಕ್ಷಣೆಗಾಗಿ, ಪ್ರತ್ಯೇಕತಾವಾದ, ಭಯೋತ್ಪಾದಕತೆಯ ವಿರುದ್ಧ ಹೋರಾಟದಲ್ಲಿ ಮಗ್ನರಾಗಿದ್ದವರು ಎಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ.

ಅವರ ಕಣ್ಮರೆ ಪಕ್ಷಕ್ಕೆ ದೇಶದ ಕಾರ್ಮಿಕ ವರ್ಗಕ್ಕೆ ಕೋಟಿಗಟ್ಟಲೆ ಈ ಶ್ರಮ ಜೀವಿಗಳಿಗೆ ಒಂದು ದೊಡ್ಡ ನಷ್ಟ. ಸ್ವಾತಂತ್ರ್ಯ ಪ್ರಜಾಪ್ರಭುತ್ವ, ಸಮಾಜವಾದದ ಬೆಂಬಲಿಗರಿಗೆಲ್ಲಾ 'ಅವರು ಸದಾ ಸ್ಮರಣೀಯರು ಎಂದು ಪಿ.ಬಿ. ವರ್ಣಿಸುತ್ತಾ ಈ ಧೀರ ಮುಂದಾಳುವಿಗೆ ಕೆಂಪು ನಮನ ಸಲ್ಲಿಸಿದೆ. ಅವರ . ಮಿತ್ರರು, ಸಂಗಾತಿಗಳು ಸಂಬಂಧಿಕರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ತೆಲಂಗಾಣಾದ ವೀರಗಾಥೆಯಿಂದ ರೋಮಾಂಚಿತನಾದ ಮುಂಬಯಿಯ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಗಿರಣಿಕಾರ್ಮಿಕರ ಜೀವನದ ಬಗ್ಗೆ ಕರಗಿ ಹೋದ ಅವುಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಸದೆ ಮೂಡಿಸಿ ಎಲ್ಲರ ಗಮನವನ್ನು ಅದರತ್ತ ಸೆಳೆದ ಕವಿ ಹರೀಂದ್ರನಾಥ ರ ಬದುಕಿನ ಬಗ್ಗೆ ಒಂದು ನುಡಿ ಚಿತ್ರ

ಕನ್ನಡದ ಪ್ರಖ್ಯಾತ ಲೇಖಕರಾದ ಡಾ..ಹಾಮಾ.ನಾಯಕರು ಈ ಕವಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಬರೆದ ಲೇಖನದ ನಮ್ಮ ಓದುಗರಿಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ 'ಪ್ರಜಾವಾಣಿ'ಯ ಅವರ ಅಂಕಣ 'ಸಂಪ್ರತಿ'ಯಲ್ಲಿ ಇದು ಜುಲೈ 8 ರಂದು ಪ್ರಕಟವಾಗಿತ್ತು.

ಒಂದು ವರ್ಣರಂಜಿತ ಬದುಕು

ಆಗ ನಾನು ಇಂಟರ್‌ಮೀಡಿಯೆಟ್ ಕಾಲೇಜಿನವಿದ್ಯಾರ್ಥಿಯಾಗಿದ್ದೆ. ಆಕಸ್ಮಾತ್ತಾಗಿ, ಇಂಗ್ಲಿಷ್ ವಾರ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಒಂದು ಪ್ರಹಸನ ಕಣ್ಣಿಗೆ ಬಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದು ಕೇವಲ ಐದು ವರ್ಷ ಕಳೆದಿದ್ದವು. ಆಗಲೇ ಜನರಲ್ಲಿ ನಿರಾಶೆಯ ಮನೋಭಾವ ಮೂಡಿತ್ತು! ಆಳುವವರು ಆಳಿಸಿಕೊಳ್ಳುವ ಆಗತ್ಯಗಳನ್ನು ದಿವ್ಯ ನಿರ್ಲಕ್ಷ್ಯದಿಂದ ಕಾಣುವ ರೂಢಿ ಪ್ರಾರಂಭವಾಗಿತ್ತು. ಎಡ ಪಂಥೀಯರು ಈ ಪರಿಸ್ಥಿತಿಗೆ ಗಟ್ಟಿಯಾದ ವಿರೋಧದ ದನಿ ಕೊಡುತ್ತಿದ್ದರು. ಪ್ರಜಾಪ್ರಭುತ್ವದಲ್ಲಿ ಕತ್ತೆಯೂ ಓಟು ಕೊಡುತ್ತದೆ ಎಂಬ ವಿಚಾರ ಆ ಪ್ರಹಸನದಲ್ಲಿ ಪ್ರಕಟ ಗೊಂಡಿತ್ತು! ಕತ್ತೆಗಳು ಕತ್ತೆಗಳಿಗೇ ಓಟು ಕೊಡುತ್ತದೆ ಎಂಬುದು ಅಲ್ಲಿನ ಧ್ವನಿ.

ಇಡೀ ಗುಂಪು ಎಡಗಡೆಯ ಪೆಟ್ಟಿಗೆಯೆಡೆ ಧಾವಿಸುತ್ತದೆ. ಆದರೆ ಕತ್ತೆಯೊಂದು ಮಾತ್ರ ನೊಗ ಹೊತ್ತ ಜೋಡೆತ್ತಿನ ಗುರುತಿನ ಪೆಟ್ಟಿಗೆಯೆಡೆ ಹೋಗುತ್ತದೆ. ಖಾದಿ ಟೋಪಿಧಾರಿ, ರಂಗದೆದುರಿಗೆ ಪ್ರೇಕ್ಷಕರ ಕಡೆ ಬೆನ್ನು ಹಾಕಿಕೊಂಡು ಓಟು ಮಾಡುವುದನ್ನೇ ಕಾಯುತ್ತಿದ್ದಾನೆ. ಯುವಕನೊಬ್ಬ ಹೇಳುತ್ತಾನೆ: "ಕತ್ತೆಯೊಂದು ಮಾತ್ರ ಖಾದಿ ಟೋಪಿಧಾರಿಗೆ ಓಟು ಮಾಡುತ್ತಿದೆ". ಜೊತೆಯ ಯುವತಿ ಅರಚುತ್ತಾಳೆ: "ಕತ್ತೆ ಯಾವಾಗಲೂ ಕತ್ತೆಯೆ!" ವೃದ್ಧ ರೈತನೊಬ್ಬ ಗೊಣಗುತ್ತಾನೆ: "ಕತ್ತೆ ಯಾವಾಗಲೂ ಕತ್ತೆಯೆ!" ಇದು ಪ್ರಹಸನ ಮುಕ್ತಾಯ ಗೊಂಡ ರೀತಿ.

ಇದರಲ್ಲಿ ಯಾವುದೇ ರೀತಿಯ ಕಲಾತ್ಮಕತೆ ಇಲ್ಲವೆನ್ನುವುದು ನನಗೆ ಈಗ ಅರ್ಥವಾಗುತ್ತದೆ. ಆದರೆ ಅಂದು ಅದರ ಚುಚ್ಚುನುಡಿಗಳಿಗೆ ಮಾರುಹೋಗಿದ್ದೆ! ಅದನ್ನು ಕನ್ನಡಕ್ಕೆ ಅನುವಾದಿಸಿದೆ. ಶಿವಮೊಗ್ಗೆಯಲ್ಲಿ ಪ್ರಕಟವಾಗುತ್ತಿದ್ದ 'ನಂದಿನಿ' ಮಾಸಪತ್ರಿಕೆಯಲ್ಲಿ (ಫೆಬ್ರವರಿ, 1952) ಅದು ಪ್ರಕಟವಾಯಿತು. ನಾಟಕವನ್ನು ಅನುವಾದಿಸಲು ಸಮ್ಮತಿ ಕೋರಿ ಲೇಖಕರಿಗೆ, ಆ ನಿಯತಕಾಲಿಕದ ವಿಳಾಸಕ್ಕೆ ಕಾಗದ ಬರೆದಿದ್ದೆ. ಉತ್ತರ ಬರುವಷ್ಟರಲ್ಲಿಯೇ ನಾಟಕ ಪ್ರಕಟವಾಗಿ ಹೋಗಿತ್ತು. ಮುಂದೆ ಏನಾದೀತೆಂಬ ಭಯಮಿಶ್ರಿತ ಕುತೂಹಲ ಸ್ವಲ್ಪ ಕಾಡುತ್ತಿತ್ತು. ಅಂತೂ ಲೇಖಕರ ಕಾಗದ ಬಂತು! ಆ ನಾಟಕದ ಆಶಯ ಆದಷ್ಟೂ ಹೆಚ್ಚು ಜನರಿಗೆ ಮುಟ್ಟಬೇಕೆಂಬುದೇ ತಮ್ಮ ಅಪೇಕ್ಷೆಯಾದುದರಿಂದ, ಅನುವಾದಕ್ಕೆ ಸಮ್ಮತಿಸುವುದು ತಮಗೆ ಸಂತೋಷವಾಗುತ್ತದೆಂದು ಅವರು ಬರೆದಿದ್ದರು. ತೊಂದರೆಯಾಗದಿದ್ದರೆ ಅನುವಾದದ ಪ್ರಕಟಿತ ಪತ್ರಿಕೆಯೊಂದನ್ನು ಕಳಿಸಲೂ ಸೂಚಿಸಿದ್ದರು.

ಆ ಲೇಖಕ, ಮೊನ್ನೆ ಜೂನ್ 23 ರ ಬೆಳಿಗ್ಗೆ, ತಮ್ಮ 93 ನೆಯ ತುಂಬು ವಯಸ್ಸಿನಲ್ಲಿ, ಮುಂಬಯಿಯಲ್ಲಿ, ಹೃದಯಾಘಾತದಿಂದ ತೀರಿಕೊಂಡ ಹರೀಂದ್ರನಾಥ ಚಟ್ಟೋಪಾಧ್ಯಾಯರು. ಹೈದರಾಬಾದಿನಲ್ಲಿ ವಾಸವಾಗಿದ್ದರೂ ಮೂಲತಃ ಪೂರ್ವ ಬಂಗಾಳದ ಒಂದು ಹಳ್ಳಿಗೆ ಸೇರಿದವರಾದ ಅವರು (ಜನನ : ಏಪ್ರಿಲ್ 2, 1898) ತುಂಬ ಪ್ರಸಿದ್ಧ ಮನೆತನಕ್ಕೆ ಸೇರಿದವರು. ಅವರ ತಂದೆ ಬಹುಮುಖ ಪ್ರತಿಭೆಯ ವಿದ್ವಾಂಸ, ಶಿಕ್ಷಣ ತಜ್ಞ ಅಘೋರನಾಥ ಚಟ್ಟೋಪಾಧ್ಯಾಯರು; ಸಹೋದರಿಯರಲ್ಲಿ ಒಬ್ಬರು ಕವಿಕೋಗಿಲೆ ಎಂದು ಪ್ರಸಿದ್ಧರಾದ ಸರೋಜಿನಿ ನಾಯ್ಡು ಅವರು; ಮೊದಲನೆಯ ಹೆಂಡತಿ ಕನ್ನಡತಿ ಕಮಲಾದೇವಿ ಚಟ್ಟೋಪಾಧ್ಯಾಯ! ಹರೀಂದ್ರನಾಥರು ಸಹಜ ಪ್ರತಿಭಾವಂತರು, ಮೇಧಾವಿ.

ಹರೀಂದ್ರನಾಥರ ಮೇಲೆ ತಂದೆ ತಾಯಿಗಳ ಪ್ರಭಾವ ವಿಶೇಷವಾಗಿತ್ತು. ತಂದೆ ಅಘೋರನಾಥರು ಹೃದಯವಂತಿಕೆ, ಜಾಣ್ಮೆ ಆಧ್ಯಾತ್ಮಿಕ ಸಾಧನೆಗಳಿಗೆ ಹೆಸರಾಗಿದ್ದರು. ಅವರು ಅನೇಕ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. ತಾವು ಮದುವೆಯಾಗುವ ಹುಡುಗಿಯನ್ನು ಅಪಹರಿಸಿಕೊಂಡು ಬಂದು ಆ ದಿನಗಳಲ್ಲಿ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿದ್ದರು. ಬರಿಯ ಕಣ್ಣನೋಟದಿಂದಲೇ ಮಕ್ಕಳಿಗೆ ಗದರಿಸುತ್ತಿದ್ದರು. ಎಂದೂ ಕೆಟ್ಟ ಮಾತನ್ನಾಡುತ್ತಿರಲಿಲ್ಲ. "ಅವರು ನಡೆದಾಡುವ ವಿಶ್ವಕೋಶವಾಗಿದ್ದರು" ಎಂದು ಹರೀಂದ್ರರು ನೆನಪಿಸಿಕೊಳ್ಳುತ್ತಾರೆ.

ಹರೀಂದ್ರನಾಥ ಚಟ್ಟೋಪಾಧ್ಯಾಯರು ಎಂಟು ವರ್ಷದ ಹುಡುಗನಾಗಿದ್ದಾಗ ಕವಿತೆ ಬರೆಯಲು ತೊಡಗಿದರು. ಅವರ ಮನೆಯಲ್ಲಿ ಬಂಗಾಳಿ, ಹಿಂದೂಸ್ತಾನಿ ಮತ್ತು ತೆಲುಗು ಭಾಷೆಗಳು ಬಳಕೆಯಲ್ಲಿದ್ದವು. ಆದರೆ ಇಂಗ್ಲಿಷ್ ಸಾಹಿತ್ಯಕ್ಕೆ ಹರೀಂದ್ರರ ಪ್ರವೇಶವಾಗಿತ್ತು. ಟೆನಿಸನ್ ಅವರಿಗೆ ಪ್ರಿಯನಾಗಿದ್ದ ಕವಿಯಾಗಿದ್ದ. ಆವರು ಬರೆದುದನ್ನು ಅವರ ತಂದೆ ತಿದ್ದಿದರು; ಉಪಾಯವಾಗಿ ಮತ್ತೆ ಮತ್ತೆ ತಿದ್ದಿದರು. ಅದನ್ನು ನೆನಪಿಸಿಕೊಂಡು ಅವರು ಹೇಳುತ್ತಾರೆ :

" ನಾನು ಕೆಟ್ಟದ್ದನ್ನು ಬರೆದಿದ್ದೇನೆಂದು ನನ್ನ ತಂದೆಯವರು ನನಗೆ ಹೇಳಿದ್ದಿದ್ದರೆ, ನಾನು ಇಂದು ಯಾವುದೋ ಒಂದು ಸರ್ಕಾರಿ ಕಛೇರಿಯಲ್ಲಿ ಗುಮಾಸ್ತನಾಗಿರುತ್ತಿದ್ದೆ ಇಲ್ಲವೆ ಷೇರು ಪೇಟೆಯಲ್ಲಿ ಒಬ್ಬ ಕೂಗುಮಾರಿಯಾಗಿ ಹೋಗುತ್ತಿದ್ದೆ" ಅದು ಅಘೋರನಾಥರು ತಮ್ಮ ಮಕ್ಕಳನ್ನು ತಿದ್ದುತ್ತಿದ್ದ ರೀತಿ.

ಹತ್ತನೇ ವಯಸ್ಸಿನ ಹೊತ್ತಿಗೆ ಹರೀಂದ್ರರು ಷೇಕ್ಸ್‌ಪಿಯರ್, ಮೋಲಿಯರ್ ಮೊದಲಾದವರನ್ನು ಓದಿಬಿಟ್ಟಿದ್ದರು; ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವವನ್ನು ಸಂಪಾದಿಸಿದ್ದರು. ಖುದೀರಾಮ್ ಬೋಸ್ ಎಂಬ ಹುತಾತ್ಮನನ್ನು ಕುರಿತು ಅವರು "ಸಾಯುತ್ತಿರುವ ದೇಶಪ್ರೇಮಿ" ಎಂಬೊಂದು ಕವಿತೆಯನ್ನು ಬರೆದಿದ್ದರು. ಅದನ್ನು ಓದಿಸಿ ಕೇಳಿದ ಗೋಪಾಲಕೃಷ್ಣ ಗೋಖಲೆಯವರು ಕಣ್ಣಿನಲ್ಲಿ ನೀರು ಸುರಿಸುತ್ತ ಹೇಳಿದರಂತೆ : "ಅಪ್ಪಾ ದೇವರು ನಿನ್ನನ್ನು ಕಾಪಾಡಲಿ. ಹೀಗೆಯೇ ಬರೆಯುತ್ತ ಹೋಗು". ಹತ್ತು ವರ್ಷದ ಹುಡುಗನ ಕಾವ್ಯ ಸಾಧನೆ ತಮ್ಮಲ್ಲಿ ರೋಮಾಂಚನವನ್ನುಂಟು ಮಾಡಿತು ಎಂದೂ ಗೋಖಲೆಯವರು ಇನ್ನೊಂದು ಸಂದರ್ಭಗಳಲ್ಲಿ ಹೇಳಿದರು!

ಕಾವ್ಯ ಮತ್ತು ನಾಟಕ ಎರಡೂ ಹರೀಂದ್ರರ ಮೆಚ್ಚಿನ ವಿಷಯಗಳಾಗಿದ್ದವು. ಅಘೋರನಾಥರು ಕಲಾಪ್ರೇಮಿಯಾಗಿದ್ದರು. ಒಳ್ಳೆಯ ನಾಟಕಗಳನ್ನು, ಒಂದೂ ಬಿಡದಂತೆ, ಮನೆಮಂದಿಯವರೊಡನೆ ನೋಡುತ್ತಿದ್ದರು. ಕಲ್ಕತ್ತ ಮತ್ತು ಹೈದರಾಬಾದ್ ನಗರಗಳಲ್ಲಿ ಯಾವುದೇ ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳಾದರೂ ಅವರು ಭಾಗಿಯಾಗಿರುತ್ತಿದ್ದರು. ಇದರಿಂದ ಹರೀಂದ್ರರಿಗೆ ಎಳವೆಯಿಂದಲೇ ನಾಟಕದ ಹುಚ್ಚು ಹತ್ತಿತು. ಅನುಕರಣೆ ಅವರಿಗೆ ಸುಲಭವಾಗಿ ಅಂಟಿತು. ಬಾಲ್ಯದಿಂದಲೇ ಅವರಿಗೆ ರಂಗಭೂಮಿ ಹತ್ತಿರದ್ದಾಯಿತು. ಆದರಿಂದಲೇ ಅವರು ಕಮಲಾದೇವಿಯವರನ್ನು ಪಡೆಯುವುದೂ ಸುಲಭವಾಯಿತು! ದೇಶಭಕ್ತಿಯೂ ಅವರಲ್ಲಿ ಸಹಜವಾಗಿ ಮೂಡಿತ್ತು. ಆವರೊಬ್ಬ ಅಸಾಮಾನ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಹಲವು ಸಲ ಸೆರೆಮನೆಗೆ ಹೋಗಿ ಬಂದಿದ್ದರು. ಆ ಕಾಲದ ರಾಷ್ಟ್ರನಾಯಕರೆಲ್ಲ ಅವರಿಗೆ ಹತ್ತಿರದವರೂ ಪ್ರಿಯರೂ ಆಗಿದ್ದರು.

ಸುಮಾರು ಇನ್ನೂರರಷ್ಟು ಪುಸ್ತಕಗಳನ್ನು ಪ್ರಕಟಿಸಿರುವ ಹರೀಂದ್ರನಾಥರು, ಇಂಗ್ಲಿಷ್‌ನಲ್ಲಿ ಬರೆಯುವ ಭಾರತೀಯ ಲೇಖಕರಲ್ಲಿ ಕವಿಯೆಂದೂ, ನಾಟಕಕಾರರೆಂದೂ ಹೆಸರಾಗಿದ್ದಾರೆ. ಐವತ್ತಕ್ಕೂ ಹೆಚ್ಚು ಅವರ ಕವನ ಸಂಕಲನಗಳು ಪ್ರಕಟಗೊಂಡಿವೆ. ಅವೇನೂ ಚಿಕ್ಕಪುಟ್ಟ ಹೊತ್ತಿಗೆಗಳಲ್ಲ. ಉದಾಹರಣೆಗೆ ಅವರ ಸ್ಪ್ರಿಂಗ್ ಇನ್ ವಿಂಟರ್ ಎಂಬ ಸಂಕಲನದಲ್ಲಿ 208 ಕವಿತೆಗಳಿವೆ! ಅವರ ಮೊದಲನೆಯ ಕಾವ್ಯ ಸಂಕಲನ (ಫೀಸ್ಟ್ ಆಫ್ ಯೂಥ್) ಪ್ರಕಟವಾದಾಗ (1908) ಅವರು ಇಪ್ಪತ್ತರ ಹರಯ ದಲ್ಲಿದ್ದರು. ಸುನೀತಗಳನ್ನು ಬರೆಯುವುದರಲ್ಲಿ ಅವರು ಎತ್ತಿದ ಕೈ: ಸಾವಿರಾರು ಸುನೀತಗಳನ್ನು ಅವರು ರಚಿಸಿದ್ದಾರೆ. ಅವರ ಕಾವ್ಯವಸ್ತು ಬಹುಬಗೆಯಾದದ್ದು. ಭಾಷೆ ಮತ್ತು ಛಂದಸ್ಸುಗಳ ಅವರ ಸಾಧನೆ ಮಹತ್ತರವಾದದ್ದು.

ಸ್ವಯಂ ನಟರಾಗಿದ್ದ ಹರೀಂದ್ರರು ಭಾರತೀಯ ರಂಗಭೂಮಿಗೆ ಸಲ್ಲಿಸಿದ ಸೇವೆಯೂ ಸ್ಮರಣೀಯ. ಅನೇಕ ನಾಟಕ ಚಳವಳಿಗಳಲ್ಲಿ ಅವರು ಭಾಗಿಯಾಗಿದ್ದರು. ಚಲನಚಿತ್ರ ಪ್ರಪಂಚದಲ್ಲಿಯೂ ಅವರು ಸಕ್ರಿಯವಾಗಿ ಪಾಲುಗೊಂಡಿದ್ದರು. 'ಸಾಹಿಬ್ ಬೀಬಿ ಔರ್ ಗುಲಾಮ್' 'ಬಾವರ್ಚಿ' 'ಆಶೀರ್ವಾದ್' ಮುಂತಾದ ಚಿತ್ರಗಳಲ್ಲಿ ಅವರು ತಮ್ಮ ನಟನೆಯಿಂದಲೂ, ಗೀತರಚನೆಯಿಂದಲೂ ಹೆಜ್ಜೆಗಳನ್ನು ಉಳಿಸಿ ಹೋಗಿದ್ದಾರೆಂದು ಹೇಳುತ್ತಾರೆ. 'ಪದ್ಮಭೂಷಣ' ಪ್ರಶಸ್ತಿ ಪಡೆದಿದ್ದ ಅವರು 'ಅನೇಕ ಗೌರವಗಳಿಗೆ ಪಾತ್ರರಾಗಿದ್ದರು. ದೇಶಗಳನ್ನು ಸುತ್ತಿ ಕೋಶಗಳನ್ನು ಓದಿದ್ದ ಹರೀಂದ್ರನಾಥರು ಪೂರ್ಣ ಜೀವನವನ್ನು ನಡೆಸಿದರೆಂದೇ ಹೇಳಬೇಕು.

ಇದು ನಿಮಗೆ ಗೊತ್ತೆ?

"ಕಬ್ಬಿಣದ ಪರದೆ" - ಇದು ಬಂಡವಾಳಶಾಹಿ ಪತ್ರಿಕೆಗಳು ಸಮಾಜವಾದಿ ಸಮಾಜಗಳ ಬಗ್ಗೆ ಬಳಸುವ ಪದ ಅಂದರೆ ಸಮಾಜವಾದಿ ಜೀವನ ಕ್ರಮ ವಿಶ್ವದ ಇತರ ಭಾಗದಿಂದ ಪ್ರತ್ಯೇಕವಾದ "ಮುಚ್ಚಿದ" ಸಮಾಜ ಎಂಬ ಭಾವನೆ ಹರಡಿಸಲು ಬಳಸುವ ಪದ.

ಈ ಪದವನ್ನು ಮೊದಲು ಬಳಸಿದವರು ಯಾರು? ಅಮೆರಿಕನ್ ಪತ್ರಿಕೆಗಳೇ? ಅಥವಾ ಬ್ರಿಟಿಷ್ ಪತ್ರಿಕೆಗಳೇ? ಎರಡೂ ಅಲ್ಲ. ಹಿಟ್ಲರ್‌ನ ಪ್ರಚಾರ ಮಂತ್ರಿಯಾಗಿ ಕುಖ್ಯಾತನಾದ ಗೊಬೆಲ್ಸ್ ಇದನ್ನು 1945 ರಲ್ಲಿ ಮೊದಲ ಬಾರಿಗೆ ಬಳಸಿದ. ಸೋವಿಯೆತ್ ಕೆಂಪು ಸೇನೆ ವಿಮೋಚನೆಗೊಳಿಸುತ್ತಿದ್ದ ದೇಶಗಳ ಜನರನ್ನು ಹೆದರಿಸಲು ಈ ಪದ ಆತ ಬಳಸಿದ.

ನಂತರ ಇದನ್ನು ವಿಶೇಷವಾಗಿ ಬಳಸಿದವರೆಂದರೆ ಇಂಗ್ಲೆಂಡಿನ ಪ್ರಧಾನ ಮಂತ್ರಿ ವಿನ್‌ಸ್ಟನ್ ಚರ್ಚಿಲ್. ತದನಂತರ ಸಾಮ್ರಾಜ್ಯಶಾಹಿಗಳ ಶಬ್ದಕೋಶದ ಪ್ರಮುಖ ಪದವಾಗಿ ಬಿಟ್ಟ ಇದು ಸಮಾಜವಾದಿ ದೇಶಗಳ ಸುತ್ತ ನಿರ್ಬಂಧ, ವಿಶ್ವದಲ್ಲಿ ಸಮಾಜವಾದದ ಪ್ರಭಾವದ ಬೆಳವಣಿಗೆಗೆ ತಡೆ, ಸಮಾಜವಾದಿ ದೇಶಗಳ ವಿರುದ್ಧ ಬುಡಮೇಲು ಕೃತ್ಯ - ಇದಕ್ಕೆ ಪರ್ಯಾಯ ಪದವಾಗಿ ಮೂಡಿಬಂತು.

ವಾಸ್ತವವಾಗಿ 'ಕಬ್ಬಿಣದ ಪರದೆ' ಸಮಾಜವಾದಿ ದೇಶಗಳಿಂದ ಜನಗಳ ವಿಚಾರಗಳ ಮುಕ್ತ ಹರಿವು ಇತರ ದೇಶಗಳತ್ತ ಸಾಗದಂತೆ ತಡೆದು ಸಮಾಜವಾದಿ ವಿಚಾರಗಳ ಪ್ರಭಾವ ಹರಡದಂತೆ ತಡೆಯಲು ಸಾಮ್ರಾಜ್ಯಶಾಹಿಗಳು ಸೃಷ್ಟಿಸಿದ ಅಪಪ್ರಚಾರದ ಪರದೆ. ಗೊಬೆಲ್ಸ್ ಅದರ ಸೃಷ್ಟಿಕರ್ತ ಸಹಜವಾಗಿಯೆ ಚರ್ಚಿಲ್ ಮತ್ತು ಆತನ ಸಾಮ್ರಾಜ್ಯಶಾಹಿಗಳು ಮತ್ತು ಅದರ ಪ್ರಚಾರಯಂತ್ರ 'ಪರದೆ'ಯ ಉತ್ತರಾಧಿಕಾರಿಗಳು. ನವ ಬೂರ್ಜ್ವಾ ಪತ್ರಿಕೆಗಳು ಯಥಾ ಪ್ರಕಾರ ಅದರ ಕುರುಡು ಕಾಪಿಕೋರರು

ಮೂರ್ತೆದಾರರ (ಹೆಂಡ ಇಳಿಸುವವರ) ಭಾರೀ ಹೋರಾಟ

ಕಳೆದ ಜೂನ್ ಜುಲೈ ದ.ಕ. ಜಿಲ್ಲೆಯಲ್ಲಿ ಭರದ ಚಟುವಟಿಕೆಗಳು ನಡೆಯುತ್ತಿದ್ದು ಜಿಲ್ಲೆಯ ಮಧ್ಯೆ ಅವುಗಳ ದೊಡ್ಡ ಸುದ್ದಿಯಾಗಿ ಬಂದಿವೆ.

ದ.ಕ. ಜಿಲ್ಲೆಯಲ್ಲಿ ಜೂನ್ ಜುಲೈ ತಿಂಗಳು ಜೋರಾಗಿ ಮಳೆ ಸುರಿಯುತ್ತಿದ್ದರೂ ಅಷ್ಟೇ ಬಿರುಸಾಗಿ ನಡೆದ ಚಟುವಟಿಕೆಗಳನ್ನು ಕಾಣಬಹುದಾಗಿದೆ. ಒಂದನೆಯದು ಗ್ರಾಮಾಂತರ ಪ್ರದೇಶದ ಜನರ ಮಧ್ಯೆ ಎದ್ದು ಬಂದಂತಹ ಮೂರ್ತೆದಾರರ ಹೋರಾಟ, ಇನ್ನೊಂದು ನಗರ ಪ್ರದೇಶದ ಕಾರ್ಮಿಕರು, ನೌಕರರು, ವಿದ್ಯಾರ್ಥಿ ಯುವ ಜನರು, ತೀವ್ರ ಪ್ರತಿಭಟನೆ ತೋರಿದ ಸಿಟಿಬಸ್ ದರ 'ಏರಿಕೆ ವಿರುದ್ಧ ಹೋರಾಟ. ಈ ಎರಡೂ ಹೋರಾಟಗಳಿಗೂ ಬಹು ದೊಡ್ಡ ವಿಭಾಗದ ಜನತೆ ಸಕ್ರಿಯವಾಗಿ ಬೆಂಬಲಿಸಿದ್ದು ಜಿಲ್ಲೆಯಲ್ಲಿ ಮೂಡಿ ಬಂದ ಹೊಸ ಬೆಳವಣಿಗೆಯಾಗಿದೆ.

ಮೂರ್ತೆದಾರರ ಭಾರಿ ಹೋರಾಟ:

ಕರ್ನಾಟಕ ಸರಕಾರವು ಶೇಂದಿ ಮಾರಾಟ ನಿಷೇಧ ಮಾಡುವ ಆಜ್ಞೆಯನ್ನು ಹೊರಡಿಸಿದ್ದರಿಂದ, ಮೂರ್ತೆಯನ್ನೇ ನಂಬಿ, ಅದೇ ಕಸುಬಿನಲ್ಲಿ ಬದುಕುತ್ತಿರುವ ಸುಮಾರು ಹತ್ತು ಸಾವಿರಕ್ಕೂ ಮಿಕ್ಕಿದ ಜನರು ಉಪವಾಸಕ್ಕೆ ಬೀಳುವ ಪರಿಸ್ಥಿತಿ ಬಂತು. ಸರಕಾರವು ಒಂದು ಆಜ್ಞೆಯನ್ನು ಹೊರಡಿಸುವಾಗ ಅದರಿಂದ ಸಂಕಷ್ಟಕ್ಕೊಳಗಾಗುವ ಜನ ವಿಭಾಗಕ್ಕೆ ಬದುಕಲು ಬೇಕಾದ ಬದಲಿ ವ್ಯವಸ್ಥೆಯನ್ನು ಮಾಡುವುದು ಒಂದು ಜವಾಬ್ದಾರಿಯುಳ್ಳ ಸರಕಾರದ ಕರ್ತವ್ಯವಾಗಿದೆ. ಆದರೆ ಕರ್ನಾಟಕದ ಕಾಂಗ್ರೆಸ್ (ಐ) ಸರಕಾರವು ಹಾಗೆ ಮಾಡದುದರಿಂದ ಜಿಲ್ಲೆಯಲ್ಲಿ ಮೂರ್ತೆದಾರರ ವಿಭಾಗದ ಮಧ್ಯೆ ಗಂಭೀರ ಸಮಸ್ಯೆ ಉದ್ಭವವಾಗಿದೆ.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ದ.ಕ.ಜಿಲ್ಲಾ ರೈತ ಸಂಘವು ಮೂರ್ತೆದಾರರ ಈ ಸಮಸ್ಯೆಯನ್ನು ಅರ್ಥಮಾಡಿಕೊಂಡು ಮೂರ್ತೆದಾರರ ಪರವಾಗಿ ಪತ್ರಿಕಾ ಹೇಳಿಕೆ ಹೊರಡಿಸಿ 'ಮೂರ್ತೆದಾರರ ಬಗ್ಗೆ ಬದಲಿ ವ್ಯವಸ್ಥೆ ಮಾಡದೆ ಶೇಂದಿ ಮಾರಾಟವನ್ನೇ ನಿಷೇಧಿಸುವ ಸರಕಾರದ ನೀತಿಯನ್ನು ಖಂಡಿಸಿ, ಮೂರ್ತೆದಾರರಿಗೆ ಮೂರ್ತೆ ಮಾಡಿ ಅವರವರೇ ಶೇಂದಿ ಮಾರಾಟ ಮಾಡುವ ಲೈಸನ್ಸ್ ನೀಡಬೇಕೆಂದೂ, ಇದಕ್ಕಾಗಿ ಎಲ್ಲಾ ಮೂರ್ತೆದಾರ ಬಂಧುಗಳು ಸಿದ್ಧರಾಗಿ ಸರಕಾರ ಸರಿಯಾದ ತೀರ್ಮಾನ ಕೊಡದಿದ್ದರೆ ಮೂರ್ತೆದಾರರ ಸಂಪರ್ಕವನ್ನು ಬೆಳೆಸುವ ಕಾರ್ಯಕ್ರಮವನ್ನು ಹಮ್ಮಿ ಕೊಂಡರು.

ಇದೇ ವೇಳೆ ಜಿಲ್ಲೆಯ ಮೂರ್ತೆದಾರರ ಸಂಘವು ಮೂರ್ತೆದಾರರನ್ನು ಈ ದಿಸೆಯಲ್ಲಿ ಜಾಗೃತ ಗೊಳಿಸಿ ಸರಕಾರದ ನೀತಿಯ ವಿರುದ್ಧ ಚಳವಳಿಗೆ ಅವರನ್ನು ಇಳಿಸುವ ಕೆಲಸವನ್ನು ಚುರುಕುಗೊಳಿಸಿ ಸಾಕಷ್ಟು ಪ್ರಚಾರವನ್ನು ನಡೆಸಿತು. ಮತ್ತು ಮೂರ್ತೆದಾರರ ಪರವಾಗಿ ಸರಕಾರಕ್ಕೆ ಹಲವು ಮನವಿಗಳನ್ನು ಸಲ್ಲಿಸಿದ್ದರೂ ಸರಕಾರ ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನೀಡದೆ ಹಾಗೂ ಬದಲಿ ವ್ಯವಸ್ಥೆಯನ್ನು ಮಾಡದಿರುವುದರಿಂದ ತಾ: 22-6-90 ರಂದು ಮೂರ್ತೆದಾರರು ಬೃಹತ್ ಪ್ರದರ್ಶನ ನಡೆಸಿ ಸರಕಾರಕ್ಕೆ ಅಂತಿಮ ಎಚ್ಚರಿಕೆ ನೀಡಲು ತೀರ್ಮಾನಿಸಿದೆ. ಈ ಕಾರ್ಯಕ್ರಮಕ್ಕೆ ಸರ್ವ ಪಕ್ಷಗಳು ಬೆಂಬಲ ನೀಡಬೇಕೆಂದು ಜಿಲ್ಲೆಯ ವಿವಿಧ ರಾಜಕೀಯ ಪಕ್ಷಗಳಿಗೆ ಹಾಗೂ ಸಂಘಟನೆಗಳಿಗೆ ಒಂದು ಪತ್ರವನ್ನು ಅದರ ಕಾರ್ಯದರ್ಶಿ ಶ್ರೀಧರ ಕಲ್ಲಾಡಿಯವರು ಬರೆದು ವಿನಂತಿಸಿದರು. ಈ ಪ್ರಕ್ರಿಯೆಯಲ್ಲಿ ದ.ಕ.ಜಿಲ್ಲಾ ಪ್ರಾಂತ ರೈತ ಸಂಘವು ಒಂದು ಹೇಳಿಕೆ ನೀಡಿ ಈ ಬೃಹತ್ ಪ್ರದರ್ಶನದಲ್ಲಿ ಅದರ ಘಟಕಗಳು ಸಂಪೂರ್ಣ ಬೆಂಬಲ ನೀಡುವಂತೆ ಸೂಚಿಸಲಾಯಿತು.

ತಾರೀಖು 22-6-90 ರಂದು ಮಂಗಳೂರು ನಗರದಲ್ಲಿ ಬೆಳಗಿನಿಂದೇ ಹೊಸ ವಾತಾವರಣ ಮೂಡಿಬರುತ್ತಿತ್ತು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ವಾಹನಗಳ ಮುಖಾಂತರ ಸಹಸ್ರಾರು ಮಂದಿ ಮೂರ್ತೆದಾರರು ಅವರನ್ನು ಬೆಂಬಲಿಸುವ ಜನರೂ ಘೋಷಣೆಗಳನ್ನು ಕೂಗುತ್ತಾ ಮಂಗಳೂರು ನಗರದ ಎತ್ತರದ ಸ್ಥಳವಾದ ಠಾಗೂರ್ ಪಾರ್ಕಿಗೆ ಬಂದು ಸೇರುತ್ತಿದ್ದರು. ಸುಮಾರು ಹನ್ನೊಂದು ಗಂಟೆಗೆ ಠಾಗೂರ್ ಪಾರ್ಕಿನಿಂದ ಬೃಹತ್ ಸಂಖ್ಯೆಯಲ್ಲಿ ಸೇರಿದ್ದ ಮೂರ್ತೆದಾರರ ಮೆರವಣಿಗೆ ಹೊರಟಿತು. ಈ ಮೆರವಣಿಗೆಯ ಮುಂಚೂಣಿಯಲ್ಲಿ ಸಿ.ಪಿ.ಐ.ಎಂ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್ ಜನತಾದಳದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ. ಸಂಜೀವ, ಜನತಾದಳದ ಮಾಜಿ ವಿಧಾನಸಭಾ ಸದಸ್ಯ ಎಂ. ಲೋಕಯ್ಯ ಶೆಟ್ಟಿ, ಸಿ.ಪಿ.ಐ. ಜಿಲ್ಲಾ ಕಾರ್ಯದರ್ಶಿ ಬಿ.ಕೆ.ಕೃಷ್ಣಪ್ಪ, ಮೂರ್ತೆದಾರರ ಸಂಘದ ಕಾರ್ಯದರ್ಶಿ 'ಶ್ರೀಧರ ಕಲ್ಲಾಡಿ, ಶೇಂದಿ ಬಳಕೆದಾರರ ಸಂಘದ ಶ್ರೀ ಸಭಾಪತಿ, ಧನಂಜಯ ಕುಮಾರ್ ಮುಂತಾದವರು ಪಾಲ್ಗೊಂಡಿದ್ದರು ಅದೇ ರೀತಿ ದ.ಕ. ರೈತ ಸಂಘದ ಪದಾಧಿಕಾರಿಗಳು, ಸಿ.ಪಿ.ಐ.(ಎಂ) ಪಕ್ಷದ ಅನೇಕ ಮುಖಂಡರು, ಕಾರ್ಯಕರ್ತರು ಹಾಗೂ ರೈತ ಸಂಘದ ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದ್ದರು. ಅನೇಕ ಮೂರ್ತೆದಾರ ಹಿತೈಷಿ ಬಂಧುಗಳು ಭಾಗವಹಿಸಿದರು. ಈ ಮೆರವಣಿಗೆಯಲ್ಲಿ ಮೂರ್ತೆದಾರರು, ತಮ್ಮ ಕಸುಬಿನ ಉಡುಪಿನಲ್ಲೇ ಮೂರ್ತೆ ಮಾಡುವ ಸಲಕರಣೆಗಳನ್ನು ಹಿಡಿದುಕೊಂಡು ಭಾಗವಹಿಸಿದ್ದು ನಗರದ ಜನತೆಗೆ ದೊಡ್ಡ ಆಕರ್ಷಣೆಯಾಗಿತ್ತು ಠಾಗೂರ್ ಪಾರ್ಕಿನಿಂದ ಜಿಲ್ಲಾಧಿಕಾರಿಗಳು ಕಛೇರಿಗಳ ತನಕ ಘೋಷಣೆಗಳನ್ನು ಕೂಗುತ್ತಾ ಬಂದ ಈ ಮೆರವಣಿಗೆಯನ್ನು ವೀಕ್ಷಿಸಲು ಮಾರ್ಗದ ಎರಡೂ ಬದಿಗಳಲ್ಲಿ ಭಾರೀ ಜನಸ್ತೋಮ ಸಾಲಾಗಿ ನಿಂತಿತ್ತು. ಜಿಲ್ಲಾಧಿಕಾರಿಗಳ ಕಛೇರಿ ಇದಿರು ಮೆರವಣಿಗೆಗಾರರು ಸುತ್ತ ಸೇರಿ ಪ್ರದರ್ಶನ ನಡೆಸಿದರು. ಮತ್ತು ಸಭೆಯಲ್ಲಿ ಮೂರ್ತೆದಾರರ ಬೇಡಿಕೆಗಳನ್ನು ಸಾರ್ವಜನಿಕರ ಮುಂದೆ ಸಂಘದ ಅಧ್ಯಕ್ಷರಾದ ಶ್ರೀಧರ ಕಲ್ಲಾಡಿಯವರು ಓದಿ ಹೇಳಿ ಬಳಿಕ ಜಿಲ್ಲಾಧಿಕಾರಿಗಳ ಮುಖಾಂತರ ಸರಕಾರಕ್ಕೆ ಅರ್ಪಿಸಲಾಯಿತು. ಜುಲೈ 1 ನೇ ತಾರೀಕಿನೊಳಗೆ ಬದಲಿ ವ್ಯವಸ್ಥೆ ಮಾಡದಿದ್ದರೆ ಮೂರ್ತೆದಾರರು ಮೂರ್ತೆ ಮಾಡಿ ಅವರವರೇ ಶೇಂದಿ ಮಾರಾಟ ಮಾಡಲಾಗುವುದೆಂದು ಸರಕಾರಕ್ಕೆ ಎಚ್ಚರಿಕೆ ನೀಡಲಾಯಿತು.

ಬಳಿಕ ಮೂರ್ತೆದಾರರ ಚಳುವಳಿಗೆ ಬೆಂಬಲ ನೀಡಿ ವಿವಿಧ ರಾಜಕೀಯ ಪಕ್ಷಗಳ ಹಾಗೂ ಶೇಂದಿ ಬಳಕೆದಾರರ ಸಂಘ, ಮೂರ್ತೆದಾರರ ಸಂಘಗಳ ಮುಖಂಡರು ಭಾಷಣ ಮಾಡಿ ಮೂರ್ತೆದಾರರ ಐಕ್ಯ ಹೋರಾಟಕ್ಕೆ ಸರ್ವ ಬೆಂಬಲವನ್ನು ವ್ಯಕ್ತಪಡಿಸಿದರು.

ಮೂರ್ತೆದಾರರನ್ನು ಈ ಚಳುವಳಿಯಿಂದ ದಾರಿ ತಪ್ಪಿಸಲು ಹಾಗು ಅವರು ಸಂಘಟಿತರಾಗಿ ಸರಕಾರದ ವಿರುದ್ಧವಾಗಿ ಹೋರಾಡದಿರಲು ಜಿಲ್ಲೆಯ ಕಾಂಗ್ರೆಸ್ ಮುಖಂಡರು. ಹಾಗು ಮಾಜಿ ಉಪಮಂತ್ರಿ ಸಚಿವರಾದ ಜನಾರ್ಧನ್ ಪೂಜಾರಿಯವರು ತಾರೀಖು 22 ರ ಪ್ರದರ್ಶನದಲ್ಲಿ ಭಾಗವಹಿಸಬಾರದೆಂದೂ ಸರಕಾರದಿಂದ ಅವರ ಸಮಸ್ಯೆಗೆ ಪರಿಹಾರ ನೀಡಲಾಗುವುದೆಂದು ಹೇಳಿಕೆ ನೀಡಿ ಅವರನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸಿದರೂ ಮೂರ್ತೆದಾರರ ಸಂಘ ಈ ಬಗ್ಗೆ ದೃಢವಾಗಿ ನಿಂತುದರಿಂದಲೂ ಜಿಲ್ಲೆಯ ಎಲ್ಲಾ ವಿರೋಧ ಪಕ್ಷಗಳೂ ಬೆಂಬಲ ಸಾರಿದ್ದರಿಂದಲೂ ಮೂರ್ತೆದಾರರ ಈ ಪ್ರದರ್ಶನವು ಭಾರೀ ಯಶಸ್ವಿಯಾಗಿ ನಡೆಯಿತು.

ಜುಲೈ ಒಂದರಿಂದ ಮೂರ್ತೆದಾರರು ಮೂರ್ತೆಯನ್ನು ಮುಂದುವರಿಸಿದ್ದು ತೆಗೆದ ಶೇಂದಿಯನ್ನು ಅವರವರೇ ಮಾರಾಟ ಮಾಡುವ ಚಳವಳಿ ಈಗ ಮುಂದುವರಿಯುತ್ತಿದೆ. ಸರಕಾರದ ಅಧಿಕಾರಿಗಳ ಕಡೆಯಿಂದ ಬೆದರಿಕೆ ಬರುತ್ತಿದ್ದರೂ ಮೂರ್ತೆದಾರರು ವಿಚಲಿತರಾಗದೆ ಐಕ್ಯದಿಂದ್ದಾರೆ.

ಸಿಟಿ ಬಸ್ ದರ ಏರಿಕೆ ವಿರುದ್ಧ ಹೋರಾಟ:

ಮಂಗಳೂರಿನ ಖಾಸಗಿ ಸಿಟಿ ಬಸ್ ಮಾಲಿಕರು ವಿಪರೀತ ಟಿಕೆಟ್ ದರ ಏರಿಸಿದುದರಿಂದ ಎಲ್ಲಾ ವಿಭಾಗದ ಜನರು ತೀರಾ ಸಂಕಷ್ಟಕ್ಕೆ ಒಳಗಾಗಿ ಬಸ್ ಮಾಲೀಕರ ಈ ನಿಯಂತ್ರಣವಿಲ್ಲದ ಬಸ್ ದರ ಏರಿಕೆಯನ್ನು ಖಂಡಿಸಿದ್ದಾರೆ.

ದ.ಕ. ಜಿಲ್ಲಾ ಪತ್ರ

ನರರ ಸಾರಿಗೆಗೆ ವಿವಿಧ ಸ್ಟೇಜುಗಳಿಗೆ 25 ರಿಂದ 40 ಪೈಸೆಯವರೆಗೂ ಗ್ರಾಮಾಂತರ ಸಾರಿಗೆಗೆ 25 ರಿಂದ 65 ಪೈಸೆಯವರಿಗೂ ಏರಿಸುದದರಿಂದ ಬಸ್ ಪ್ರಯಾಣಿಕರು ಬೇರೆ ಬೇರೆ ರೀತಿಯಲ್ಲಿ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಲು ಮುಂದಾದರು ಜನತೆಯ ಅತೃಪ್ತಿಯನ್ನು ಹಾಗು ದರ ಏರಿಕೆಯ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಈ ಬಸ್ ದರ ಏರಿಕೆಯನ್ನು ಪ್ರತಿಭಟಿಸಬೇಕೆಂದು ಸಿ.ಪಿ.ಐ. (ಎಂ) ದ.ಕ. ಜಿಲ್ಲಾ ಸಮಿತಿಯು ತಾರೀಖು 10-7-90 ರಂದು ಸೇರಿದ ಜಿಲ್ಲಾ ಸಮಿತಿ ಸಭೆಯಲ್ಲಿ ನಿರ್ಧರಿಸಿತು.

ಬಸ್ ದರ ಏರಿಕೆಯ ಪ್ರಥಮ ದಿನವಾದ 5-7-90 ರಂದು ಅದೇ ರೀತಿ 10-7-90 ರಂದು ಡಿ.ವೈ.ಎಫ್.ಐ. ಪರವಾಗಿ ಬಸ್ ತಡೆ ಕಾರ್ಯಕ್ರಮನ್ನು ನಡೆಸಿ ಹಲವಾರು ಕಾರ್ಯಕರ್ತರು ಬಂಧನಕ್ಕೊಳಗಾಗಿದ್ದಾರೆ. ಇದು ಸಾರ್ವಜನಿಕರ ಮಧ್ಯೆ ಪ್ರಚಾರವಾಗಿ ತುಂಬಾ ಪರಿಣಾಮ ಬೀರಿದೆ.

ಸಿ.ಪಿ.ಐ.(ಎಂ) ಪಕ್ಷದ ಜಿಲ್ಲಾ ಸಮಿತಿಯು ಪತ್ರಿಕಾ ಹೇಳಿಕೆ ನೀಡಿ. ಬಸ್ ಮಾಲೀಕರು. ಸಿಟಿ ಬಸ್ ದರವನ್ನು ಕೂಡಲೇ ಇಳಿಸದಿದ್ದರೆ ತಾರೀಕು 13-7-90 ರಂದು ಸಾಮೂಹಿಕ ಬಸ್ ತಡೆ ಚಳುವಳಿಯನ್ನು ನಡೆಸಲಾಗುವುದೆಂದು ಎಚ್ಚರಿಕೆ ನೀಡಲಾಯಿತು ಇದರೊಂದಿಗೆ ಈ ಕಾರ್ಯಕ್ರಮ ಯಶಸ್ವಿ ರೀತಿಯಲ್ಲಿ, ವಿಶಾಲ ರೀತಿಯಲ್ಲಿ ನಡೆಸಲು ಕಾರ್ಮಿಕರಿಗೂ ನೌಕರರಿಗೂ ವಿದ್ಯಾರ್ಥಿ ಯುವಜನರಿಗೂ ಹಾಗೂ ಸಾರ್ವಜನಿಕರಿಗೂ ಕರೆ ನೀಡಿ ಈ ಚಳುವಳಿಯಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾ ಸಮಿತಿ ಪರವಾಗಿ ವಿನಂತಿಸಲಾಯಿತು. ಈ ಮಧ್ಯೆ ಮಂಗಳೂರು ನಗರದ ಹಾಗೂ ಆಸುಪಾಸಿನ ಗ್ರಾಮಗಳ ವಿವಿಧ ಪ್ರದೇಶಗಳಲ್ಲಿ ಜನರು ವಿವಿಧ ರೀತಿಯಲ್ಲಿ ಪ್ರತಿಭಟನೆಯನ್ನು ಕೊಡಲು ಆರಂಭಿಸಿದರು ದಿನೇ ದಿನೇ ಈ ಪ್ರತಿಭಟನೆ ತೀವ್ರಗೊಳುತ್ತಾ ಬಂತು. ತಾರೀಖು 13ರ ಸಿ.ಪಿ.ಐ(ಎಂ) ಬಸ್ ತಡೆ ಚಳುವಳಿಗೆ ಬೆಂಬಲ ನೀಡಿ, ಸರ್ವ ಕಾಲೇಜು ವಿದ್ಯಾರ್ಥಿಗಳ ಸಂಘದಿಂದ ಮತ್ತು ವಿವಿಧ ಯುವಜನ ವಿದ್ಯಾರ್ಥಿ ಸಂಘಟನೆಯಿಂದ ಹಾಗು ಇತರ ಸಂಘಗಳಿಂದ ಬೆಂಬಲ ವ್ಯಕ್ತಪಡಿಸಿದ ಹೇಳಿಕೆಗಳು ಪತ್ರಿಕೆಗಳಲ್ಲಿ ಪ್ರಕಟವಾಯಿತು ನಗರದಲ್ಲಿ ಪ್ರಕಟವಾಗುವ ಪತ್ರಿಕೆಗಳು ಸಿ.ಪಿ.ಐ(ಎಂ) ಬಸ್ ತಡೆ ಚಳುವಳಿ ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ನೀಡಿವೆ. ಇದರಿಂದಾಗಿ ತಾರೀಖು ಹದಿಮೂರರ ಸಿ.ಪಿ.ಐ(ಎಂ) ಚಳುವಳಿಯು ತೀವ್ರವಾಗುವುದೆಂದು ಅರಿತ ಅಧಿಕಾರಿಗಳು ಈ ಬಗ್ಗೆ ಚರ್ಚಿಸಲು ಮಾಲೀಕರ ಪ್ರತಿನಿಧಿಗಳನ್ನು ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ. ಪ್ರತಿನಿಧಿಗಳನ್ನು ವಿದ್ಯಾರ್ಥಿ ಯುವಜನರ ಪ್ರತಿನಿಧಿಗಳನ್ನು ಕರೆದು ಮಾತುಕತೆ ನಡೆಸಲು ತೀರ್ಮಾನಿಸಿದರು. ಅದರಂತೆ ಪ್ರಥಮ ಸುತ್ತಿನ ಮಾತುಕತೆ ತಾರೀಖು 13-7-90 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಜಿಲ್ಲಾ ಪೊಲೀಸ್ ಅಧಿಕಾರಿಗಳು ಸಾರಿಗೆ ಅಧಿಕಾರಿಗಳು ಸಿ.ಪಿ.ಐ.ಎಂ. ಪರವಾಗಿ ಕೆ.ಆರ್. ಶ್ರೀಯಾನ್. ಕೆ. ಮೂಸಬ್ಬ. ಯು.ಬಿ. ಲೋಕಯ್ಯ ಮೊದಲಾದವರು. ಸಿ.ಪಿ.ಐ. ಪರವಾಗಿ. ಬಿ.ಕೆ.ಕೃಷ್ಣಪ್ಪ. ಹೆಚ್ ಉಮಾನಾಥ ನಾಯಕರವರು ಹಾಗು ಡಿ.ವೈ.ಎಫ್.ಐ ಕಾರ್ಯದರ್ಶಿ ಆರ್. ಜಯಕುಮಾರ್.ಎಸ್.ಎಫ್.ಐ. ಹಾಗು ಸರ್ವ ವಿದ್ಯಾರ್ಥಿ ಸಂಘಗಳ ಹಾಗು ಇತರ ಕೆಲ ಪ್ರತಿನಿಧಿಗಳು ಭಾಗವಹಿಸಿದ್ದರು. ಬಸ್ ದರವನ್ನು ಇಳಿಸಬೇಕಾದ ಬಗ್ಗೆ ಸೂಚನೆಗಳನ್ನು ಜಿಲ್ಲಾಧಿಕಾರಿಗಳು ಬಸ್ ಮಾಲೀಕರ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಕರೆದು ಅವರ ಮುಂದಿಟ್ಟರು. ಅವರು ಇದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಲು 2 ದಿನಗಳ ಕಾಲಾವಕಾಶವನ್ನು ಕೇಳಿದ್ದರಿಂದ ಈ ಮಾತುಕತೆಯನ್ನು ಜಿಲ್ಲಾಧಿಕಾರಿಯವರು ತಾ: 16-7-90 ಕ್ಕೆ ಮುಂದುವರಿಸಿದರು. ಅಂದು ನಡೆದ ಮಾತುಕತೆಯಲ್ಲಿ ದೀರ್ಘ ಚರ್ಚೆ ನಡೆದು ಒಂದು ಒಪ್ಪಂದಕ್ಕೆ ಬರಲಾಗಿದೆ. ಬಸ್ ಮಾಲಿಕರು 'ಏರಿಸಿದ ದರದಲ್ಲಿ ವಿವಿಧ ಸ್ಟೇಜುಗಳಿಗೆ 10 ರಿಂದ 30 ಪೈಸೆ ತನಕ ದರ ಇಳಿಸುವ ತೀರ್ಮಾನವಾಯಿತು.

ಸಿ.ಪಿ.ಐ. (ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ ಕೆ.ಆರ್. ಶ್ರೀಯಾನರು ಒಂದು ಹೇಳಿಕೆ ನೀಡಿ ಜನತೆಯ ಪ್ರತಿಭಟನೆಯ ಫಲವಾಗಿ ಬಸ್ ದರ ಏರಿಕೆಯನ್ನು ಕಡಿಮೆಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಯವರು ಕರೆದ ಸಭೆಯಲ್ಲಿ ಆದ ಒಪ್ಪಂದದಂತೆ ಯೋಜಿತ ಬಸ್ ತಡೆ ಚಳುವಳಿಯನ್ನು ರದ್ದು ಪಡಿಸಲಾಗಿದೆಯೆಂದು ತಿಳಿಸಿ ಕಾರ್ಯಕ್ರಮಕ್ಕೆ ಬೆಂಬಲಿಸಿ ಸಹಕರಿಸಲು ಮುಂದೆ ಬಂದ ಕಾರ್ಮಿಕರಿಗೂ ವಿದ್ಯಾರ್ಥಿ ಯುವಜನರಿಗೂ ಹಾಗೂ ಸಾರ್ವ ಜನಿಕರಿಗೂ ಪತ್ರಿಕಾ ಹೇಳಿಕೆಯ ಮೂಲಕ ಅಭಿನಂದಿಸಿದ್ದಾರೆ.

ಸಿಟಿ. ಬಸ್. ದರ ಏರಿಕೆ ಆದ ಜುಲೈ 5 ರಿಂದ ಆರಂಭವಾದ ಈ ಪ್ರತಿಭಟನಾ ಚಳವಳಿ ವಿವಿಧ ರೂಪದಲ್ಲಿ ಸುಮಾರು 10 ದಿನಗಳ ತನಕವೂ ಮುಂದುವರಿದಿದ್ದು ಸಿ.ಪಿ.ಐ. (ಎಂ) ಹಾಕಿದ ಕಾರ್ಯಕ್ರಮದ ಪರಿಣಾಮವಾಗಿ ಇದು ಒಂದು ಮುಕ್ತಾಯ ಹಂತಕ್ಕೆ ತಲುಪುವಂತಾಯಿತು.



ನಿಮ್ಮ ಪ್ರಶ್ನೆ - ನಮ್ಮ ಉತ್ತರ

0 1857 ಪ್ರಥಮ ರಾಷ್ಟ್ರೀಯ ಚಳುವಳಿಯ ಹಿನ್ನೆಲೆ?

—ಎನ್.ಎಸ್.ಸಿಂಬರಣಿ, ಪುಟ್ಟಳ್ಳಿ

0 ಭಾರತ ಪ್ರಥಮ ಸ್ವತಂತ್ರ ಸಂಗ್ರಾಮ ಚಳುವಳಿ ವಿಫಲವಾಗಲಿಕೆ ಕಾರಣವೇನು?

-- ಹೆಸರು ಬೇಡವೇ?! ಗುಲ್ಬರ್ಗಾ

★ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆರ್ಥಿಕ ರಾಜಕೀಯ ಮಸಲತ್ತುಗಳ ವಿರುದ್ಧ ಎದ್ದ ದಂಗೆ! ಇದರಲ್ಲಿ ಭಾಗವಹಿಸಿದ್ದ ವರ್ಗಗಳೆಂದರೆ ರೈತಾಪಿ ವರ್ಗ ಮತ್ತು ಸಣ್ಣ ಪುಟ್ಟದಿಂದ ಹಿಡಿದು ದೊಡ್ಡ ಅರಸೊತ್ತಿಗೆ ಕಳೆದುಕೊಳ್ಳಲು ಆರಂಭಿಸಿದ್ದ ಪಾಳೆಯಗಾರಿ ವರ್ಗ. ಇದರ ನಾಯಕತ್ವ ವಹಿಸಿದ್ದು ಪಾಳೆಯಗಾರಿ ವರ್ಗ. ಇದರಲ್ಲಿ ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ ಬ್ರಿಟಿಷ್ ಸೈನ್ಯದ ಸಿಪಾಯಿಗಳು ಮತ್ತು ಭಾರತೀಯ ರಾಜರ ಸೈನಿಕರು ರೈತ ವರ್ಗದಿಂದ ಬಂದವರೇ ಇದು ಭಾರತದ ಪಾಳೆಯಗಾರಿ ವರ್ಗ ಬ್ರಿಟಿಷರ ವಿರುದ್ಧ ನಡೆಸಿದ ಮೊದಲ ಮತ್ತು ಕೊನೆಯ ಹೋರಾಟ. ಅದು ತನ್ನ ವರ್ಗಹಿತ ಕಾಪಾಡಿಕೊಳ್ಳಲು (ತನ್ನ ರಾಜಕೀಯ, ಆರ್ಥಿಕ ಸವಲತ್ತು ಉಳಿಸಿಕೊಳ್ಳಲು) ಹೋರಾಡಿತು. ಆದರೆ ಭಾರತದ ಪಾಳೆಯಗಾರಿ ಶಿಥಿಲ ಆರ್ಥಿಕತೆ, ಸೈನ್ಯಬಲ ಬ್ರಿಟಿಷ್ ಬಂಡವಾಳಶಾಹಿ ಆರ್ಥಿಕತೆ, ಸೈನ್ಯಬಲಕ್ಕೆ ಸಾಟಿಯಾಗಿರಲಿಲ್ಲ. ಪಾಳೆಯಗಾರಿ ವ್ಯವಸ್ಥೆ ಬಂಡವಾಳಶಾಹಿ ವ್ಯವಸ್ಥೆಯ ಪ್ರಾಬಲ್ಯದೆದುರು ತಲೆಬಾಗಬೇಕಾಯಿತು.

0 ರಾಮಜನ್ಮ ಭೂಮಿ- ಬಾಬ್ರಿ ಮಸೀದಿ ವಿವಾದ ಕೋರ್ಟಿಗೆ ಒಪ್ಪಿಸಿರುವುದು ಸರಿಯಷ್ಟೆ. ಆದರೆ ಕೋರ್ಟಿಗೆ ಒಪ್ಪಿಸುವ ಬದಲು ಇಂತಹವರದೇ ಎಂದು ಯಾಕೆ ಹೇಳಬಾರದು?

— ಕೆ.ಎನ್. ಪಾಪಣ್ಣ, ಕುಂದಲಗುರ್ಕಿ, ಶಿಡ್ಲಘಟ್ಟ

★ ಏಕೆಂದರೆ ರಾಮ ಎಲ್ಲಿ ಹುಟ್ಟಿದ್ದು ಎಂದು ಯಾರಿಗೂ ಗೊತ್ತಿಲ್ಲ. ಅಯೋಧ್ಯೆಯಲ್ಲಿ 'ರಾಮ ಇಲ್ಲೇ ಇದೇ ಜಾಗದಲ್ಲಿ ಹುಟ್ಟಿದ್ದು' ಎಂದು ಹೇಳಿಕೊಳ್ಳುವ ನಾಲ್ಕು ಸಾವಿರ 'ರಾಮಮಂದಿರ' ಗಳಿವೆಯಂತೆ. ಚಾರಿತ್ರಿಕವಾಗಿ ರಾಮ ಎಂಬ ರಾಜ ಅಯೋಧ್ಯೆಯಲ್ಲಿಯೇ ಹುಟ್ಟಿದ್ದನೆ? ಅಯೋಧ್ಯೆಯೇ ಹೌದಾದರೆ ಆಗಿನ ಅಯೋಧ್ಯೆ ಈಗಿನ ಅಯೋಧ್ಯೆಯೇ - ಎಂಬಿತ್ಯಾದಿ ಪ್ರಶ್ನೆಗಳಿಗೆ ಚಾರಿತ್ರಿಕ ಪುರಾವೆಗಳಿಲ್ಲ. ಸದ್ಯಕ್ಕೆ ವಿವಾದಗೊಳಪಟ್ಟಿರುವ ಜಾಗ ಬಾಬ್ರಿ ಮಸೀದಿಯ ಟ್ರಸ್ಟ್‌ಗೆ ಸೇರಿದ್ದಂತೆ. ಸದ್ಯಕ್ಕೆ ಪಕ್ಕದ 'ರಾಮ ಮಂದಿರ'ದ ಮ್ಯಾನೇಜ್ ಮೆಂಟ್ ಈ ಜಮೀನು ತಮಗೆ ಸೇರಿದ್ದು ಎಂದು ವಾದಿಸುತ್ತಿದ್ದಾರೆ. ಆದ್ದರಿಂದ ಹೆಚ್ಚು ಕಡಿಮೆ ಇದು ಒಂದು ಜಮೀನು ಒಡೆತನದ ವಿವಾದ. ಈ ವಿವಾದದಲ್ಲಿ ಭಾರತದ ಎರಡು ಪ್ರಮುಖ ಧರ್ಮಗಳ ಜನತೆಯ ಧಾರ್ಮಿಕ ಭಾವನೆಗಳೂ ಸೇರಿರುವುದರಿಂದ ಇದನ್ನು ಕೋರ್ಟಿನಂತಹ ನಿರ್ವಿವಾದವಾದ ಸಂಸ್ಥೆ ನಿರ್ಧರಿಸುವುದು ಹೆಚ್ಚು ಉಚಿತ. ಸರಕಾರ ನಿರ್ಧರಿಸಿದರೆ ಅದಕ್ಕೆ ಕೋಮು ಬಣ್ಣ ಹಚ್ಚುವ ಸಾಧ್ಯತೆ ಇರುವುದರಿಂದ ಎರಡೂ ಪಕ್ಷಗಳ ಮಾತುಕತೆ ಮೂಲಕ ಅಥವಾ ಅದು ಸಾಧ್ಯವಾಗದಿದ್ದರೆ ಕೋರ್ಟ್ ತೀರ್ಪನ್ನು ಒಪ್ಪುವ ಮೂಲಕ ಮಾತ್ರ ಈ ಸಮಸ್ಯೆ ಬಗೆಹರಿಯಲು ಸಾಧ್ಯ.

ಸಾಲಮನ್ನಾ - ಇತ್ತೀಚಿನ ದಿನಗಳಲ್ಲಿ ಬಹಳ ಸುದ್ದಿಯಲ್ಲಿರುವ ಪದ. ಭಯ ಮಿಶ್ರಿತ ವಿರೋಧ ಪ್ರಾಮಾಣಿಕ ಮನಸ್ಸುಗಳನ್ನೂ ತಟ್ಟಿರುವ ಸುದ್ದಿ. 'ಸಾಲಮನ್ನಾ' ಬೇಡಿಕೆಯ ಹಿಂದಿನ ನೈಜ ಕಳಕಳಿ, ತತ್ವ ಏನು? ಏಕೆ ಈ ಬೇಡಿಕೆಗೆ ಅಷ್ಟೊಂದು ಸ್ಪಂದನ? ರೈತರನ್ನು ವಿಷವೃತ್ತದಿಂದ ಬಿಡುಗಡೆ ಮಾಡಬಹುದಾದ ಪ್ರಜಾಸತ್ತಾತ್ಮಕ ಕ್ರಮ ಇದು.

-ಜಿ. ಮಣಿ ಇಲ್ಲಿ ವಿವರಿಸಿದ್ದಾರೆ.

'ವಿಷ ವೃತ್ತ' ದಿಂದ ಹೊರಕ್ಕೆ ಅಥವಾ ಸಾಲಮನ್ನಾ

ಭಾರತೀಯ ರೈತನ ಬಗ್ಗೆ ಒಂದು ಹೇಳಿಕೆ ಬಹುಕಾಲದಿಂದ ಪ್ರಚಲಿತವಿದೆ. "ಆತ ಸಾಲದಲ್ಲೇ ಹುಟ್ಟುತ್ತಾನೆ. ಸಾಲದಲ್ಲೇ ಬದುಕುತ್ತಾನೆ. ಮತ್ತು ಸಾಲದ ಪರಂಪರೆಯನ್ನೇ ಬಿಟ್ಟು ಸಾಯುತ್ತಾನೆ." ಈ ಹೇಳಿಕೆ ಕೆಲವರಿಗೆ ಉತ್ಪ್ರೇಕ್ಷೆ ಎನಿಸಬಹುದಾದರೂ ನಿಜದಲ್ಲಿ ಅದು ವಾಸ್ತವದ ನಿರೂಪಣೆ. ಅನುವಂಶೀಯವಾಗಿ ಸಾಲದ ಹೊರೆಯನ್ನು ಪಡೆಯುವ ರೈತರು ನಮ್ಮಲ್ಲಿ ಇಂದಿಗೂ ಅಸಂಖ್ಯ ಈ ಕೊರತೆಯಿಂದ ರೈತ ಬಿಡುಗಡೆ ಹೊಂದ ಬೇಕೆಂದು ಪ್ರಜ್ಞೆಯ ಕೂಗು 'ಸಾಲ ಮನ್ನಾ'ದ ಬೇಡಿಕೆ.

ಇತ್ತೀಚಿನ ದಿನಗಳಲ್ಲಿ 'ಸಾಲ ಮನ್ನಾ' ದೊಡ್ಡ ಸುದ್ದಿಯಾಗಿದೆ. ಅದಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ್ದು ಸಾಲದ ಹೊರೆಯ ಸಮಸ್ಯೆ. ಬೃಹತ್ ರೈತ ಚಳುವಳಿಗಳನ್ನು ಹುಟ್ಟು ಹಾಕುತ್ತಿರುವುದು ಜನತೆ ಇದಕ್ಕೆ ಸ್ಪಂದಿಸುವ ರೀತಿಯನ್ನು ತೋರುತ್ತದೆ. 'ರೈತರ ಸಾಲ ಮನ್ನಾ' ಒಂದು ಗಮನ ಸೆಳೆವ ವಿಷಯವಾಗಿ ನಿರ್ಲಿಪ್ತ ಸುದ್ದಿಗಳನ್ನು ನೀಡುತ್ತಿವೆ. ಕೆಲವು ಕಡೆ ದುರ್ಬಲವಾದ ಸಮರ್ಥನೆ, ಇನ್ನೂ ಕೆಲವು ಕಡೆ ಪ್ರಬಲವಾದ ವಿರೋಧ ಕಂಡು ಬರುತ್ತಿರುವುದು. ಬ್ಯಾಂಕಿಂಗ್ ವಲಯಗಳಲ್ಲಿ, ಬ್ಯಾಂಕ್ ಸಹಕಾರ ಸಂಘ ಮೊದಲಾದ ಸಂಸ್ಥೆಗಳ ಮೂಲಕ ಸಾಲನೀಡುವ ವ್ಯವಸ್ಥೆಯನ್ನೇ ಇದು ನಾಶಗೊಳಿಸುತ್ತದೆ. ಈ ಸಾಲ ನೀಡಿಕೆಯ ನೈತಿಕ ತಳಹದಿಯೇ ಹಾಳಾಗಿ ಹೋಗುತ್ತದೆಂಬ ಭಯ ಮಿಶ್ರಿತ ವಿರೋಧ ಕಂಡುಬರುತ್ತಿದೆ! ಸಾಲ ಮನ್ನಾದ ವಿರುದ್ಧ ಕೆಲವು ಬೌದ್ಧಿಕ ಕಸರತ್ತುಗಳನ್ನಂತೂ ನಾವು ಕಾಣಬಹುದು. ಇಂತಹ ಸಂದರ್ಭದಲ್ಲಿ ರೈತರ ಸಾಲಮನ್ನಾ ಬಗೆಗಿನ ಬೇಡಿಕೆಯ ಹಿಂದಿನ ನೈಜ ಕಳಕಳಿ ಮತ್ತು ತಾತ್ವಿಕತೆಯನ್ನು ಅರ್ಥ ಮಾಡಿಕೊಳ್ಳುವ ಅವಶ್ಯಕತೆಯಿದೆ. ಈ ಮವಿಲ್ಲದಿದ್ದಲ್ಲಿ ಸುತ್ತಮುತ್ತಲೂ ಪಸರಿಸಿಕೊಳ್ಳುತ್ತಿರುವ ಅರೆ ಬರೆ ವಿಚಾರಗಳು ಪ್ರಾಮಾಣಿಕ ಮನಸ್ಸುಗಳಲ್ಲೂ ಗೊಂದಲವುಂಟು ಮಾಡುತ್ತವೆ. ಭಾರತದ ಕೃಷಿಯ ಸಮಸ್ಯೆಗಳು ಹಲವಾರು. ಇವುಗಳಲ್ಲಿ ಹಲವು.. ಸಾಲದೊಂದಿಗೆ ತಳಕು ಹಾಕಿಕೊಂಡಿವೆ. ಈ ಸಮಸ್ಯೆಗಳು ರೈತನನ್ನೂ ಸಾಲದ ವಿಷವೃತ್ತಕ್ಕೆ ನೂಕುತ್ತವೆ. ಒಮ್ಮೆ ಈ ವಿಷ ವೃತ್ತದೊಳಕ್ಕೆ ಹೋದ ರೈತ ಅದರಿಂದ ಹೊರಬರುವ ಸಾಧ್ಯತೆಗಳು ತೀರಾ ಕಡಿಮೆ.

ಕೃಷಿಗೆ ನೀರು ಅವಶ್ಯಕ. ಆದರೆ ನಮ್ಮ ದೇಶದಲ್ಲಿನ ಸಾಗುವಳಿ ಜಮೀನಿನಲ್ಲಿ ಮೂರನೇ ಎರಡಂಶಕ್ಕಿಂತಲೂ ಹೆಚ್ಚಿನ ಜಮೀನು ಮಳೆಯ ಆಶ್ರಯದಲ್ಲೇ ಇದೆ. ನಿಧಾನಗತಿಯಲ್ಲಿ ಪೂರ್ಣಗೊಳ್ಳುತ್ತಿರುವ ನೀರಾವರಿ ಯೋಜನೆಗಳು ಸುಮಾರು 55 ಮಿಲಿಯ ಹೆಕ್ಟೇರು ಜಮೀನಿಗೆ ಮಾತ್ರ ನೀರುಣಿಸಬಲ್ಲವು. ಮಾನ್ಸೂನ್ ತರುವ ಮಳೆಯನ್ನು ನಂಬಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ 'ಮಳೆ ಬಂದರೆ ಬೆಳೆ ಬೆಳೆಯಾದರೆ ಬದುಕು' ಎಂಬ ಪರಿಸ್ಥಿತಿ. ಮಳೆಯಾಗದೆ ಬೆಳೆ ಬಾರದ ವರ್ಷ ಉಪಜೀವನಕ್ಕೆ, ಮುಂದಿನ ಬೆಳೆಗೆ ಸಾಲವೇ ಗತಿ. ಒಮ್ಮೆ ಸಾಲಪಡೆದ ಮೇಲೆ ಅದಕ್ಕೆ ಬಡ್ಡಿ ತೆತ್ತು ಮುಗಿಯುವುದೇ ಇಲ್ಲ. ಇನ್ನೊಂದು ಬರಗಾಲ ಬಂದರೆ ಮತ್ತೆ ಹೆಚ್ಚಿನ ಸಾಲ. ಹಾಗೇ ವಿಷವೃತ್ತ ಆಳವಾಗುತ್ತಲೇ ಹೋಗುತ್ತದೆ. ಕೃಷಿಯನ್ನೇ ನಂಬಿರುವ ರೈತ ಈ ಪರಿಸ್ಥಿತಿಯಲ್ಲಿ ಅಸ್ಥಿರವಾಗುತ್ತಾನೆ. ಬಾಗಿಲಲ್ಲೇ ಹುನ್ನಾರ ಹಾಕಿ ಕಾಯುವ ಬರಗಾಲವೇ ಆತನ ಯೋಗಕ್ಷೇಮ ನೋಡಿಕೊಳ್ಳುವ ಅಲ್ಪ ಸ್ವಲ್ಪ ಆಸ್ತಿಯನ್ನು ತನ್ನ ಜೀವನವುಳಿಸಿಕೊಳ್ಳುವ ಸಲುವಾಗಿ ಅಡವಿಡಬೇಕಾಗುತ್ತದೆ, ಮಾರಬೇಕಾಗುತ್ತದೆ. ಬೆಳೆ ಬೆಳೆವ ಹುಮ್ಮಸ್ಸಿನಿಂದ ಸಾಲ ಪಡೆದಿದ್ದರೆ ಆ ಸಾಲ ತೀರಿಸಬೇಕಾದರೆ 'ಗಂಡ ಸತ್ತ ದುಃಖದೊಡನೆ ಮೊಂಡು ಕತ್ತಿಯ ನೋವು ಸೇರಿದಂತಾಗುತ್ತದೆ.

ಭೂಸಂಪತ್ತಿನ ಕೇಂದ್ರೀಕರಣ

ದೇಶದ ಕೆಲವೇ ಭೂಮಾಲಿಕರ ಕೈಗಳಲ್ಲಿ ಬಹುತೇಕ ಭೂಮಿಯ ಒಡೆತನವಿರುವುದೂ ಇನ್ನೊಂದು ಗಂಭೀರ ಸಮಸ್ಯೆ ಬೂರ್ಜ್ವಾ ಭೂಮಾಲಕ ವರ್ಗಗಳು ಆಡಳಿತ ಸೂತ್ರ ಹಿಡಿದಿರುವಾಗ ಅದರ ನೀತಿಗಳು ಆ ವರ್ಗಗಳಿಗೆ ಮಾತ್ರ ಲಾಭದಾಯಕವಾಗುವಂತೆ ಇರುತ್ತವೆ. ಕೃಷಿ ಲಾಭದಾಯಕವಾಗುವುದು ಭೂ ಮಾಲಕರಿಗೆ ಮಾತ್ರವೇ ಹೊರತು ಬಡ ರೈತನಿಗಲ್ಲ. ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿಯನ್ನು ಉದ್ದಿಮೆಯ ರೀಪಾದಿಯಲ್ಲಿ ನಡೆಸಲು ಬೇಕಾಗುವ ಸಂಪನ್ಮೂಲಗಳು ಅವರಿಗೆ ಮಾತ್ರ ಲಭ್ಯ. ಸರ್ಕಾರದಿಂದ ಒದಗಿಬರುವ ಹಲವು ರಿಯಾಯಿತಿಗಳ ಅನುಭವಿಗಳೂ ಅವರೇ. ಸಣ್ಣ ಮತ್ತು ಮಧ್ಯಮ ರೈತರ ಹೆಸರಿನಲ್ಲಿ ಸವಲತ್ತುಗಳನ್ನು ಕಬಳಿಸಿ ಹಾಕುವ ರಾಜಕೀಯ ಪ್ರಭಾವವೂ ಅವರಿಗಿದೆ. ಇಂತಹ ಸಂದರ್ಭಗಳಲ್ಲೆಲ್ಲಾ ಬಡ ರೈತರಿಗೆ ಹಾನಿಯಾಗುತ್ತದೆ. ಇದೇ ಪ್ರಮಾಣದಲ್ಲಿ ಲಾಭ ಭೂಮಾಲಕ ವರ್ಗಗಳಿಗೆ ಆಗುತ್ತದೆ.

ಕೃಷಿ ಉತ್ಪನ್ನಗಳ ಮಾರುಕಟ್ಟೆ ಅಸ್ಥಿರವಾದುದು. ಬೇಗ ನಾಶ ಹೊಂದುವ ಗುಣ ಹೊಂದಿರುವ ಬಹುತೇಕ ಕೃಷಿ ಉತ್ಪನ್ನಗಳನ್ನು ಬಹಳಕಾಲ ಶೇಖರಿಸಿಡುವಂತಿಲ್ಲ. ಆದ್ದರಿಂದ ಮಾರುಕಟ್ಟೆಗಳಲ್ಲಿ ಬೆಲೆಗಳ ಏರುಪೇರು ನಡೆಯುತ್ತಲೇ ಇರುತ್ತದೆ. ಬೆಲೆಗಳು ಡೋಲಾಯಮಾನ ಪರಿಸ್ಥಿತಿಯಲ್ಲಿರುವಾಗ ರೈತ ತನ್ನ ಉತ್ಪನ್ನದ ಬೆಲೆಯನ್ನು ತಾನು ನಿರ್ಧರಿಸಲಾರದ ಸಿಗುವಷ್ಟನ್ನು ಮಾತ್ರ ಆತ ಪಡೆಯಬೇಕು. ಇಂತಹ ಪರಿಸ್ಥಿತಿಗೆ ಒಳಪಟ್ಟ

> ಎಲ್ಲೂ ಸಾಲ ದೊರೆಯದೇ ಬೆಳೆ ಬೆಳೆವಂತಿಲ್ಲ. ಬೆಳೆ ಬೆಳೆಯದೇ ಸಾಲ ತೀರುವಂತಿಲ್ಲ. ಇದು ಆಕ್ಟೋಪಸ್ ಹಿಡಿತ.

ರೈತ ಅವನತಿಯತ್ತಲೇ ಸಾಗುತ್ತಾನೆ ಹೊರತು ಉನ್ನತಿಯತ್ತಲ್ಲ. ರೈತ ತಾನು ಬೆಳೆಯಲು ಮಾಡಿದ ಖರ್ಚಿಗಿಂತಲೂ ಕಡಿಮೆ ಬೆಲೆಗೆ ತನ್ನ ಉತ್ಪನ್ನವನ್ನು ಮಾರುವ ಸಂದರ್ಭಗಳು ಹಲವಾರಿವೆ. ಇಂತಹ ಪರಿಸ್ಥಿತಿಗಳು ಮತ್ತೆ ರೈತವನ್ನು ಸಾಲದ ಕೂಪಕ್ಕೆ ತಳ್ಳುತ್ತವೆ.

ಒಮ್ಮೆ ಸಾಲದ ಕೂಪಕ್ಕೆ ಬಿದ್ದ ರೈತನಿಗೆ ಮತ್ತೆ ಸಾಲದ ಅವಶ್ಯಕತೆ ಹೆಚ್ಚಾಗುತ್ತದೆ. ಮುಂದಿನ ಬೆಳೆಯನ್ನು ಬೆಳೆಯಲು ಆತನಿಗೆ ಬಂಡವಾಳ ಬೇಕು. ಕೃಷಿಗೆ ಮುಖ್ಯವಾದ ಬೀಜ, ಗೊಬ್ಬರ ನೀರು ಇತ್ಯಾದಿಗಳಿಗಾಗಿ ಆತನಿಗೆ ಬಂಡವಾಳ ಬೇಕು. ಈ ಬಂಡವಾಳ ಸಕಾಲದಲ್ಲಿ ದೊರಿತರೆ ಮಾತ್ರ ಪ್ರಯೋಜನ. ಆದರೆ ನಮ್ಮ ರೈತ ಸುಸ್ತಿದಾರ. ಆತ ತಪ್ಪಿತಸ್ಥ. ಆತನಿಗೆ ಸಾಲ ನೀಡುವವರು ಯಾರು? ಆತ ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು? ಎಲ್ಲೂ ಸಾಲ ದೊರೆಯದೇ ಬೆಳೆ ಬೆಳೆವಂತಿಲ್ಲ. ಬೆಳೆ ಬೆಳೆಯದೇ ಸಾಲ ತೀರುವಂತಿಲ್ಲ. ಇದು ಆಕ್ಟೋಪಸ್ ಹಿಡಿತ.

ಇಂತಹ ಪರಿಸ್ಥಿತಿಯ ಲಾಭ ಪಡೆಯುವ ಸಲುವಾಗೇ ಹುಟ್ಟಿಕೊಂಡಿರುವವರು ಗ್ರಾಮೀಣ ಪ್ರದೇಶದ ಖಾಸಗಿ ಲೇವಾದೇವಿದಾರರು. ಇಕ್ಕಟ್ಟಿನ ಸ್ಥಿತಿಯಲ್ಲಿ ಸಿಕ್ಕಿಕೊಂಡ ರೈತನ ಅಸಹಾಯಕತೆಯ ಲಾಭ ಪಡೆದು,

ಕೃಷಿ ಮತ್ತು ಗ್ರಾಮೀಣ ಸಾಲ "ಅಕ್ಕಿಯೂ ಖರ್ಚಾಗಬಾರದು. ಅಕ್ಕನ

> ಈ ಯೋಜನೆ ಕಾರ್ಯರೂಪಕ್ಕೆ ಬರುವಲ್ಲಿ ತೆಗೆದುಕೊಳ್ಳುತ್ತಿರುವ ಸಮಯ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೊಟ್ಟೆಯ ಮೇಲಿನ ಹೊಡೆತವಾಗುತ್ತಿದೆ. ಸಾಲಮನ್ನಾ ಆಗದೆ ಪುನಃ ಸಾಲ ಸಿಗುವಂತಿಲ್ಲ. ಸಾಲ ಸಿಗದೆ ಬೇಸಾಯ ಮಾಡುವಂತಿಲ್ಲ. ಬೇಸಾಯ ಮಾಡದೇ ಇದ್ದ ಮೇಲೆ ಬರುವ ಕಷ್ಟಕೋಟಲೆಗಳ ಪರಂಪರೆಯ ಬಗ್ಗೆ ಬೇರೆ ಹೇಳಬೇಕಿಲ್ಲ.

ಕೃಷಿ ಮತ್ತು 'ಗ್ರಾಮೀಣ ಸಾಲಮನ್ನಾ ಯೋಜನೆ ಮೇ 15 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ಬಂದಿದೆ. ಮಾರ್ಚಿಯಲ್ಲೇ ಲೋಕಸಭೆಯಲ್ಲಿ ಮಂಡಿಸಲ್ಪಟ್ಟ ಆದಾಯ ವ್ಯಯ ಪತ್ರದಲ್ಲೇ ಇದರ ಪ್ರಸ್ತಾಪ ಬಂದರೂ ನಿಧಾನಗತಿಯಲ್ಲಿ ರೂಪು ರೇಖೆ ಪಡೆಯುತ್ತಿದ್ದ ಈ ಯೋಜನೆ ಭೂಮಾಲಿಕ ವರ್ಗಗಳ ಒತ್ತಡಗಳಿಗೆ ಪಕ್ಕಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರವೆಂಬ ಮಿತಿಯನ್ನು ಹರಿದು ಹಾಕಿ ಎಲ್ಲ ವರ್ಗದ ರೈತರಿಗೆ ಇದರ ಲಾಭ ಲಭ್ಯವೆಂದು ಬಾಜಾಬಜಂತ್ರಿಯಾದ ಕೂಡಲೇ ನಾಗಾಲೋಟದಿಂದ ಬ್ಯಾಂಕುಗಳಿಗೆ ಬಂದು ತಲುಪಿದೆ.

ಮೊದಲು ಯೋಜನೆ, ಅನಂತರ ಅದಕ್ಕೆ ತಿದ್ದುಪಡಿ, ಜೊತೆಗೆ ರಾಜ್ಯ ಮಟ್ಟದ ಬ್ಯಾಂಕರುಗಳ ಸಭೆಯಲ್ಲಿ ನೀಡಿದ ಸ್ಪಷ್ಟನೆಗಳು ಮತ್ತು ಕಾರ್ಯ - ನಿದರ್ಶನಗಳು ಹೀಗೆ ಬ್ಯಾಂಕುಗಳಿಗೆ ಸುತ್ತೋಲೆಗಳು ಬರುತ್ತಲೇ ಇವೆ. ಇಷ್ಟೊಂದು ಸುತ್ತೋಲೆಗಳ ನಡುವೆಯೂ ಗೊಂದಲಗಳ ಮಹಾಪೂರವೇ ಬಂದಿದೆ. ಬ್ಯಾಂಕುಗಳ ಲೆಕ್ಕ ಪುಸ್ತಕಗಳ ಲವಲೇಶ ಮಾತ್ರವೂ ಜ್ಞಾನವಿಲ್ಲದವರು ಹವಾ ನಿಯಂತ್ರಿತ ಕೊಠಡಿಯಲ್ಲಿ ಕುಳಿತು ಬರೆದಿರುವುದು ಇದೆಂಬುದು ಮೇಲ್ನೋಟಕ್ಕೇ ಗೊತ್ತಾಗಿ ಬಿಡುತ್ತದೆ. ಚುನಾವಣಾ ಭರವಸೆಯನ್ನು ಈಡೇರಿಸುವುದಕ್ಕೆ, ಸರ್ಕಾರದ ಮೇಲೆ ತೀವ್ರ ಒತ್ತಡವಿತ್ತು. 'ಅಕ್ಕಿಯೂ ಖರ್ಚಾಗಬಾರದು ಅಕ್ಕನ ಮಗಳೂ ಬಡವಾಗಬಾರದು'. ಎಂಬ ಧೋರಣೆಯಿಂದ ರೂಪಿಸಿದಂತಿದೆ ಈ ಯೋಜನೆ. ಆದ್ದರಿಂದಲೇ ಇಷ್ಟೊಂದು ಗೊಂದಲಗಳು. ವಿಷಾದದ ಸಂಗತಿಯೆಂದರೆ ಈ ಎಲ್ಲ ಗೊಂದಲ ಗಳ ನಡುವೆಯೂ ದೊಡ್ಡ - ರೈತ ಭೂಮಾಲಕರು ತಮ್ಮ ಹಿತಾಸಕ್ತಿ ಮಾತ್ರ ಪೂರೈಸುವಂತೆ ನೋಡಿಕೊಳ್ಳಲು ಶಕ್ತರಾಗಿರುವುದು.

ಸಾಮೂಹಿಕ ಹೋರಾಟಗಳ ಫಲದ ಹೆಚ್ಚಿನ ಭಾಗವನ್ನು ಅಲ್ಪ ಸಂಖ್ಯಾತರಾದ ಇವರು ಬಳಸುತ್ತಿದ್ದಾರೆ.

ತರ್ಕರಹಿತವಾಗಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳಿಗೆ ಅನ್ವಯವಾಗುವಂತೆ ಜಾರಿಗೆ ಬಂದಿರುವ ಈ ಯೋಜನೆ ಕಾರ್ಯರೂಪಕ್ಕೆ ಬರುವಲ್ಲಿ ತೆಗೆದುಕೊಳ್ಳುತ್ತಿರುವ ಸಮಯ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೊಟ್ಟೆಯ ಮೇಲಿನ ಹೊಡೆತವಾಗುತ್ತಿದೆ. ಸಾಲಮನ್ನಾ ಆಗದೆ ಪುನಃ ಸಾಲ ಸಿಗುವಂತಿಲ್ಲ ಸಾಲ ಸಿಗದೆ ಬೇಸಾಯ ಮಾಡುವಂತಿಲ್ಲ ಬೇಸಾಯ ಮಾಡದೇ ಇದ್ದ ಮೇಲೆ ಬರುವ ಕಷ್ಟಕೋಟಲೆಗಳ ಪರಂಪರೆಯ ಬಗ್ಗೆ ಬೇರೆ ಹೇಳಬೇಕಿಲ್ಲ

ಸಾಲಮನ್ನಾ ಎಲ್ಲ ವರ್ಗದ ರೈತರಿಗೆ ಲಭ್ಯ.

ಈ ಯೋಜನೆಯಲ್ಲಿ ಸೇರಿರುವ ಒಂದು ವಿಧಿ ಅದಷ್ಟು ಶ್ರೀಮಂತರ ಪರವಾಗುವಂತೆ ಮಾಡಿದೆ ಈಗಿನ ಲೋಪ್ಯಕ ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಾಧ್ಯಕ ಸಾಲಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿಗೆ ಪಡೆದ ಸಾಲದ ಪ್ರಮಾಣವೇ ಜಾಸ್ತಿ ದೊಡ್ಡದಾಗಿದೆ. ಹತ್ತು ಸಾವಿರಕ್ಕಿಂತ ಹೆಚ್ಚು ಸಾಲ ಪಡೆದಿರುವವರು ಬಹಳ ದೊಡ್ಡ ರೈತ - ಭೂಮಾಲಕರುಗಳು. ಕಂಟ್ರಾಕ್ಟರ್ ಸಾಲಗಳೂ ಅರ್ಹ ಸಾಲಗಳು ಯೋಜನೆಯಂತೆ 2.10.86 ರಂದು ಸುಸ್ತಿಯಾದ ಸಾಲ ಅರ್ಹ ಸಾಲ ಅಥವಾ 1.4.86 ರ ನಂತರ ಪಡೆದು, 2.10.86ರಿಂದ 2.10.89 ರ ಒಳಗೆ ಸುಸ್ತಿಯಾಗಿದ್ದ ಎರಡು ವರ್ಷ ಆಣೆ ವಾರಿಯಂತೆ ಆರಾಣೆಗಿಂತಲೂ ಕಡಿಮೆ ಬೆಳೆಯಾಗಿದ್ದರೆ ಅಂತಹ ಸಾಲಗಳ ಕೆಲವು ನೂರು ರೂಪಾಯಿಗಳಾದರೆ ಭೂಮಾಲಕರ ಸಾಲ ಹತ್ತಕ್ಕೂ ಹೆಚ್ಚು ಸಾವಿರ ರೂ ಗಳು ಹಾಗೇ ಸುಸ್ತಿಯಾದರೆ ಸಣ್ಣ ರೈತನದು ಕೆಲವು ಕಂತುಗಳು ಸೇರಿ ಒಂದೆರಡು ಸಾವಿರವಾದೀತು. ಆದರೆ ಬಂಡವಾಳಿಗ ರೈತನದ್ದು ಒಂದೇ ಕಂತು ಹತ್ತು ಸಾವಿರಕ್ಕೂ ಹೆಚ್ಚು. ಯಾರಿಗೆ ಹೆಚ್ಚು ಲಾಭ?

ಆಣೆ ವಾರಿಯೆಂಬ ಅಡ್ಡಗಾಲು

ಈ ಅಡ್ಡ ಗಾಲು ಈ ಯೋಜನೆಯಲ್ಲಿ ತೂರಿಕೊಂಡಿರುವುದು ಯೋಜನೆಯ ಲಾಭವನ್ನು ಕಡಿಮೆ ಮಾಡಿ ಸರ್ಕಾರಕ್ಕೆ ಉಳಿತಾಯ ಮಾಡಲು ಇದರಲ್ಲೂ ಮತ್ತೊಂದು ಅಧಿಕ ಷರತ್ತು ಸಾಲಗಾರ ಕನಿಷ್ಠ ಎರಡು ವರ್ಷಗಳಲ್ಲಿ ಆರಾಣೆಗಿಂತ ಕಡಿಮೆ ಬೆಳೆ ಪಡೆದು ಬದುಕಿರಬೇಕು. ಬದುಕಿದರೆ 2.10.89 ರೊಳಗೆ ಸತ್ತಿದ್ದರೆ ಈ ಷರತ್ತಿನಿಂದ ವಿನಾಯಿತಿ. ಬೆಳೆ ಕಟಾವು ಪ್ರಯೋಗಗಳಿಂದ ನಿರ್ಧರಿತವಾಗುವ ಬೆಳೆ ಪ್ರಮಾಣ ಅತ್ಯಂತ ಅವೈಜ್ಞಾನಿಕವಾದ ವಿಧಾನದಿಂದ ಆಗುವಂತಹುದ್ದು.

"ಕೊಟ್ಟ ಸಾಲ ಕೊಡುವುದಿಲ್ಲವೆಂದರೆ ದೇಶ ಧರ್ಮ ಉಳಿತ್ಯೆತಾ?"

ಸಾಲಮನ್ನಾ ವಿರುದ್ಧ ಅಪಪ್ರಚಾರದಲ್ಲಿ ಮೇಲಿನ ಈ ತರ್ಕ 'ವಾಕ್ಯ' ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕೇಳಿ ಬರುತ್ತಿದೆ. ಈ ಪ್ರಶ್ನೆ ಅಥವಾ ವಾದವನ್ನು ಮುಂದಿಡುವಾಗ ವ್ಯಕ್ತಿ ಹಿನ್ನೆಲೆಯನ್ನು ಶೋಧಿಸಿ ಹೊರಟರೆ ಅವರು ಲೇವಾದೇವಿಗಾರರಾಗಿರುವುದು ಗೊತ್ತಾಗುತ್ತದೆ. ಹಣದ ದರ್ಪ ಇರುವವನಿಗೆ ವಿಪರೀತ ಬಡ್ಡಿದರದಲ್ಲಿ (ಅಂದರೆ ಶೇ 50 ರಿಂದ 120ರ ವರೆಗೆ) ಸಾಲ ನೀಡಿರುವ ಈತ ತನ್ನ ವೃತ್ತಿಗೆ ಬಲವಾದ ಹೊಡೆತವನ್ನು ಈ ಸಾಲಾಮನ್ನಾದಲ್ಲಿ ಕಾಣುತ್ತಾನೆ . ಸಾಲ ವಿಮುಕ್ತನಾದ ವ್ಯಕ್ತಿ ಲೇವಾದೇವಿಗಾರನ ಹತ್ತಿರ ಸಾಲಕ್ಕಾಗಿ ಸಿಗುವುದಿಲ್ಲ. ಆತನ ವ್ಯವಹಾರ ಇಳಿಮುಖವಾಗುತ್ತದೆ. ಎರಡನೆಯದಾಗಿ ಆತನ ಶೋಷಣಾ ವೃತ್ತಿಯ ನೈತಿಕ ತಳಹದಿಗೆ ಇದು ಬಲವಾದ ಹೊಡೆತ ಕೊಡುತ್ತದೆ.

ಸಾಲಮನ್ನಾ ಮಾಡಿದರೆ ದೇಶ ಉಳಿಯುತ್ತದೆ. ಈತನ (ವೃತ್ತಿ) ಧರ್ಮ ಖಂಡಿತವಾಗೂ ಉಳಿಯುವುದಿಲ್ಲ. ಅದು ಸ್ವಾಗತಾರ್ಹವಲ್ಲವೇ?

'ಸಾಲಮನ್ನಾದ' ವಿರೋಧಿಗಳು ಇನ್ನೊಂದು ವಾದ ಹೂಡುತ್ತಾರೆ. ವಸೂಲಿಯಾಗದ ಸಾಲಗಳನ್ನು ವಜಾ ಮಾಡುವ ವಿಧಾನಗಳು ಹಣಕಾಸು ಸಂಸ್ಥೆಗಳಲ್ಲಿ ಈಗಾಗಲೇ ಪ್ರಚಲಿತದಲ್ಲಿದೆಯಲ್ಲವೇ? ಒಂದು ಕ್ರಮವಿರುವಾಗ ಇನ್ನೊಂದು ಇಂತಹ ಕ್ರಮ ಅವಶ್ಯವೇ? ಈಗಿರುವ 'ಸಾಲವಜಾ' ಮಾಡುವ ಅವಕಾಶ ಬಹಳ ಕ್ಲಿಷ್ಟಕರವಾದ ವಿಧಾನವನ್ನು ಹೊಂದಿದ್ದು ಸುಲಭದಲ್ಲಿ ಎಲ್ಲ ಸಾಲಗಳಿಗೆ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಇದರ ಬಹ್ವಂಶ ಲಾಭ ಈಗ ದೊರೆಯುತ್ತಿರುವುದು ಉದ್ದಿಮೆದಾರ ಖದೀಮರಿಗೆ ಮಾತ್ರ. ಅಲ್ಲೊಬ್ಬ ಇಲ್ಲೊಬ್ಬ ರೈತನಿಗೆ ಈ ಅವಕಾಶ ದೊರೆತಿರಬಹುದಾದರೂ ಅದರ ಸಿಂಹ ಪಾಲು ವ್ಯಾಪಾರಿ/ಉದ್ದಿಮೆ ಸಾಲಗಾರರಿಗೆ ಮಾತ್ರ ದೊರೆತಿದೆ.

ಆತನ ಆಸ್ತಿಯನ್ನೆಲ್ಲ ನಿಕೃಷ್ಟ ಬೆಲೆಗೆ ಲಪಟಾಯಿಸುವ ದಂಧೆ ಅವರದ್ದು. ಇಂದಿಗೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಶೇ 50 ರಿಂದ ಶೇ. 120 ರಷ್ಟು ಭಾರಿ ಬಡ್ಡಿ ದರಗಳಲ್ಲಿ ಸಾಲ ನೀಡುವ 'ಸಾಹುಕಾರರಿದ್ದಾರೆ!!!

ಕಳೆದ ಕೆಲವು ವರ್ಷಗಳಿಂದ ಸತತವಾಗಿ ಬರುತ್ತಿರುವ ಬರಗಾಲ ರೈತನ ಈ ಸಮಸ್ಯೆಗಳನ್ನು ತೀವ್ರಗೊಳಿಸಿದೆ. ದಿನಬಳಕೆಯ ವಸ್ತುಗಳ ಬೆಲೆ ತೀವ್ರವಾಗಿ ಏರಿದೆ. ಕೊಳ್ಳುವ ಶಕ್ತಿ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳ ಭಾರದಡಿ ರೈತನ ಬೆನ್ನೆಲುಬೇ ಮುರಿಯುತ್ತಿದೆ. ಇಂತಹ ಸಂದರ್ಭದಲ್ಲಿ ಸಾಲಮನ್ನಾ' ದ ಬೇಡಿಕೆ ಧ್ವನಿ ಮೂಡಿ ಬಂದದ್ದು. 'ಸಾಲಮನ್ನಾದ' ವಿರೋಧಿಗಳು ಇನ್ನೊಂದು ವಾದ ಹೂಡುತ್ತಾರೆ. ವಸೂಲಿಯಾಗದ ಸಾಲಗಳನ್ನು ವಜಾ ಮಾಡುವ ವಿಧಾನಗಳು ಹಣಕಾಸು ಸಂಸ್ಥೆಗಳಲ್ಲಿ ಈಗಾಗಲೇ ಪ್ರಚಲಿತದಲ್ಲಿದೆಯಲ್ಲವೇ? ಒಂದು ಕ್ರಮವಿರುವಾಗ ಇನ್ನೊಂದು ಇಂತಹ ಕ್ರಮ ಅವಶ್ಯವೇ? ಈಗಿರುವ 'ಸಾಲವಜಾ' ಮಾಡುವ ಅವಕಾಶ ಬಹಳ ಕ್ಲಿಷ್ಟಕರವಾದ ವಿಧಾನವನ್ನು ಹೊಂದಿದ್ದು ಸುಲಭದಲ್ಲಿ ಎಲ್ಲ ಸಾಲಗಳಿಗೆ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಇದರ ಬಹ್ವಂಶ ಲಾಭ ಈಗ ದೊರೆಯುತ್ತಿರುವುದು ಉದ್ದಿಮೆದಾರ ಖದೀಮರಿಗೆ ಮಾತ್ರ. ಅಲ್ಲೊಬ್ಬ ಇಲ್ಲೊಬ್ಬ ರೈತನಿಗೆ ಈ ಅವಕಾಶ ದೊರೆತಿರಬಹುದಾದರೂ ಅದರ ಸಿಂಹ ಪಾಲು ವ್ಯಾಪಾರಿ ಉದ್ದಿಮೆ ಸಾಲಗಾರರಿಗೆ ಮಾತ್ರ ದೊರೆತಿದೆ.

ಸಾಲಮನ್ನಾದಿಂದ ಹಲವು ಲಾಭಗಳಿವೆ. ರೈತರಿಗೆ ಬೇಡಿಯಾಗಿರುವ ಸಾಲ ಮನ್ನಾ ಆದಾಗ ರೈತರ ಬಿಡುಗಡೆಯಾದಂತಾಗುತ್ತದೆ. ಇಂತಹ ಬಿಡುಗಡೆಯಿಂದ ರೈತ ಹೆಚ್ಚಿನ ಹುಮ್ಮಸ್ಸಿನಿಂದ ಸಾಗುವಳಿ ಮಾಡುವುದು ಸಾಧ್ಯವಾದ್ದರಿಂದ ಉತ್ಪಾದನೆ ಹೆಚ್ಚಾಗುತ್ತದೆ.

> ಭಾರತದ ಕೃಷಿಯ ಸಮಸ್ಯೆಗಳು ಹಲವಾರು. ಇವುಗಳಲ್ಲಿ ಹಲವು. ಸಾಲದೊಂದಿಗೆ ತಳಕು ಹಾಕಿಕೊಂಡಿವೆ ಈ ಸಮಸ್ಯೆಗಳು ರೈತನನ್ನು ಸಾಲದ ವಿಷವೃತ್ತಕ್ಕೆ ನೂಕುತ್ತವೆ. ಒಮ್ಮೆ ಈ ವಿಷ ವೃತ್ತದೊಳಕ್ಕೆ ಹೋದ ರೈತ ಅದರಿಂದ ಹೊರಬರುವ ಸಾಧ್ಯತೆಗಳು ತೀರಾ ಕಡಿಮೆ.

ಗ್ರಾಮೀಣ ಪ್ರದೇಶಗಳಲ್ಲಿ ಲೇವಾದೇವಿಗಾರರ ಹಿಡಿತ ಸಡಿಲವಾಗುತ್ತದೆ. ಈ ಹಿಡಿತ ಸಡಿಲಾಗುವುದೆಂದರೆ ಅಷ್ಟರ ಮಟ್ಟಿಗೆ ರೈತರ ಆರ್ಥಿಕ ಸ್ವಾತಂತ್ರ ಹೆಚ್ಚಾಗುತ್ತದೆ. ಇಂದೋ ಅನಧಿಕೃತವಾಗಿ ರೂಢಿಯಲ್ಲಿರುವ ಜೀತ ಪದ್ಧತಿಗೆ ಆಸರೆ ಕಡಿಮೆಯಾಗುತ್ತದೆ. ಭೂಮಿಯ ಮಿತಿಮೀರಿದ ಕೇಂದ್ರೀಕರಣ ತಪ್ಪುತ್ತದೆ. ರೈತ ತನಗಿರುವ ಅಲ್ಪ ಸ್ವಲ್ಪ ಸ್ವತ್ತನ್ನು ಉಳಿಸಿ ಕೊಳ್ಳುವುದರಿಂದ ಆತನ ಜೀವನ ಮಟ್ಟ ಒಮ್ಮೆಲೇ ಕುಸಿಯುವುದಿಲ್ಲ. ಪಾಳೆಯಗಾರಿ ಶಕ್ತಿಗಳ ಹಿಡಿತದಿಂದ ಪ್ರಜಾಸತ್ತಾತ್ಮಕ ಶಕ್ತಿಯ ಬಿಡುಗಡೆಯೂ ಇದರಿಂದ ಸಾಧ್ಯವಾಗುತ್ತದೆ. ಆದ್ದರಿಂದ ಈ ಕ್ರಮ ಪ್ರಜಾಸತ್ತಾತ್ಮಕವಾದದ್ದು ಹೌದು. ಹಣಕಾಸು ಸಂಸ್ಥೆಗಳ ದೃಷ್ಟಿಯಿಂದಲೂ ಇದು ಬಹಳ ಉಪಯುಕ್ತ ಕ್ರಮ. ಬಹಳ ವರ್ಷಗಳಿಂದ ವಸೂಲಿಯಾಗದೇ ಉಳಿದಿರುವ ಸಾಲಗಳು ಈಗ ಮನ್ನಾ ಆಗುತ್ತವೆ. ಈ ಹಣಕಾಸು ಸಂಸ್ಥೆಗಳ ಆರೋಗ್ಯ ಸುಧಾರಿಸುತ್ತದೆ.

...ನ್ನಾ ಯೋಜನೆ, ...ಗಳೂ ಬಡವಾಗಬಾರದು''

ಆದ್ದರಿಂದಲೇ 2.10.86 ರಿಂದ 2.10.89 ರೊಳಗೆ ಎರಡು ವರ್ಷಗಳಲ್ಲಿ ಸರ್ಕಾರ (ಅಂದರೆ ಕಂದಾಯ ಇಲಾಖೆ) ಬೆಳೆಯ ಪ್ರಮಾಣ ಆಣೆಗಿಂತ ಕಡಿಮೆ ಎಂದು ಘೋಷಿಸುವ ಸಾಧ್ಯತೆ ಬಹಳ ಕಡಿಮೆ.

ಮನೆ ಮಠ ಮಾರಿ ಸಾಲ ಸೋಲ ಮಾಡಿ ಸಾಲ ಕಟ್ಟಿದವರಿಗೇನು ಲಾಭ?

ಈ ಪ್ರಶ್ನೆಗೆ ಅಸ್ಪಷ್ಟವಾದ ಸ್ಪಷ್ಟನೆ ಯೋಜನೆಯಲ್ಲಿದೆ. ಕಷ್ಟ ಪಟ್ಟು ಹಣ ಕಟ್ಟಿ ದವನಿಗೆ, ಹೆಂಡತಿಯ ಆಭರಣ, ಮನೆಯಲ್ಲಿದ್ದ ಹೋರಿ, ಹಸು, ಎಮ್ಮೆಗಳನ್ನು ಮಾರಿ (ಅಧಿಕಾರಿಗಳ ದುರಾಕ್ರಮಣಕ್ಕೆ ಹೆದರಿ) ಹಣ ಕಟ್ಟಿದವರಿಗೆ ಆ ಹಣ ವಾಪಸ್ಸು ಮಾಡಲಾಗು ವುದೆ? ಸ್ಪಷ್ಟವಾದದ್ದೇನೂ ಯೋಜನೆಯಲ್ಲಿಲ್ಲ.

ಖಾಸಗಿ ಕ್ಷೇತ್ರದ ಬ್ಯಾಂಕುಗಳಿಂದ ಸಾಲ ಪಡೆದಿದ್ದರೆ ಅದು ರೈತನ ತಪ್ಪೆ?

ಭಾರತೀಯ ರಿಝರ್ವ್ ಬ್ಯಾಂಕಿನ ನಿಯಮಾವಳಿಗಳಂತೆ ಖಾಸಗಿ ವಲಯದ ಬ್ಯಾಂಕುಗಳೂ ಆದ್ಯತೆಯ ವಲಯಕ್ಕೆ ಸಾಲ ನೀಡಬೇಕು. ಆದರೆ ರೈತರು ಹಾಗೆ ಖಾಸಗಿ ವಲಯದ ಬ್ಯಾಂಕುಗಳಿಂದ ಪಡೆದ ಸಾಲಗಳು ಮನ್ನಾಕ್ಕೆ ಅರ್ಹವಲ್ಲ. ಯಾವ ಸೀಮೆಯ ತರ್ಕವಿದು?

ಕೋಷ್ಟಕ

ಷೆಡ್ಯೂಲ್ ವಾಣಿಜ್ಯ ಬ್ಯಾಂಕುಗಳು ರೈತರಿಗೆ ನೀಡಿರುವ ಸಾಲಗಳು (1987 ಜೂನ್ ಕೊನೆಯಲ್ಲಿರುವಂತೆ)

	ರೈತರ ಅಲ್ಪಾವಧಿ ಸಾಲಗಳು		ದೀರ್ಘಾವಧಿ ಸಾಲಗಳು	
ಹಿಡುವಳಿ ಗಾತ್ರ	ಸಾಲದ ಮೊತ್ತ ಕೋಟಿ ರೂ.ಗಳಲ್ಲಿ	ಸಾಲದಸರಾಸರಿ ಗಾತ್ರ ರೂಗಳು	ಸಾಲದ ಮೊತ್ತ ಕೋಟಿ ರೂ. ಗಳಲ್ಲಿ	ಸಾಲದ ಸರಾಸರಿ ಗಾತ್ರ ರೂಗಳಲ್ಲಿ
2.5 ಎಕರೆಗಿಂತ ಕಡಿಮೆ	884.06	2658	797.62	4196
2.5 ರಿಂದ 5 ಎಕರೆಗಳ ನಡುವೆ	804.05	3578	878.81	6022
5 ಎಕರೆಗಳಿಗೆ ಮೇಲ್ಪಟ್ಟು	930.95	5611	3092.28	21233
ಒಟ್ಟು	2619.06	3621	4768.71	9900

ಆಧಾರ: ಭಾರತೀಯ ರಿಝರ್ವ್ ಬ್ಯಾಂಕಿನ ಹಣಕಾಸಿನ ಬಗೆಗಿನ ವರದಿ ನೇ ಸಾಲು ಸಂಪುಟ

ಸೂ: ಹಿಡುವಳಿದಾರರ ಸಂಖ್ಯೆ ದೊಡ್ಡದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ

ಕಾಂ. ಸೂರಿಯವರ ಹೋರಾಟದ ಬದುಕು

ಒಂದು ಸಂದರ್ಶನ


ಸಂದರ್ಶಕರು: ಕಾಂ. ಜಿ.ಎನ್.ನಾಗರಾಜ್

ಕಾಂ. ಸೂರಿಯವರು ಕರ್ನಾಟಕದ ರಾಜಕೀಯ ರಂಗದಲ್ಲಿ ಕಾರ್ಮಿಕರ ವಾಣಿಯನ್ನು ಮೊಳಗಿಸಿದವರು. ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಬೆಳೆದು ಕಾರ್ಮಿಕ ರಂಗವನ್ನು ಹೊಕ್ಕವರು. ಕಾರ್ಮಿಕ ರಂಗದ ಹಲವು ಹೋರಾಟಗಳ ಕಲಿ. ಇವರ ಬದುಕಿನ ಬಗ್ಗೆ ಅನೇಕ ಸಂಗಾತಿಗಳಿಗೆ ಅದಮ್ಯ ಕುತೂಹಲ.

ಕರ್ನಾಟಕದ ಕಾರ್ಮಿಕ ಚಳುವಳಿಯಲ್ಲಿರುವ ಅನೇಕ ಹಿರಿಯ ಕಿರಿಯ ಸಂಗಾತಿಗಳನ್ನು ಕಮ್ಯುನಿಸ್ಟ್ ಚಳುವಳಿ ಸೆಳೆದ ವಿಭಿನ್ನ ಬಗೆಗಳ ಬಗ್ಗೆ ಮಾರು ಹೋದ ನನಗೂ ಕೂಡಾ ಕಾಂ. ಸೂರಿಯವರ ಜೀವನದ ಸೆಲೆಯ ಬಗ್ಗೆ ತಿಳಿಯುವ ಕುತೂಹಲ.

ಕಂಡ ಕಂಡವರನ್ನೆಲ್ಲಾ ನೀವು ಹೇಗೆ ಕಮ್ಯುನಿಸ್ಟರಾದಿರಿ ಎಂದು ಕೇಳುತ್ತ ಹೇಳುತ್ತಾ 'ಸರ್ವರಿಂದೊಂದು ನುಡಿಗಲಿತು' ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯ ರೂಪು ರೇಷೆಗಳನ್ನು ಮನದಲ್ಲಿ ಚಿತ್ರಿಸಿಕೊಳ್ಳ ಹೊರಟ ನನಗೆ ಮೈಸೂರು ಸಂಸ್ಥಾನ ಭಾಗದ, ಕರ್ನಾಟಕದ ರಾಜಧಾನಿ ಬೆಂಗಳೂರಿನ ಮಣ್ಣಿನಲ್ಲಿ ಮಾರ್ಕ್ಸ್ ಬಿತ್ತಿದ ಬೀಜಗಳು ಮೊಳೆತು ಚಿಗುರೊಡೆದ ಬಗೆಗಿನ ಸಾಹಸಗಾಥೆಯ ಕೆಲವು ಪುಟ ಕಾಂ. ಸೂರಿಯವರನ್ನು 'ನೀವು ಹೇಗೆ ಕಮ್ಯುನಿಸ್ಟರಾದಿರಿ' ಎಂದು ಕೇಳಿದರೆ ತಿಳಿಯಬಹುದು. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ ಆಸಕ್ತಿಯಿರುವವರೆಲ್ಲರಿಗೂ 'ಐಕ್ಯರಂಗ' ದ ಮೂಲಕ ತಿಳಿಸಬಹುದು ಎನ್ನಿಸಿತು.

ಆದರೆ ಸೂರಿಯವರನ್ನು ಹಿಡಿಯುವುದೇ ಕಷ್ಟ. ಈ ಕಷ್ಟ ಕರ್ನಾಟಕದ ಅನೇಕ ಸಂಗಾತಿಗಳಿಗೆ, ಚಿರಪರಿಚಿತ. ಇಂತಹ ಕೊಟಲೆಯ ಮಧ್ಯೆ ಕೂಡ 'ಐಕ್ಯರಂಗ'ಕ್ಕೆ ಒಂದು 'ಸಿಟ್ಟಿಂಗ್' ಕೊಟ್ಟಿದ್ದಾರೆ ಕಾಂ. ಸೂರಿ. ಅದರ ಪರಿಣಾಮವನ್ನು ಮುಂದೆ ಓದಿ:



ಪ್ರಶ್ನೆ: ಕಾಂ. ಸೂರಿಯವರೆ, ನಿಮಗೆ ದೇಶದ ರಾಜಕೀಯದ ಅರಿವು, ಸ್ವಾತಂತ್ರ್ಯ ಚಳುವಳಿಯ ಕಾಲದ ಸಂಗ್ರಾಮದ ಅರಿವು ಹೇಗೆ ಮೂಡಿತು?

ಸೂರಿ: ನನಗಾಗ ಹದಿನೆಂಟು ವರುಷ ವಯಸ್ಸು 1941-42 ರ ಪ್ರಕ್ಷುಬ್ಧ ಕಾಲ. ಮೈಸೂರು ಟೊಬ್ಯಾಕೋ ಕಂಪನಿ M.T.C. ಒಂದೆರಡು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ಮುಚ್ಚಿದ ಕಂಪನಿ) ಯ ಲೆಕ್ಕ ಪತ್ರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಅದೇ ಸಮಯದಲ್ಲಿ ರಾಮಸ್ವಾಮಿ ಐಯ್ಯಂಗಾರ್ ಎಂಬ ಒಬ್ಬ ಖಾಸಗಿ ಆಡಿಟರ್‌ರವರ ಬಳಿ ಕೂಡ ಪಾರ್ಟ್ ಟೈ ಕೆಲಸ ಮಾಡುತ್ತಿದ್ದೆ. ಆಗ ಬೆಂಗಳೂರಿನಲ್ಲಿ ಆ ಕಾಲಕ್ಕೆ ಬೆಂಗಳೂರಿನಲ್ಲೆಲ್ಲಾ ಅಲ್ಲೋಲ ಕಲ್ಲೋಲವನ್ನೇ ಉಂಟು ಮಾಡಿದ ಘಟನೆಯೊಂದು ಸಂಭವಿಸಿತು. ಬೆಂಗಳೂರು ಬ್ಯಾಂಕ್ ಎಂಬ ಪ್ರಸಿದ್ಧ ಬ್ಯಾಂಕ್ ದಿವಾಳಿಯಾಯಿತು. ರಾತ್ರೋ ರಾತ್ರಿ ಅದರಲ್ಲಿ ಹಣವಿಟ್ಟಿದ್ದವರೆಲ್ಲಾ ತಮ್ಮ ಇಡುಗಂಟು ಕಳೆದು ಕೊಂಡರು. ಬ್ಯಾಂಕ್ ಮುಂದೆ ನೆರೆದು ಗೋಳಿಟ್ಟರು, ಪರಿತಪಿಸಿದರು, ಉಗ್ರ ಕೋಪ ವ್ಯಕ್ತಪಡಿಸಿದರು.

ಈ ಬ್ಯಾಂಕ್ ಅನ್ನು ನಡೆಸುತ್ತಿದ್ದವರು 24 ಜನ ಡೈರೆಕ್ಟರ್‌ಗಳು. ಈ ಬ್ಯಾಂಕ್‌ನ Liquidation ಆರಂಭವಾಯಿತು. ಅದನ್ನು ನಿರ್ವಹಿಸುವುದಕ್ಕೆ ಮದರಾಸಿನ ಸುಪ್ರಸಿದ್ಧ ವಕೀಲ ಹಾಗೂ ಮುಂದೆ ರಾಜಾಜಿಯ ಸಂಪುಟದಲ್ಲಿ ಕಾನೂನು ಸಚಿವರಾದ ಕೆ. ಬಾಷ್ಯಂರವರನ್ನು ಆಮಂತ್ರಿಸಲಾಯಿತು. ಅವರು ನಾನು ಕೆಲಸ ಮಾಡುತ್ತಿದ್ದ ಆಡಿಟರ್ ರಾಮಸ್ವಾಮಿ ಅಯ್ಯಂಗಾರ್‌ರವರನ್ನು ಲೆಕ್ಕ ಪತ್ರ ಪರಿಶೋಧನೆಗಾಗಿ ನೇಮಿಸಿ ಕೊಂಡರು. ಅವರ ಸಹಾಯಕವಾಗಿ ನಾನು ಈ ಕೆಲಸದಲ್ಲಿ ಭಾಗಿಯಾದೆ.

ಈ ಕೆಲಸ ಬಹಳ ಗುಪ್ತವಾಗಿ ನಡೆಯಬೇಕಾಗಿದ್ದ ಕೆಲಸ. ಒಂದು ಪ್ರತ್ಯೇಕ ಮನೆಯನ್ನು ಬಾಡಿಗೆಗೆ ಪಡೆದು ತಿಂಗಳು ಗಟ್ಟಳೆ ಯಾರೂ ಹೊರ ಹೋಗಲು ಒಳಬರಲು ಬಿಡದ 'ಬಂಧನ'ದಲ್ಲಿ ಈ ಕೆಲಸ ನಡೆಯುತ್ತಿತ್ತು ಆಗ ಭಾಷ್ಯಂರವರು ಸ್ವಾತಂತ್ರ ಚಳುವಳಿಯ ಬಗೆಗೆ, ಸ್ವಾತಂತ್ರ ಚಳುವಳಿಯ ನೇತಾರರ ಬಗೆಗೆ ಹೇಳುತ್ತಾ ಇದ್ದರು. ಗಾಂಧೀಜಿ, ನೆಹರು, ರಾಜಾಜಿ ಇವರುಗಳ ಬಗ್ಗೆ ಅವರ ತ್ಯಾಗದ ಬಗ್ಗೆ ಹೇಳುತ್ತಿದ್ದರು ಬಣ್ಣಿಸುತ್ತಿದರು. ದಂಡಯಾತ್ರೆಯ ಬಗ್ಗೆ ಹೇಳುತ್ತಿದ್ದರು.

ನನ್ನ ತಲೆಯಿಲ್ಲಿ ಗುಂಜಾರವ ಆರಂಭವಾಯಿತು

ಹೀಗಿರುವಲ್ಲಿ 1942 ಆಗಸ್ಟ್ 8 ರಂದು ಹಿಟ್ಲರ್‌ನ ಪಾಶವೀಶಕ್ತಿಯನ್ನು ಬ್ರಿಟನ್, ರಷ್ಯ ಅಮೇರಿಕಾಗಳ ಜೊತೆಗೂಡಿ ಹೋರಾಡುತ್ತಿದ್ದ ಸಮಯದಲ್ಲಿಯೂ ಬ್ರಿಟಿಷರ ವಿರುದ್ಧ ತೀವ್ರ ಸೆಣಸಾಟ ಆರಂಭಿಸಲು ಕಾಂಗ್ರೆಸ್ ನಿರ್ಧರಿಸಿತು. 'ಚಲೇಜಾವ್' ಎಂದು ಘೋಷಣೆ ನೀಡಿದ ಮರು ದಿನವೇ ಗಾಂಧೀಜಿಯನ್ನು ಬಂಧಿಸಲಾಯಿತು. ಅದಕ್ಕೆ ಪ್ರತಿಕ್ರಿಯೆಯಾಗಿ ವಕೀಲ ಭಾಷ್ಯಂರವರು ಒಂದು ಪತ್ರಿಕಾ ಹೇಳಿಕೆ ನೀಡಿ, ಬ್ರಿಟಿಷ್ ಸರಕಾರದ ದಮನಕಾರಿ ನೀತಿಯನ್ನು ಪ್ರತಿಭಟಿಸಿ ನನ್ನ ವಕೀಲಿ ಸನ್ನದನ್ನು (ಪದವಿಯನ್ನು) ಹಿಂತಿರುಗಿಸುತ್ತಿದ್ದೇನೆ. ವಕೀಲಿ ಉದ್ಯೋಗವನ್ನು ಬಹಿಷ್ಕರಿಸುತ್ತೇನೆ ಎಂದು ಹೇಳಿಕೆ ನೀಡಿದರು. ಅದನ್ನು ಪತ್ರಿಕೆಗಳಿಗೆ ಮುಟ್ಟಿಸಿ ಬರಲು ಹೊರಟ ನನ್ನ ತಲೆಯಲ್ಲಿ ಗುಂಜಾರವ ಆರಂಭವಾಯಿತು. "ಇಷ್ಟೊಂದು ಸಂಪಾದನೆಯ ಇಂತಹ ಪ್ರಸಿದ್ಧ ಮನುಷ್ಯನೇ ತನ್ನ ಜೀವನೋದ್ಯೋಗವನ್ನು ಬಿಡಲು ಹೊರಟಿದ್ದಾನೆ ಎಂದ ಮೇಲೆ ನಾನು ಈ ಉದ್ಯೋಗದಲ್ಲಿಯೇ ಮುಂದುವರಿಯುವುದೇ" ಇಡೀ ವಾತಾವರಣ ನನ್ನನ್ನು ಬಡಿದೆಬ್ಬಿಸಿತು. ನಾನೂ ನನ್ನ ನೌಕರಿಯನ್ನು ತೊರೆಯಲು ನಿರ್ಧರಿಸಿದೆ.

ಮುಂದೇನು?

ದೇಶದ ಎಲ್ಲೆಡೆಯಲ್ಲಿ ಕೋಲಾಹಲ ರಾಷ್ಟ್ರ ನಾಯಕರ ಬಂಧನಕ್ಕೆ ಪ್ರತಿಭಟನೆಗಳು. ಉದ್ಯೋಗವನ್ನು ತೊರೆದ ನಾನು ಚಳುವಳಿಯ ಈ ಮಹಾಪೂರದಲ್ಲಿ ಧುಮುಕಿದೆ. ಬೆಂಗಳೂರಿನ ಶಾಲೆ ಕಾಲೇಜುಗಳಿಂದ ವಿದ್ಯಾರ್ಥಿಗಳು ಹೊರ ಬಂದರು. ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸವನ್ನು ತಾತ್ಕಾಲಿಕವಾಗಿ ಮುಗಿಸಿ ಕೆಲಸಕ್ಕೆ ಸೇರಿದ್ದವ ನಾನು. ನನ್ನ ಗೆಳೆಯರ ಜೊತೆಯಲ್ಲಿ ಎಲ್.ಎಂ.ಪಿ. ಕಾಲೇಜಿನ (ವೈದ್ಯಕೀಯದ ಡಿಪ್ಲೋಮಾ ಪದವಿಯ ಶಾಲೆ) ಬಳಿ ಪಿಕೆಟಿಂಗ್ ಮಾಡಲು ಹೋದೆ. ಈ ವಿದ್ಯಾರ್ಥಿ ಪ್ರತಿಭಟನೆಯಲ್ಲಿ ಸೇರಿದವರನೇಕರನ್ನು ಸಾವಿರಾರು ಮಂದಿಯನ್ನು ಬಂಧಿಸಿದರು. ಎಲ್ಲರನ್ನೂ ಮೈಸೂರಿಗೆ ಒಯ್ದರು. ಈ ಇಡೀ ಜೈಲಿನ ತುಂಬಾ ವಿದ್ಯಾರ್ಥಿಗಳು ಸಾವಿರ ಜನಕ್ಕೂ ಹೆಚ್ಚು ವಿದ್ಯಾರ್ಥಿಗಳು.

ಒಂದೂವರೆ ವರ್ಷ ಅವಧಿಯ ಈ ಜೈಲುವಾಸದಲ್ಲಿ ಜೊತೆಗೂಡಿದ್ದವರು ಇಂದು ವಿವಿಧ ಕ್ಷೇತ್ರಗಳಲ್ಲಿ ಪ್ರತಿಭಾನ್ವಿತರಾಗಿ ಬೆಳಗಿದ್ದಾರೆ. ಅದರಲ್ಲಿ ಇಂದಿರಾಗಾಂಧಿಯವರಿಗೆ ಪತ್ರಿಕಾ ಕಾರ್ಯದರ್ಶಿ ಯಾಗಿದ್ದ ಎಚ್.ವೈ. ಶಾರದಾ ಪ್ರಸಾದ್, ಪ್ರಸಿದ್ಧ ಶಿಲ್ಪಿ [illegible] ಎಚ್. ನರಸಿಂಹಯ್ಯ, ಶಾಂತಿ ಮತ್ತು ಸೌಹಾರ್ದತೆ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಎ. ಸೇತುರಾವ್‌ರವರ ಅಲ್ಲದೆ ಹೀಗೆ ಹಲವಾರು ಜನ.

ಜೈಲಿನಲ್ಲಿಯೇ ಪ್ರತಿಭಟನೆ

ಜೈಲುವಾಸವೇನೂ ಶಾಂತಿಯುತವಾದುದಾಗಿರಲಿಲ್ಲ. ಊಟ, ತಿಂಡಿ ಸರಿಯಾಗಿ ಕೊಡುತ್ತಿರಲಿಲ್ಲ. ಜೊತೆಗೆ ಜೈಲು ಅಧಿಕಾರಿಗಳ ದಬ್ಬಾಳಿಕೆ. [illegible]

ಪಾಟ್ನಾದಲ್ಲಿ ಎಡ ಪಕ್ಷಗಳ ಬೃಹತ್ ಧರಣಿ

ಬಿಹಾರದ ಜನತೆ ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಹೊರದೂಡಿ ಜನತಾದಳಕ್ಕೆ ಅಧಿಕಾರ ಒಪ್ಪಿಸಿದರು - ಜನತಾದಳದ ಚುನಾವಣಾ ಭರವಸೆಗಳ ಆಧಾರದ ಮೇಲೆ ಬೆಲೆಯೇರಿಕೆ ತಡೆ, ಜನರಿಗೆ ಪರಿಹಾರ, ನಿರುದ್ಯೋಗಿಗಳಿಗೆ ಉದ್ಯೋಗ ಹಾಗೂ ಉಚ್ಛ ಮಟ್ಟದಲ್ಲಿರುವವರ ಭ್ರಷ್ಟಾಚಾರಕ್ಕೆ ತಡೆ ಆದರೆ ಬಿಹಾರದ ಜನತಾದಳ ಸರಕಾರ ಈ ಭರವಸೆಗಳ ಈಡೇರಿಕೆಗೆ ನಿರ್ದಿಷ್ಟ ಕ್ರಮ ಕೈಗೊಳ್ಳದೆ ದಿಕ್ಕೇಡಿಯಾಗಿ ಹೋಗುತ್ತಿದೆವೆಂಬುದನ್ನು ಅದಕ್ಕೆ ನೆನಪಿಸಲು ಜೂನ್ 25 ರಂದು ಎಡ ಪಕ್ಷಗಳ ನೇತೃತ್ವದಲ್ಲಿ, ಪಾಟ್ನಾ ಸಚಿವಾಲಯದ ಎದುರು ಬೃಹತ್ ಧರಣಿ ನಡೆಯಿತು. ಎಡಪಕ್ಷಗಳ ಎಂ.ಪಿ.ಗಳು, ಎಂ.ಎಲ್.ಎ.ಗಳು, ಮುನಿಸಿಪಾಲಿಟಿ, ಗ್ರಾಮ ಪಂಚಾಯತುಗಳ ಚುನಾಯಿತ ಸದಸ್ಯರು, ಎಡ ಪಕ್ಷಗಳ ಮುಖಂಡರು, ಈ ಪಕ್ಷಗಳ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳ ಮುಖಂಡರು ರಾಜ್ಯದ ಎಲ್ಲಾ ಕಡೆಗಳಿಂದ ಬಂದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು.

ಸಿ.ಪಿ.ಐ.(ಎಂ) ಮುಖಂಡರಾದ ಸುರೇಶ ಶಂಕರ ವಿದ್ಯಾರ್ಥಿ, ಸುಭೋದ ರಾಯ್, ಕೃಷ್ಣಕಾಂತ್‌ಸಿಂಗ್, ರಾಮಾಶ್ರಮ ಪ್ರಸಾದ್, ಸಿ.ಪಿ.ಐ. ಮುಖಂಡರಾದ ಸೂರಜ್ ಪ್ರಸಾದ್, ಮಹಮ್ಮದ್ ಜಲಾಉದ್ದೀನ್, ಜತುರಾಮನ್ ಮಿಶ್ರ, ಫಾರ್ವರ್ಡ್ ಬ್ಲಾಕಿನ ನೃಪೇಂದ್ರ ಕೃಷ್ಣ ಮಹತೋ ಮತ್ತಿತರರು ಧರಣಿ ಕೂಟವನ್ನು ಉದ್ದೇಶಿಸಿ ಮಾತನಾಡುತ್ತಾ ಬಿಹಾರದ ಜನತಾದಳ ಸರಕಾರ ಜನರ ನಿರೀಕ್ಷೆಯಂತೆ ನಡೆದುಕೊಳ್ಳುತ್ತಿಲ್ಲ, ಜನತೆಯ ಮೂಲಭೂತ ಸಮಸ್ಯೆಗಳ ಪರಿಹಾರದತ್ತ ಗಮನವನ್ನು ಇನ್ನೂ ಹರಿಸಿಲ್ಲ, ಇನ್ನೂ ಮಾತಿನಲ್ಲೇ ಇದೆ, ಕೃತಿಗೆ ಇಳಿದಿಲ್ಲ, ಉದ್ಯೋಗ ವಿನಿಮಯ ಕಚೇರಿ ಮೂಲಕ ನೇಮಕಾತಿ ನಿಂತೆ ಹೋಗಿದೆ, 5000 ದಷ್ಟು ಘಟಕಗಳು ಮುಚ್ಚಿವೆ. ಕಲ್ಲಿದ್ದಲು ಉದ್ದಿಮೆಯಲ್ಲಿ, ಟಾಟಾಗಳು ಮತ್ತಿತರರ ಉದ್ದಿಮೆಗಳಲ್ಲಿ ಯಾಂತ್ರೀಕರಣದಿಂದಾಗಿ ಸಾವಿರಾರು ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ಆದರೆ ಸರ್ಕಾರ ಕೈಕಟ್ಟಿಕೂತಿದೆ. ಅಪ್ಪ ಮಾಫಿಯಾಗಳು ನಿರ್ಭಿಡೆಯಿಂದ ಕಾನೂನು-ವ್ಯವಸ್ಥೆ ಉಲ್ಲಂಘಿಸಿ ತಿರುಗಾಡುತ್ತಿದ್ದಾರೆ. ಬಲಗೊಂಡಿದ್ದಾರೆ ಎಂದು ಈ ಮುಖಂಡರು ಸರಕಾರದ ಗಮನಕ್ಕೆ ತಂದರು. ಜನಗಳ ಸಮಸ್ಯೆಗಳ ಪರಿಹರಿಸುವ ರಾಜಕೀಯ ಇಚ್ಛೆಯನ್ನು ಈ ಸರಕಾರ ಇನ್ನೂ ತೋರಿಸಿಲ್ಲ ಎಂದರು.

ಎಡಪಕ್ಷಗಳ ಪರವಾಗಿ ಮುಖ್ಯ ಮಂತ್ರಿಗಳಿಗೆ ಒಂದು ಮನವಿ ಸಲ್ಲಿಸಲಾಯಿತು. ಜೀವನಾವಶ್ಯಕ ಸಾಮಗ್ರಿಗಳನ್ನು ಸರಕಾರೀ ನ್ಯಾಯಬೆಲೆ ಅಂಗಡಿಗಳ ಮೂಲಕ ಕಡಿಮೆ ಬೆಲೆಯಲ್ಲಿ ಒದಗಿಸಬೇಕು, ಇದು ಎಲ್ಲಾ ಮಟ್ಟಗಳ ಸರ್ವಪಕ್ಷ ಸಮಿತಿಗಳ ಉಸ್ತುವಾರಿಯೂ ನಡೆಯಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಜನರಲ್ಲಿ ಅತೃಪ್ತಿ ಬೆಳೆಯುತ್ತಿದೆ, ಕಾಂಗ್ರೆಸ್(ಐ) ಮತ್ತು ಕೋಮುವಾದಿ ಶಕ್ತಿಗಳು ಇದರ ದುರ್ಲಾಭ ಪಡೆಯಲು ಯತ್ನಿಸುತ್ತಿದ್ದಾರೆ. ಕೋಮು ವಿಷ ಹರಡುತ್ತಿದ್ದಾರೆ ತಕ್ಷಣ ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಗಂಭೀರ ಕೋಮು ದಂಗೆಗಳ ರೂಪದಲ್ಲಿ ಅವು ವ್ಯಕ್ತಗೊಳ್ಳಬಹುದು ಎಂದು ಎಡಪಕ್ಷಗಳ ಮುಖಂಡರು ಲಲ್ಲೂ ಪ್ರಸಾದ್‌ಯಾದವ್‌ರ ಸರಕಾರವನ್ನೂ ಎಚ್ಚರಿಸಿದ್ದಾರೆ.

ರಾಜ್ಯದ ಜನಗಳ ಸಮಸ್ಯೆಯ ಪರಿಹಾರದಲ್ಲಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಲು ಎಡ ಪಕ್ಷಗಳು ಮುಂದಾಗಿರುವುದರ ಮೊದಲ ಕಾರ್ಯಕ್ರಮ ಇದಾಗಿತ್ತು. ಮುಖ್ಯ ಮಂತ್ರಿಗಳು ಧರಣಿ ಕೂಟದಲ್ಲಿ ಬಂದು ಮನವಿ ಪತ್ರ ಸ್ವೀಕರಿಸಿ ಜನ ಪರ ಕಾರ್ಯಕ್ರಮಗಳನ್ನು ರೂಪಿಸಿ, ಜ್ಯಾರಿ ಮಾಡುವುದಾಗಿ, ಆದರಲ್ಲಿ ಎಡ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಾಗಿ ಆಶ್ವಾಸನೆಯಿತ್ತರು.

ಬಿ.ಜೆ.ಪಿ.ಗೆ ನೆರವಾದ ಕಾಂಗ್ರೈ ಸಮಯ ಸಾಧಕತೆ

ಕಾಂಗ್ರೆಸ್(ಐ) ಚುನಾವಣೆಗಳಲ್ಲಿ ಸೋತ ನಂತರವಾದರೂ ಪಾಠ ಕಲಿತಿದೆಯೇ? ಹೆಚ್ಚು ಜವಾಬ್ದಾರಿಯಿಂದ ನಡೆಯುತ್ತಿದೆಯೇ! ಇಂತಹ ಲಕ್ಷಣ ಎಲ್ಲೂ ಕಾಣುತ್ತಿಲ್ಲ - ಅದು ಪಂಜಾಬ್ ಸಮಸ್ಯೆಯಾಗಿರಬಹುದು, ಕಾಶ್ಮೀರ ಸಮಸ್ಯೆಯಾಗಿರಬಹುದು. ಮೊದಲಿನಂತೆಯೇ ಅದರ ಬೇಜವಾಬ್ದಾರಿತನ, ಸಮಯ ಸಾಧಕತೆ ಮುಂದುವರಿಯುತ್ತಿದೆ ಎಂಬುದಕ್ಕಂತೂ ಸಾಕಷ್ಟು ನಿದರ್ಶನಗಳು ಕಂಡು ಬರುತ್ತಿವೆ. ಮಧ್ಯಪ್ರದೇಶ'ದಲ್ಲಿ ದೊರೆತ ಇತ್ತೀಚಿನ ನಿದರ್ಶನ ನೋಡಿ.

ಬಿ.ಜೆ.ಪಿ. ಪ್ರಾಬಲ್ಯದ ಮಧ್ಯ ಪ್ರದೇಶ 370 ನೇ ಕಲಮು ರದ್ದುಪಡಿಸಬೇಕೆಂದು ಒತ್ತಾಯಿಸುವ ನಿರ್ಣಯ ಅಂಗೀಕರಿಸಿದ ಸುದ್ದಿ ಈಗಾಗಲೇ ತಿಳಿದಿದೆ. ಆದರೆ ನಿಮಗೆ ಗೊತ್ತಿದೆಯೇ? ಈ 'ಕರಾಮತ್ತಿ'ನ ಶ್ರೇಯಸ್ಸು ಹೋಗಬೇಕಾದ್ದು ಬಿ.ಜೆ.ಪಿ.ಗಿಂತ ಹೆಚ್ಚಾಗಿ ಕಾಂಗ್ರೆಗೆ. ಸುರೇಶ್ ಸೇಠಿ ಎಂಬ ಕಾಂಗ್ರೈ ಸದಸ್ಯ ಈ ಬಗ್ಗೆ ಖಾಸಗೀ ನಿರ್ಣಯವನ್ನು ಮಂಡಿಸಿದರು. ಆಳುವ ಬಿ.ಜೆ.ಪಿ. ಇದರದ್ದೇ ಲಾಭ ಪಡೆದು ವಿಧಾನಸಭೆ ನಿರ್ಣಯವನ್ನು ಅಂಗೀಕರಿಸುವಂತೆ ಮಾಡಿತು. 2/3 ರಷ್ಟು ಬಲವಿದ್ದರೂ ಈ ನಿರ್ಣಯವನ್ನು ತಾನೇ ಅಧಿಕೃತವಾಗಿ ಮಂಡಿಸುವ ಧೈರ್ಯ ಅದಕ್ಕಿರಲಿಲ್ಲ - ದೇಶದಲ್ಲಿ ಕಂಡು ಬಂದ ಸಾರ್ವಜನಿಕಾಭಿಪ್ರಾಯದ ಹಿನ್ನೆಲೆಯಲ್ಲಿ. ಆದರೆ ಸುರೇಶ್ ಸೇಠಿ'ರ ಖಾಸಗೀ ನಿರ್ಣಯ ಅದಕ್ಕೆ ವರದಾನದಂತಾಯಿತು. ಸುರೇಶ್ ಸೇಠಿ ಈ ನಿರ್ಣಯ ಮಂಡಿಸುತ್ತಾ ಬಿ.ಜೆ.ಪಿ. ಒಡ್ಡುವ ವಾದಗಳನ್ನೇ ಒಡ್ಡಿದರು. ಅಷ್ಟೇ ಅಲ್ಲ. ಬಿ.ಜೆ.ಪಿ. ಮುಖಂಡರು ಕೂಡಾ ಸಾರ್ವಜನಿಕವಾಗಿ ಹೇಳಲುಹಿಂಜರಿಯುವ ಕೋಮುವಾದೀ ಮಾತುಗಳನ್ನು ಅಂದು ಕಾಂಗ್ರೈನ ಸುರೇಶ್ ಸೇಠಿ ಸದನದಲ್ಲಿ ಆಡಿದರು.

ವಿರೋಧ ಪಕ್ಷಗಳು ಈ ಖಾಸಗೀ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳುವುದನ್ನು ವಿರೋಧಿಸಿದವು. ಚರ್ಚೆಗೆ ತೆಗೆದುಕೊಂಡಾಗ ಸದನದಿಂದ ಎದ್ದು ಸಭಾತ್ಯಾಗ ಮಾಡಿದರು ನಿಜ. ಸಭಾತ್ಯಾಗ ಮಾಡಿದವರಲ್ಲಿ ಸ್ವಯಂ ನಿರ್ಣಯವನ್ನು ಮಂಡಿಸಿದಾತನೇ ಇದ್ದರು. ನಂತರ ಕಾಂಗ್ರೈ ಆತನನ್ನು ಸಸ್ಪೆಂಡ್ ಮಾಡಿತೆಂಬುದೂ ನಿಜ. ಆದರೆ ಈ ಕ್ರಮ ಎಷ್ಟು ಪ್ರಾಮಾಣಿಕವಾಗಿದೆ ಎಂದು ಪರಿಶೀಲಿಸಿದರೆ ಅದರ ನಿಜ ವೇಷ ಬಯಲಾಗುತ್ತದೆ. ಕಳೆದ ಎರಡು ತಿಂಗಳಿಂದ ಈತ ಹಲವು ವೇದಿಕೆಗಳಿಂದ ಸಾರ್ವಜನಿಕವಾಗಿ 370 ನೇ ಕಲಮನ್ನು ರದ್ದು ಮಾಡಬೇಕೆಂದು ಪ್ರತಿಪಾದಿಸಿದ್ದರು. ತಾನು ಮಂಡಿಸಬೇಕೆಂದಿದ್ದ ನಿರ್ಣಯದ ಬಗ್ಗೆ ರಾಜ್ಯ ಕಾಂಗ್ರೈ ಮುಖಂಡರಿಗೆ ಮೊದಲೇ ಗೊತ್ತಿತ್ತು ಎಂದೂ ಆತ ಪತ್ರಿಕಾ ಸಮ್ಮೇಳನದಲ್ಲಿ ಹೇಳಿಕೊಂಡಿದ್ದಾರೆ. ಆದರೆ ಆತ ನಿರ್ಣಯ ಮಂಡಿಸಿ ಬಿ.ಜೆ.ಪಿ.ಗೆ ನೆರವಾಗುವವರೆಗೆ ಏನೂ ಕ್ರಮ ಏಕೆ ಕೈಗೊಳ್ಳಲಿಲ್ಲ? ಬಿ.ಜೆ.ಪಿ. ಕೋಮುವಾದಿ ಮಾರ್ಗ ಹಿಡಿದರೇ ರಾಜ್ಯದಲ್ಲಿ ಮತ್ತೆ ಅಧಿಕಾರ ಪಡೆಯಲು ಸಾಧ್ಯ ಎಂಬ ಸಮಯ ಸಾಧಕತೆ ಇದಕ್ಕೆ ಕಾರಣವಲ್ಲವೇ?

ಅಯೋಧ್ಯೆಯ ವಿವಾದ: ವಿಶ್ವ ಹಿಂದೂ ಪರಿಷತ್ 'ದಂಧೆ'

ದೇಶಕ್ಕೆ ಒದಗಿರುವ ದೊಡ್ಡ ಅಪಾಯವಾದ ಕೋಮುಗಲಭೆಗಳು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ಪಿತೂರಿನ ಬಗ್ಗೆ ಕ್ರಮೇಣ ಜಾಗೃತಿ ಬೆಳೆಯುತ್ತಿದ್ದು ರಾಜಕೀಯದಲ್ಲಿ ,ಧರ್ಮವನ್ನು ಬೆರೆಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವ ರಾಜಕೀಯ ಪಕ್ಷಗಳ ಮುಖವಾಡದ ಬಣ್ಣ ಬಯಲು ಮಾಡುವ ಪ್ರಕ್ರಿಯೆ ಶೀಘ್ರವಾಗಿ ಸಾಗಿದೆ. ಇದರಲ್ಲಿ ಎಡಪಕ್ಷಗಳ ಉಪಕ್ರಮ ಮಹತ್ವದ್ದಾಗಿದೆ. ಎಲ್ಲ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದೇ ವೇದಿಕೆಗೆ ತರಲು ಸಿ.ಪಿ.ಐ. (ಎಂ), ಸಿ.ಪಿ.ಐ. ಆರ್.ಎಸ್.ಪಿ. ಮತ್ತು ಫಾರ್ವಡ್ ಬ್ಲಾಕ್ ಮೇ 24 ರಂದು ದಿಲ್ಲಿಯಲ್ಲಿ ನಡೆಸಿದ ಕೋಮುವಾದ ವಿರೋಧಿ ಸಮಾವೇಶ ದೇಶದ ಐಕ್ಯತೆ -

ಸಮಗ್ರತೆ ರಕ್ಷಣೆಯ ಆಂದೋಲನಕ್ಕೆ ಹೊಸ ಹುರುಪು ನೀಡಿದೆ. ಆ ಸಮಾವೇಶ ನೀಡಿದ ಕರೆಯನ್ವಯ ದೇಶಾದ್ಯಂತ ಕಾರ್ಯಕ್ರಮಗಳು ನಡೆಯುತ್ತಿದ್ದು ಕರ್ನಾಟಕ ರಾಜ್ಯ ಸಮಾವೇಶದ ವರದಿಯನ್ನು ಓದಿರುತ್ತೀರಿ...ಈಗ ಬಾಬರಿ ಮಸೀದಿ ರಾಮಜನ್ಮ ಭೂಮಿ ವಿವಾದ ಕೇಂದ್ರವಾದ ಅಯೋಧ್ಯೆ ಇರುವ ಉತ್ತರ ಪ್ರದೇಶದ ರಾಜ್ಯ ಸಮಾವೇಶ ಜುಲೈ15 ರಂದು ನಡೆದಿದ್ದ ಸಂಕ್ಷಿಪ್ತ ವಿವರ ಇಲ್ಲಿದೆ.

ಅಕ್ಟೋಬರ್‌ನಲ್ಲಿ ಅಯೋಧ್ಯೆಯಲ್ಲಿ ರಾಮದೇವಾಲಯವನ್ನು ನಿರ್ಮಿಸುವ ವಿಶ್ವ ಹಿಂದೂ ಪರಿಷತ್‌ನ (ವಿ.ಎಚ್.ಪಿ.) ನಿರ್ಧಾರವನ್ನು ಸಮಾವೇಶ ತೀವ್ರವಾಗಿ ಟೀಕಿಸಿತು. ಆ ನಿರ್ಧಾರ ದೇಶವನ್ನು ಅಸ್ಥಿರಗೊಳಿಸುವ ಪಿತೂರಿ ಎಂದು ವರ್ಣಿಸಿತು.

ದೇಶದೊಳಗೆ

ಕೋಮುವಾದದ ದುಷ್ಟ ಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದಿರುವಂತೆ ಸಮಾವೇಶ ಉದ್ಘಾಟಿಸಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಎಚ್ಚರಿಸಿದರು. ಅಯೋಧ್ಯೆ ವಿವಾದ ಕೇವಲ ಉತ್ತರ ಪ್ರದೇಶಕ್ಕೆ ಸಂಬಂಧಿಸಿದ್ದಲ್ಲ, ಅದೊಂದು ರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿರುವುದಾಗಿ ವಿಶ್ಲೇಷಿಸಿದರು.

ಈ ವಿವಾದವನ್ನು ವಿ.ಎಚ್.ಪಿ. ತನ್ನ ಸಂಕುಚಿತ ಲಾಭಕ್ಕಾಗಿ 'ಒಂದು ದಂಧೆಯನ್ನಾಗಿ 'ಮಾಡಿಕೊಂಡಿದೆ ಎಂದು ಮುಲಾಯಂ ಸಿಂಗ್ ಟೀಕಿಸಿದರು.

ಜನರನ್ನು ಒಡೆಯಲು ಧರ್ಮವನ್ನು ಬಳಸಿಕೊಳ್ಳುತ್ತಿರುವುದು ವಿಷಾದಕರ ಎಂದು ಜನತಾದಳದ ಹಿರಿಯ ನಾಯಕ ಚಂದ್ರಶೇಖರ್ ಹೇಳಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯುರೋ ಸದಸ್ಯ ಹರಿಕಿಶನ್ ಸಿಂಗ್ ಸುರ್ಜಿತ್, ಪಕ್ಷದ ಲೋಕಸಭಾ ಸದಸ್ಯೆ ಸುಭಾಷಿಣಿ ಅಲಿ, ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತ ಮೊದಲಾದವರು ಸಮಾವೇಶದಲ್ಲಿ ಮಾತನಾಡಿದರು.

ತಮಿಳುನಾಡು 'ಸಿಟು' ಸಂಘಟನೆ ಮುಗಿಸಲು ಗೂಂಡಾಗಿರಿ

ಮದರಾಸಿ ತೊರೆಪಾಕಂನಲ್ಲಿರುವ ಇಲೆಕ್ಟ್ರಾನಿಕ್ ಉದ್ಯಮ ಕ್ಷೇತ್ರದ ಆರ್.ಆರ್.ಇ. ಫ್ಯಾಕ್ಟರಿಯ ಕಾರ್ಮಿಕರು ಸಾಮೂಹಿಕವಾಗಿ ಸಿ.ಐ.ಟಿ.ಯು. ಗೆ ಸೇರಿದ ಮೇಲೆ ಆ ಕಾರ್ಮಿಕರಿಗೆ ಆಡಳಿತ ವರ್ಗ ಮತ್ತು ಇತರ ಸಂಘಟನೆಗಳಿಂದ ತೀವ್ರ ಕಿರುಕುಳ ಉಂಟಾಗುತ್ತಿದೆ.

ಹಿಂದೆ ಈ ಫ್ಯಾಕ್ಟರಿಯಲ್ಲಿದ್ದ ಎ.ಐ.ಎ.ಡಿ.ಎಂ.ಕೆ. ನೇತೃತ್ವದ ಸಂಘಟನೆಯಿಂದ ನಿರಾಶರಾದ ಕಾರ್ಮಿಕರು ಈ ವರ್ಷ ಮೇ ತಿಂಗಳಲ್ಲಿ 'ಸಿಟು'ಗೆ ಸೇರಿದ್ದರು. ಇದನ್ನೇ ನೆಪವಾಗಿಸಿದ ಮಾಲಿಕ ಸಂಘಟನೆಯನ್ನು ಮುರಿಯಬೇಕೆಂಬ ಉದ್ದೇಶದಿಂದ ಮೊದಲ ಹೆಜ್ಜೆಯಿಟ್ಟ: 7 ಕಾರ್ಮಿಕರನ್ನು ಕಾನೂನಿಗೆ ವಿರೋಧವಾಗಿ ವರ್ಗಾಯಿಸುವಂತೆ ಮಾಡಿದ. ಇದನ್ನು ವಿರೋಧಿಸಿ 10.5.1990 ರಿಂದ ಮುಷ್ಕರವನ್ನು ಆರಂಭಿಸಲಾಯಿತು. 60 ಮಹಿಳೆಯರು ಸೇರಿದಂತೆ ಒಟ್ಟು 180 ರಷ್ಟಿರುವ ಕಾರ್ಮಿಕರಲ್ಲಿ ಸುಮಾರು 120 ಮಂದಿ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ. ಕೆಲವು ಇಂಟಕ್ ಮುಖಂಡರೂ, ಈ ಹೋರಾಟದಲ್ಲಿ ಭಾಗವಹಿಸಿರುವುದು ವಿಶೇಷವಾಗಿದೆ.

'ನನ್ನ ಬಳಿ ಬಂದೂಕು ಇದೆ. ನಿಮ್ಮನ್ನು ಶೂಟ್ ಮಾಡುತ್ತೇನೆ' ಎಂಬುದು ಚಳುವಳಿ ನಿರತರಿಗೆ ಮಾಲಿಕನ ಬೆದರಿಕೆಯಾಗಿದೆ. ಇಷ್ಟೇ ಅಲ್ಲ, ಆತ ಓರ್ವ ಇಂಟಕ್ ಮುಖಂಡನನ್ನು ಬಳಸಿಕೊಂಡು - ಗೂಂಡಾಗಿರಿ ಮೂಲಕ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸಲು ಪ್ರಯತ್ನಿಸುತ್ತಲೇ ಇದ್ದಾನೆ. ದಿನನಿತ್ಯವೆಂಬಂತೆ ಪೋಲೀಸರ ಮುಂದೆಯೇ ಇಂಥ ಯತ್ನ ಸಾಗುತ್ತಿದೆ. ಮಾಲಿಕ ಬೆದರಿಕೆ ಹಾಕಿರುವ ಬಗ್ಗೆ ಸಂಘಟನೆ ದೂರು ನೀಡಿದರೂ ಪೋಲೀಸರು ಯಾವುದೇ ಕ್ರಮ ಕೈಗೊಳ್ಳದೆ ಕಾರ್ಮಿಕ ವಿರೋಧಿ ಮಾಲಿಕನಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಕಾರ್ಮಿಕ ಅಧಿಕಾರಿಗಳು ಕರೆದ ಸಂಧಾನ ಸಭೆಗಳಿಗೂ ಮಾಲಿಕ ಹಾಜರಾಗುತ್ತಿಲ್ಲ.

ಆರ್.ಆರ್.ಇ. ಫ್ಯಾಕ್ಟರಿಯ ಹೋರಾಟ ನಿರತ ಕಾರ್ಮಿಕರಿಗೆ ಬೆಂಬಲ ಸೂಚಿಸಲು ಸುತ್ತ ಮುತ್ತಲ ಕಾರ್ಖಾನೆಗಳ ಕಾರ್ಮಿಕರು ಹೋರಾಟದ ಶಿಬಿರಕ್ಕೆ ಪ್ರತಿನಿತ್ಯ ಭೇಟಿ ನೀಡುತ್ತಿದ್ದಾರೆ...ಇದೀಗ ಕಾರ್ಮಿಕರು ರಸ್ತೆ ತಡೆ ಚಳುವಳಿ ನಡೆಸಲು ನಿರ್ಧರಿಸಿದ್ದಾರೆ.

ದ್ರಾಕ್ಷಿ ತೋಟ ಕಾರ್ಮಿಕರ ಯಶಸ್ವಿ ಹೋರಾಟ

ಮಧುರೆ ಜಿಲ್ಲೆಯ ಒಂದು ದ್ರಾಕ್ಷಿ ತೋಟದಲ್ಲಿ ದುಡಿಯುತ್ತಿದ್ದ ಸುಮಾರು 100 ಕಾರ್ಮಿಕರಿಗೆ ಹಠಾತ್ತನೆ ಕೂಲಿಯನ್ನು ಕಡಿತಗೊಳಿಸಲಾಯಿತು. ಅಲ್ಲದೆ ಬೇರೆ ಕಡೆಯಿಂದ ಕಾರ್ಮಿಕರನ್ನು ತಂದು ಕೆಲಸ ನಡೆಸಲು ಮಾಲಿಕ ಆರಂಭಿಸಿದ ಇದನ್ನು ವಿರೋಧಿಸಿ ಕಾರ್ಮಿಕರು ಮೂರು ವಾರ ಕಾಲ ಹೋರಾಟ ನಡೆಸಿದರು. ಈ ಸಂಧರ್ಭದಲ್ಲಿ ಮಾಲಿಕರ 'ಎಂಜಲು ನಾಯಿಗಳಿಂದ' ಚಳುವಳಿ ನಿರತರು ಸಾಕಷ್ಟು ಕಷ್ಟ ಅನುಭವಿಸಿದರು ಆದರೂ ಜಗ್ಗದ ಕಾರ್ಮಿಕರು ಕೊನೆಗೂ ಜಯ ಪಡೆ

ಪುಟ 8 ಕ್ಕೆ

ಲಕ್ನೊನಲ್ಲಿ ಮಹಿಳೆಯರ ಆತ್ಮವಿಶ್ವಾಸ ತೋರಿದ ರ‍್ಯಾಲಿ

ಜುಲೈ 2, ಉತ್ತರ ಪ್ರದೇಶದ ಹಲವು ಜಿಲ್ಲೆಗಳಿಂದ ಬಂದ 2500 ಕ್ಕೂ ಹೆಚ್ಚು ಮಹಿಳೆಯರು - ಕಡು ಬಡತನದ, ಕೃಷಿ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರಿಂದ ಹಿಡಿದು ಮಧ್ಯಮ ವರ್ಗದ ಮಹಿಳೆಯರವರೆಗೆ ಎಲ್ಲಾ ಜನ ವಿಭಾಗಗಳ ಮಹಿಳೆಯರು ಹೆಗಲಿಗೆ ಹೆಗಲು ಕೊಟ್ಟು ಮಹಿಳೆಯರ ದಮನ, ಅವರ ಮೇಲೆ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಘೋಷಣೆ ಕೂಗುತ್ತಾ ಸಾಗಿದ್ದ ಅಪೂರ್ವ ದೃಶ್ಯವನ್ನು ಲಕ್ನೊವಾಸಿಗಳು ಕಂಡರು. ಎ.ಐ.ಡಿ.ಡಬ್ಲ್ಯು.ಎ. ನೇತೃತ್ವದಲ್ಲಿ ಈ ರ‍್ಯಾಲಿ ನಡೆದಿತ್ತು. -- ಜಿಲ್ಲೆ ಜಿಲ್ಲೆಗಳಲ್ಲಿ ಒಂಭತ್ತರ ಬೇಡಿಕೆಗಳ ಮೇಲೆ ವ್ಯಾಪಕ ಪ್ರಚಾರ ಪ್ರಕ್ಷೋಭೆಯ ನಂತರ ರಾಜ್ಯ ಸರಕಾರದ ಗಮನ ಸೆಳೆಯಲು ಈ ರ‍್ಯಾಲಿ ಏರ್ಪಡಿಸಲಾಗಿತ್ತು.

ಕೋಮು ಗಲಭೆ ಯತ್ನ

ಪಶ್ಚಿಮ ಬಂಗಾಳದ ಕೂಚ್‌ಬಿಹಾರ್ ಜಿಲ್ಲೆಯ ಮಾಥಾ ಬಂಗಾದಲ್ಲಿ ಜುಲೈ 1 ರಂದು ಕೋಮು ಗಲಭೆ ನಡೆಸುವ ಪ್ರಯತ್ನ ನಡೆಯಿತು. ಈ ಪ್ರಯತ್ನ ನಡೆಸಿದವರಾರು? ವಿ.ಹೆಚ್. .ಯುಂತು ಇದ್ದೇ ಇತ್ತು. ಜತೆಗೆ ಕಾಂಗ್ರೆಸ್(ಐ) ಕೂಡಾ ಇತ್ತು. ಪಶ್ಚಿಮ ಬಂಗಾಳದ ಮಟ್ಟಿಗೆ ಇದು ಕೂಡಾ ಆಶ್ಚರ್ಯದ ಸಂಗತಿಯಲ್ಲ. ಏಕೆಂದರೆ ಎಡರಂಗ ಸರ್ಕಾರಕ್ಕೆ ಮಸಿಬಳಿಯುವ ಯತ್ನದಲ್ಲಿ ಎಂತಹ ನೀಚ ಕೆಲಸಕ್ಕೂ ಅವರು ಸಿದ್ಧ ಎಂಬುದೀಗ ಜನ ಜನಿತ ಸಂಗತಿ.

ಮಾಥಾಬಂಗಾದಲ್ಲಿ ಸ್ಥಳೀಯ ಮಸೀದಿ ಸಮಿತಿಯು ಮಸೀದಿಯನ್ನು ರಿಪೇರಿ ಮಾಡುತ್ತೇವೆಂಬ ಮನವಿಗೆ ಜಿಲ್ಲಾ ಮ್ಯಾಜಿ ಸ್ಟ್ರೇಟರು ಅನುಮತಿ ನೀಡಿದ್ದರು. ಜೂನ್ 4 ರಂದು ಈ ಕೆಲಸ ಆರಂಭವಾಗಬೇಕಿತ್ತು.

ಆದರೆ ಕೆಲವು ಕೋಮುವಾದಿಗಳು ಇದರ ವಿರುದ್ಧ ಗಲಭೆ ಎಬ್ಬಿಸಲು ಪ್ರಯತ್ನಿಸಿದರು. ಅವರ ನೆರವಿಗೆ ಧಾವಿಸಿದ ವಿಶ್ವ ಹಿಂದೂ ಪರಿಷದ್ ಮತ್ತು ಕಾಂಗೈಗಲಭೆ ನಡೆಸಲು ಜನಗಳನ್ನು ಕರೆತಂದಿತು. ಈ ಜನ ಜಂಗುಳಿಯನ್ನು ಚದುರಿಸಲು ಪೋಲೀಸರು ಅಶ್ರುವಾಯು ಪ್ರಯೋಗ ಮತ್ತು ಗೋಳೀಬಾರು ಕೂಡಾ ನಡೆಸಬೇಕಾಯಿತು. ಇದರಲ್ಲಿ ಒಬ್ಬ ಮುಗ್ಧ ಹಳ್ಳಿಗ ಹಾಗೂ ಹಲವಾರು ಪೋಲೀಸರು ಗಾಯಗೊಂಡಿದ್ದಾರೆ. ಮೂವರನ್ನು ಬಂಧಿಸಲಾಗಿದೆ.

ಬಂತಾಲಾದಲ್ಲಿ ಬಲಿಯಾದವರಿಗೆ ಸ್ಮಾರಕ

ಪಶ್ಚಿಮ ಬಂಗಾಳದ ಬಂತಾಲಾದಲ್ಲಿ ಕೆಲವು ಸಮಾಜ ವಿರೋಧಿ ಶಕ್ತಿಗಳಿಂದಾಗಿ ಪ್ರಾಣ ಕಳಕೊಳ್ಳಬೇಕಾಗಿ ಬಂದ ಶ್ರೀಮತಿ ಅನಿತಾ ದೀವಾನ್ ಮತ್ತು ಅಬನಿ ನೈಯ್ಯಾರವರ ಸ್ಮಾರಕಾರ್ಥ ಒಂದು ಆರೋಗ್ಯ ಕೇಂದ್ರ ಸ್ಥಾಪಿಸಲು ಪಶ್ಚಿಮ ಬಂಗಾಳ ಸರಕಾರ ನಿರ್ಧರಿಸಿದೆಯೆಂದು ರಾಜ್ಯದ ಆರೋಗ್ಯ ಮಂತ್ರಿ ಪ್ರಶಾಂತ್ ಸೂರ್ ತಿಳಿಸಿದ್ದಾರೆ. ಅವರು ಆರೋಗ್ಯ ಸೇವೆ ವಿಸ್ತರಿಸುವ ಪವಿತ್ರ ಕೆಲಸದಲ್ಲಿ ತೊಡಗಿದ್ದರಿಂದ ಇದು ಅವರಿಗೆ ಯೋಗ್ಯ ಸ್ಮಾರಕ ಎಂದು ಜೂನ್ 30 ರಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ನಡೆದ ಸಮಾ ರಂಭವೊಂದರಲ್ಲಿ ತಿಳಿಸಿದ ಅವರು ಇವರಿಬ್ಬರ ಕೊಲೆ ಪಾತಕರನ್ನು ಕಂಡು ಹಿಡಿದು, ತಕ್ಕ ಶಿಕ್ಷೆ ವಿಧಿಸಲು ಸರಕಾರ ಸರ್ವ ಪ್ರಯತ್ನ ನಡೆಸುವುದಾಗಿ ಘೋಷಿಸಿದರು.

ಈ ಅಮಾನುಷ ಘಟನೆಯ ರಾಜಕೀಯ ಲಾಭ ಪಡೆಯುವ ಕಾಂಗ್ರೈ, ಬಿ.ಜೆ.ಪಿ. ಗಳ ದುಷ್ಕೃತನಕ್ಕೆ ಕಲ್ಕತ್ತಾ ನಗರವಾಸಿಗಳು ತಕ್ಕ ಉತ್ತರ ನೀಡಿದ್ದನ್ನು ನಮ್ಮ ಓದುಗರು ಇಲ್ಲಿ ನೆನಪಿಸಿಕೊಳ್ಳಬಹುದು.

ಯೆಲ್ಟ್‌ಸೀನ್ ಕೇಂದ್ರ ಸಮಿತಿಯಿಂದ ಹೊರಕ್ಕೆ-ರಾಜೀನಾಮೆ
ಗೋರ್ಬಚೇವ್ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆ

ಪ್ರತಿನಿಧಿಗಳು ಹೇಳುತ್ತಾರೆ..........

★ ನಾಳಿನ 'ತಂತ್ರಜ್ಞಾನ'ಗಳನ್ನು ಬೆಳೆಸುವತ್ತ ನಾವು ಕೆಲಸ ಮಾಡಬೇಕು. 80 ರ ದಶಕದಿಂದ ಪಾಶ್ಚಿಮಾತ್ಯ ತಂತ್ರಜ್ಞಾನವನ್ನು ನಾವು ಅಂಗೀಕರಿಸುವುದರಲ್ಲಿ ಏನೂ ಅರ್ಥವಿಲ್ಲ......."

-ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿಯ ಅಧ್ಯಕ್ಷ.

★ "ಗಂಭೀರ" 'ರಾಜಕೀಯ ನಿರ್ವಾತ' ಉಂಟಾಗಿದೆ ದೇಶದಲ್ಲಿ........
ಪಕ್ಷದ ಸಮಿತಿಗಳು ಆಡಳಿತ ಚಲಾಯಿಸುವುದನ್ನು ನಿಲ್ಲಿಸಿವೆ. ಆದರೆ ಅದನ್ನು ಚಲಾಯಿಸಬೇಕಾದ ಸೋವಿಯೆತ್‌ಗಳು ಇನ್ನೂ ಆಡಳಿತದ ಪಾಠ ಕಲಿಯಬೇಕಾಗಿದೆ. ಕಳೆದ 2 ವರ್ಷಗಳಲ್ಲಿ ನಮ್ಮ ವೈಫಲ್ಯಗಳಿಗೆ ಅರ್ಥ ಇದುವೇ ಕಾರಣ.........."

-ಸೋವಿಯೆತ್ ಪಾರ್ಲಿಮೆಂಟಿನ ಅಧ್ಯಕ್ಷ.

★ "ಹಳೆಯ ಆರ್ಥಿಕ ನಿರ್ವಹಣೆ ಪದ್ಧತಿಯನ್ನು ಪೆರಸ್ತ್ರೊಯಿಕಾದ ವರ್ಷಗಳಲ್ಲಿ ಪೂರ್ಣ ಕಿತ್ತುಹಾಕಲಾಗಿದೆ. ಆದರೆ ಅದರ ಜಾಗದಲ್ಲಿ ಹೊಸ ಪದ್ಧತಿ ಇನ್ನೂ ಕೂಡಿಸಬೇಕಾಗಿದೆ......"

-ಆರ್ಥಿಕ ನೀತಿ ಬಗ್ಗೆ ಚರ್ಚೆಯಲ್ಲಿ.

★ "ನಾವು ಪಶ್ಚಿಮದಲ್ಲಿರುವ ನಮ್ಮ ಮಿತ್ರರನ್ನು ಕಳೆದು ಕೊಂಡಿದ್ದೇವೆ.ಪೂರ್ವದಲ್ಲಿರುವ ಮಿತ್ರರನ್ನು ಕಳೆದುಕೊಂಡಿದ್ದೇವೆ
1939 ರಲ್ಲಿದ್ದ ಸ್ಥಿತಿಗೆ ನಾವು ಮರಳಿದ್ದೇವೆ........."

-ಶಾಂತಸಾಗರ್ ನೌಕಾಸೇನೆ ಮುಖ್ಯಸ್ಥ

★ ಏಪ್ರಿಲ್ 1985 ರಿಂದಆರಂಭಿಸಿದ ಶಾಂತಿಯ ಆಕ್ರಮಣದಿಂದಾಗಿ ಪಾಶ್ಚಿಮಾತ್ಯರಿಗೆ ನಮ್ಮನ್ನು ಶಾಂತಿಯ ವಿರೋಧಿಗಳು ಎಂದು ಅಪಪ್ರಚಾರ ಮಾಡುವುದು ಪೂರ್ಣ ಅಸಾಧ್ಯವಾಗಿದೆ........."

-ಉಪ ವಿದೇಶ ಮಂತ್ರಿ

★ ರಾತ್ರೋರಾತ್ರಿ ತನ್ನ ಹೆಸರು ಮತ್ತು ಕಾರ್ಯಕ್ರಮವನ್ನು ಬದಲಾಯಿಸಬಲ್ಲ ರಾಜಕೀಯ ಪಕ್ಷದಲ್ಲಿ ಜನರು ವಿಶ್ವಾಸವಿಡುವುದಿಲ್ಲ......."
-ಪಕ್ಷದ ಹೆಸರು ಬದಲಾವಣೆಯನ್ನು
ವಿರೋಧಿಸುತ್ತಾ ಮಾಸ್ಕೋ ಸಂಶೋಧನಾ ಸಂಸ್ಥೆಯೊಂದರ ಪಕ್ಷ ಸಮಿತಿ ಕಾರ್ಯದರ್ಶಿ.

★ "ಸೈದ್ಧಾಂತಿಕ ಕೆಲಸದಲ್ಲಿ ಸಾಮ್ರಾಜ್ಯಶಾಹಿ ವಿಶೇಷ ಸೇವೆಗಳು ಸೇರಿದಂತೆ ಬಾಹ್ಯ ಪ್ರಭಾವಗಳ ಬಗ್ಗೆ ಜಾಗರೂಕತೆಯಿಂದ ಇರಬೇಕು......."

-ಸೈಬಿರಿಯಾದಲ್ಲಿರುವ KGB ಮುಖ್ಯಸ್ಥ

★ ಆಹಾರ ಸಮಸ್ಯೆಯನ್ನು ಪರಿಹಾರಗೊಳಿಸುವುದೆಂದರೆ ದೇಶದ ಮೂರರಲ್ಲಿ ಎರಡು ಭಾಗ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಿದಂತೆ....."

ಗೊರ್ಬಚೇವ್

★ "1985 ರ ನಂತರ ಪೆರಸ್ತ್ರೊಯಿಕಾದ ಬಂಡಿಗೆ ಜಿಗಿದಿರುವ ಹಲವರು, ಪಕ್ಷದ ಈ ಸ್ವಯಂಸ್ಫೂರ್ತಿಯ ಕ್ರಮಕ್ಕೆ ತಣ್ಣೀರೆರಚಲು ಪ್ರಯತ್ನಿಸುತ್ತಿದ್ದಾರೆ. ಆದರೆ ಈ ಮಹಾಧಿವೇಶನವೇ ಜನತೆಯನ್ನು ಸೈದ್ಧಾಂತಿಕವಾಗಿ ಅಣಿನೆರೆಸುವ ಕಾರ್ಯದಲ್ಲಿ ದೊಡ್ಡ ಪಾತ್ರವಹಿಸಲಿದೆ........."

- ಪ್ರಾವ್ದಾದ ಪ್ರಧಾನ ಸಂಪಾದಕ.

★ " ನಮಗೆ (ಪಕ್ಷದ ನಾಯಕತ್ವಕ್ಕೆ) "ಗ್ಲಾಸ್‌ನೋಸ್ತ್' ಮತ್ತು 'ಪೆರಸ್ತ್ರೊಯಿಕಾದ ಮೊದಲು ಇನ್ನೂ ಹೆಚ್ಚಿನ ಅಧಿಕಾರವಿತ್ತು. ಬರಿಯ ಅಧಿಕಾರದ ಪ್ರಶ್ನೆಯಾಗಿದ್ದರೆ ನಾವು ಸುಧಾರಣೆಗಳು, ಪುನರ್ನವೀಕರಣ - ಸಮಾಜ ಮತ್ತು ಪಕ್ಷದ್ದು - ಪೆರಸ್ತ್ರೊಯಿಕಕ್ಕೆ ಹೋರಾಡುತ್ತಿರಲಿಲ್ಲ........."

-ಹೆಚ್ಚಿನ ಅಧಿಕಾರ ಜಮಾವಣೆ ಬಗ್ಗೆ ಗೋರ್ಬಚೆವ್.


28 ನೇ ಮಹಾಧಿವೇಶನ ಮುಗಿದಿದೆ. ಕೆಲವರಿಗೆ ನಿರಾಶೆ ಆಗಿದೆ. ಹಲವರು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ. 20 ನೇ ಮತ್ತು 27 ನೇ ಮಹಾಧಿವೇಶನ ಇಡೀ ವಿಶ್ವದ ಗಮನ ಸೆಳೆದಿದ್ದರೂ ಬಹುಶಃ 28 ನೇ ಮಹಾಧಿವೇಶನದಷ್ಟು ಖಂಡಿತವಾಗಿ ಚರ್ಚಾಸ್ಪದವಾಗಿರಲಿಲ್ಲ. ನಿರಾಶೆ ಆಗಿರುವುದು ಸೋವಿಯೆತ್ ಕಮ್ಯುನಿಸ್ಟ್ ಪಕ್ಷ ಮೂರು ಹೋಳಾಗುವುದೆಂದು 'ಭವಿಷ್ಯ' ನುಡಿದಿದ್ದವರಿಗೆ ಈ 'ಭವಿಷ್ಯ'ತ್ತನ್ನು ನಿಜವಾಗಿಸಲು ಹೆಣಗಿ ಸೋತವರಿಗೆ. ಸಾಮ್ರಾಜ್ಯಶಾಹಿ ಪ್ರಚಾರ ಮಾಧ್ಯಮ, ಅದರ ಸಾಕುನಾಯಿಗಳು, ಎಂಜಲು ಚಪ್ಪರಿಸುತ್ತಿರುವ ಭಾರತದ ಬೂರ್ಜ್ವಾ ಪತ್ರಿಕೆಗಳು ಎಲ್ಲಾ ದೇಶಗಳ (ಸೋವಿಯೆತ್ ಸೇರಿದಂತೆ) ಎಲ್ಲಾ 'ಬ್ರಾಂಡಿನ' ಕಮ್ಯುನಿಸ್ಟ್ ಪಕ್ಷ ಅವರ ಪ್ರಚಾರದ ಸುಂಟರ ಗಾಳಿಗೆ ದಿಕ್ಕಾಪಾಲಾಗುತ್ತದೆ. ಎಂದು ಅವರ ಎಣಿಕೆ. ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾಜವಾದಿ ವ್ಯವಸ್ಥೆಯತ್ತ ಸಂಕ್ರಮಣ ಕಾಲವಾದ ಈ ಯುಗದ ಹರಿಕಾರನಾದ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ, ಅದರೊಳಗಿನ ಆಗುಹೋಗುಗಳ ಬಗ್ಗೆ ಇಡೀ ಜಗತ್ತಿನ ಕಮ್ಯುನಿಸ್ಟರು, ಕಾರ್ಮಿಕ ವರ್ಗ, ಶಾಂತಿ-ಪ್ರಿಯ ಪ್ರಜಾಪ್ರಭುತ್ವ-ಪ್ರೇಮಿ ಜನತೆ ಆತಂಕಗೊಂಡಿದ್ದರು.

ಒಂದು ವಾರದ ನಿಜವಾದ ಬಿಸಿ-ಬಿಸಿ ಚರ್ಚೆಯ ನಂತರ ಪಕ್ಷ ಹೆಚ್ಚಿನ ವಿಷಯಗಳಲ್ಲಿ ಒಮ್ಮತಕ್ಕೆ ಬಂದಿದೆ. ಮುಂದಿನ ಹಾದಿ, ನಿಲುವುಗಳ ಬಗ್ಗೆ ಹೆಚ್ಚು ಸ್ಪಷ್ಟತೆ ತಂದುಕೊಟ್ಟಿದೆ.

ಬೂರ್ಜ್ವಾ ಪತ್ರಿಕೆಗಳು "ಇಲಿಯನ್ನು ಹುಲಿ'ಯಾಗಿಸಿದ್ದವು. ಮಹಾಧಿವೇಶನದಲ್ಲಿ ಅವರ ಬಣ್ಣ ಬಯಲಾಯಿತು. ಅವರಿಗೆ ಪ್ರತಿನಿಧಿಗಳಲ್ಲಿ ಯಾವುದೇ ಗಮನಾರ್ಹ ಬೆಂಬಲ ಇರಲಿಲ್ಲ ಎಂದು ಈಗ ಸಿದ್ಧವಾಗಿದೆ. ಇವರ ಮಹಾನಾಯಕ ಯೆಲ್ಟ್‌ಸೀನ್ ಸೇರಿದಂತೆ ಹಲವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. 4,700 ಪ್ರತಿನಿಧಿಗಳಲ್ಲಿ ಅವರ 'ವೇದಿಕೆ'ಗೆ ಬೆಂಬಲವಿದ್ದದ್ದು ಕೇವಲ 100 ಪ್ರತಿನಿಧಿಗಳದ್ದು. ಪಕ್ಷದ ಕ್ರಾಂತಿಕಾರಿ ಪುನರ್ನವೀಕರಣವನ್ನು ಪ್ರತಿನಿಧಿಸುವ ಕಾಮ್ರೇಡ್ ಮಿಖೈಲ್ ಗೋರ್ಬಚೆವ್ ಭಾರೀ ಬಹುಮತದಿಂದ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿದ್ದಾರೆ. ಅವರಿಗೆ 4,600 ಪ್ರತಿನಿಧಿಗಳಲ್ಲಿ 3,411 ಮತಗಳು ದೊರೆತವು. ಮಹಾಧಿವೇಶನದಲ್ಲಿ ಎಲ್ಲಾ ಪ್ರತಿನಿಧಿಗಳು ಗುಪ್ತಮತದಾನದಿಂದ ಪಕ್ಷದ ಪ್ರಧಾನ ಕಾರ್ಯದರ್ಶಿಯನ್ನು ಆರಿಸುವುದು ಇದೇ ಮೊದಲು. ಇದಲ್ಲದೆ ಹೊಸದಾಗಿ ರಚಿಸಿರುವ ಉಪಪ್ರಧಾನ ಕಾರ್ಯದರ್ಶಿ ಚುನಾವಣೆ

ಪುಟ 8 ಕ್ಕೆ

ಲೋಕ ಸಂಚಾರ



ಮಹಾಧಿವೇಶನದಲ್ಲಿ ಪಕ್ಷದ ಕಾರ್ಯಕ್ರಮ ಮತ್ತು ಸಂಘಟನಾ-ತತ್ವಗಳ ಬಗ್ಗೆ ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತವಾದವು. ಸುಮಾರು ಒಂದು ವಾರಗಳ ಕಾಲ ಬಿಸಿ ಬಿಸಿ ವಾಗ್ವಾದ ನಡೆಯಿತು. ಹೆಚ್ಚು ಕಡಿಮೆ ಎಲ್ಲವೂ ತೀವ್ರ ವಾದಕ್ಕೆ ಒಳಗಾಗಿತ್ತು (ತೀರಾ ಮೂಲಭೂತವೆನ್ನಬಹುದಾದ ವಿಷಯಗಳು ಸೇರಿ)- ಮಾರ್ಕ್ಸ್‌ವಾದ-ಲೆನಿನ್‌ವಾದ, ಪಕ್ಷದ ಹೆಸರು, ಕಮ್ಯೂನಿಸಂ ಬಗ್ಗೆ ಸೇರಿದಂತೆ. ಪಕ್ಷ ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ತನ್ನ ನಂಬಿಕೆಯನ್ನು ಪುನಃ ವ್ಯಕ್ತಪಡಿಸಿದೆ. ಪಕ್ಷದ ಹೆಸರನ್ನು ಬದಲಾಯಿಸಬೇಕೆಂಬ 'ಪ್ರಜಾಪ್ರಭುತ್ವ ವೇದಿಕೆ' ಯ ಪ್ರತಿನಿಧಿಗಳ ಸೂಚನೆಯನ್ನು ಮಹಾಧಿವೇಶನ ತಿರಸ್ಕರಿಸಿತು. ಸಮಾಜವಾದದಲ್ಲಿ ತನಗೆ ನಂಬಿಕೆ ಇಲ್ಲ, ಬಂಡವಾಳಶಾಹಿ ಉತ್ತಮ ವ್ಯವಸ್ಥೆ ಎಂದಿದ್ದ ಮಾಜಿ ಪೊಲಿಟ್ ಬ್ಯೂರೋ, ಕೇಂದ್ರಸಮಿತಿ ಸದಸ್ಯ ಬೋರಿಸ್ ಯೆಲ್ಟ್‌ಸಿನ್ ಕೇಂದ್ರ ಸಮಿತಿಗೂ ಚುನಾಯಿತರಾಗಲಿಲ್ಲ. ಈತನಿಗೆ ಮತ್ತು ಈತನ ನಾಯಕತ್ವದ 'ವೇದಿಕೆ'ಯನ್ನು

ಸಮಾಜವಾದಿ ದೇಶಗಳಲ್ಲಿನ ಬೆಳವಣಿಗೆಗಳು
ಕೇಂದ್ರ ಸಮಿತಿ ನಿರ್ಣಯ ಏನು ಹೇಳುತ್ತದೆ?

(ದಿ.8.7.90 ರ ಸಂಚಿಕೆಯಿಂದ ಮುಂದುವರಿದುದು)

★ 'ಗ್ಲಾಸ್‌ನೋಸ್ತ್' ಮತ್ತು 'ಪೆರಸ್ತ್ರೊಯಿಕಾ' ನೀತಿಗಳಿಗೆ ನಾವು ವಿರೋಧವಾಗಿದ್ದೇವೆಯೇ? ಅದರ ಬಗ್ಗೆ ನಮ್ಮ ನಿಲುವು ಏನು?

0 1985 ರಲ್ಲೇ ಸಿ.ಪಿ.ಐ(ಎಂ) ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳ ಆವಶ್ಯಕತೆ ಬಗ್ಗೆ ಮನಗಂಡಿತ್ತು. ಪೆರಸ್ತ್ರೊಯಿಕಾ' (ಆರ್ಥಿಕ ಪುನಃ ಸಂಘಟನೆ) ಮತ್ತು 'ಗ್ಲಾಸ್‌ನೋಸ್ತ್'(ಮುಕ್ತ ವಾತಾವರಣದತ್ತ ರಾಜಕೀಯ ಸುಧಾರಣೆಗಳು) ಅದು 27ನೇ ಮಹಾಧಿವೇಶನದಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷ ವಿವರಿಸಿದ ರೀತಿಯಲ್ಲಿ ನಮ್ಮ ಪಕ್ಷ ಸಂಪೂರ್ಣವಾಗಿ ಬೆಂಬಲಿಸುತ್ತದೆ. ಸಮಾಜವಾದ ಕಟ್ಟುವಲ್ಲಿ ನುಸುಳಿರುವ ವಿಕೃತಿಗಳನ್ನು ಸರಿಪಡಿಸಿ ಸಮಾಜವಾದವನ್ನು ಇನ್ನೂಉನ್ನತ ಮಟ್ಟಕ್ಕೆ ಒಯ್ಯಲು ಇದು ಅಗತ್ಯ. ಈ ಸುಧಾರಣೆಗಳ ಆವಶ್ಯಕತೆ ಬರುವುದು ಉತ್ಪಾದಕ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಕ್ಕೆ ನಡುವೆ ಸಾಮರಸ್ಯ ಕೆಟ್ಟಾಗ. ಇವೆರಡನ್ನು ಸಮರಸಗೊಳಿಸುವುದು ತನ್ನಷ್ಟಕ್ಕೆ ಆಗುವುದಿಲ್ಲ, ಎಂದು 27 ನೇ ಮಹಾಧಿವೇಶನದಲ್ಲಿ, ಕಾಮ್ರೇಡ್ ಗೊರ್ಬಚೆವ್‌ರವರ ಸೈದ್ಧಾಂತಿಕ ನಿಲುವನ್ನು ನಮ್ಮ ಪಕ್ಷ ಒಪ್ಪುತ್ತದೆ. ಆರ್ಥಿಕ ಸುಧಾರಣೆಗಳ ಸಾರ ಆರ್ಥಿಕ ನಿರ್ವಹಣೆಗಳ ವಿಧಾನಗಳನ್ನು ಆಮೂಲಾಗ್ರವಾಗಿ ಸುಧಾರಿಸುವುದು. ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿಯನ್ನು ಕೃಷಿ ಮತ್ತು ಕೈಗಾರಿಕೆಯಲ್ಲಿ ಬಳಸಿ ಉತ್ಪಾದಕ ಶಕ್ತಿಗಳ ಮತ್ತು ಉತ್ಪಾದಕತೆಯ ವೇಗ ವರ್ಧಿಸುವುದು. ರಾಜಕೀಯ ಸುಧಾರಣೆಗಳ ಸಾರ ಸರಕಾರ ನಡೆಸುವಲ್ಲಿ ಎಲ್ಲಾ ನಾಗರಿಕರು ಪಾಲ್ಗೊಳ್ಳುವಿಕೆಗೆ. ಇದ್ದ ಎಡರು ತೊಡರುಗಳನ್ನು ಕಿತ್ತುಹಾಕುವುದು. ಕಾರ್ಮಿಕರು ತಮ್ಮ ಸಂಸ್ಥೆಗಳ ನಿರ್ವಹಣೆಯಲ್ಲಿ ಪಾಲ್ಗೊಳ್ಳುವುದು. ಲೆನಿನ್ ಹೇಳಿದಂತೆ 'ಪ್ರತಿಯೊಬ್ಬ ಅಡುಗೆಭಟ್ಟ ಆಳುವುದನ್ನು ಕಲಿಯುವ' ಆಳವಾದ ಸಮಾಜವಾದಿ ಪ್ರಜಾಪ್ರಭುತ್ವದಲ್ಲಿ, ನಾಗರಿಕರು ಅನುಭವಿಸುವ ಎಲ್ಲಾ ಹಕ್ಕುಗಳನ್ನು ಇನ್ನೂ ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗುವುದು. ನಮ್ಮ ಪಕ್ಷ 'ಗ್ಲಾಸ್ ನೋಸ್ತ್' ನ ನೀತಿಯಲ್ಲಿ ನುಸುಳಿರುವ ನಕಾರಾತ್ಮಕ ವಿಷಯಗಳ ಬಗ್ಗೆ ಆತಂಕ ವ್ಯಕ್ತಪಡಿಸಿರುವುದು. 'ಗ್ಲಾಸ್‌ನೋಸ್ತ್' ನ ಅಡಿಯಲ್ಲಿ, ಹುಲುಸಾಗಿ ಬೆಳೆಯುತ್ತಿರುವ ಮಾರ್ಕ್ಸ್‌ವಾದ - ವಿರೋಧಿ, ಸಮಾಜವಾದಿ - ವಿರೋಧಿ ಪ್ರಚಾರದ ವಿರುದ್ಧ ಸೋವಿಯತ್ ಪಕ್ಷ ಹೋರಾಡಲು ಸೋತುದರ ಬಗ್ಗೆ ನಮ್ಮ ಟೀಕೆ. ಗ್ಲಾಸ್‌ನೋಸ್ತ್ ಬಗ್ಗೆನೇ ಅಲ್ಲ.

★ ಜನಾಂಗೀಯ ಗಲಭೆಗಳು ಸೋವಿಯತ್ ಒಕ್ಕೂಟದಲ್ಲಿ ಆರಂಭವಾಗಿರುವುದು, ಬೆಳೆಯುತ್ತಿರುವುದು ಈಗಿನ ನೀತಿಗಳ ಕಾರಣದಿಂದಾಗಿಯೇ? ಅದರ ಬಗ್ಗೆ ಸೋವಿಯತ್ ಪಕ್ಷದ ನಿಲುವು ಕಾರ್ಯಾಚರಣೆ ಬಗ್ಗೆ ನಮ್ಮ ಅಭಿಪ್ರಾಯವೇನು?

0 ಆರಂಭದಲ್ಲಿ ದೇಸೀ ಜನಾಂಗೀಯ ಪ್ರಶ್ನೆಯನ್ನು ಸರಿಯಾಗಿಯೇ (ಕ್ರಾಂತಿಯ ನಂತರ) ಸೋವಿಯತ್ ಪಕ್ಷ ನಿರ್ವಹಿಸಿತು. ಅಂದಿನಿಂದ ಇಂದಿನವರೆಗಿನ ಈ ದೀರ್ಘ ಕಾಲಾವಧಿಯಲ್ಲಿ, ಹಲವು ನಕಾರಾತ್ಮಕ ಬೆಳವಣಿಗೆಗಳೆಲ್ಲಾ ಆಗಿರುವುದು ಈಗ ಸ್ಪಷ್ಟ. ಇದನ್ನು ಸಮಯಕ್ಕೆ ಸರಿಯಾಗಿ ನಿಯಂತ್ರಿಸಲೂ ಇಲ್ಲ. ಇದು ಸೋವಿಯತ್ ಒಕ್ಕೂಟದ ಹೊರಗೆ ಗೊತ್ತಾಗಲೂ ಇಲ್ಲ. ಅಧಿಕಾರಶಾಹಿ ದರ್ಪ, ಅತಿ ಕೇಂದ್ರೀಕರಣ, ಎಲ್ಲಾ ಭಾಷೆಗಳ ಸಮಾನತೆಯ ಉಲ್ಲಂಘನೆಗಳಿಂದಾಗಿ ದೀರ್ಘ ಅವದಿಯಲ್ಲಿ ನೆನೆಗುದಿಗೆ ಬಿದ್ದ ಸಮಸ್ಯೆ, ಭಾವನೆಗಳು ಈಗ ಭುಗಿಲೆದ್ದಿವೆ.

ಹಲವು ದೇಸಿ ಜನಾಂಗಗಳಲ್ಲಿ ಆಗಿರುವ ಬದಲಾವಣೆಗಳು, ಹೊಸ ಬುದ್ಧಿ ಜೀವಿ ವರ್ಗದ ಉದಯ, ಸೋವಿಯತ್ ಒಕ್ಕೂಟದ ಒಳಗೆ ಆಗದಿರುವ ವಲಸೆ ಇವೆಲ್ಲವನ್ನೂ ಸರಿಯಾಗಿ ಅರ್ಥಮಾಡಿಕೊಂಡು ಸರಿಯಾಗಿ ಸಮಸ್ಯೆಯನ್ನು ನಿರ್ವಹಿಸುವದರಲ್ಲಿ ಚ್ಯುತಿ ಮತ್ತು ಅತಿ ವಿಳಂಬ ಈಗಿನ ಆಸ್ಫೋಟಕ ಸ್ಥಿತಿಗೆ ಕಾರಣ ಇದು 'ಗ್ಲಾಸ್ ನೋಸ್ತ್' ದಿಂದಾಗಿ ಎದ್ದು ಬಂದಿರುವ ಸಮಸ್ಯೆ ಅಲ್ಲ. ಆದರೆ ಈ ನಕಾರಾತ್ಮಕ ಶಕ್ತಿಗಳು 'ಗ್ಲಾಸ್‌ನೋಸ್ತ್'ನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎನ್ನುವುದಕ್ಕೆ ಸಂಶಯ ಇಲ್ಲ. ಸೋವಿಯತ್ ಕಮ್ಯುನಿಸ್ಟ್ ಪಕ್ಷ ಈ ಬಗ್ಗೆ 1989 ರ ಸೆಪ್ಟೆಂಬರ್ ಕೇಂದ್ರ ಸಮಿತಿ ಅಂಗೀಕರಿಸಿದ ನೀತಿಯನ್ನು ಮತ್ತು ಅದರ ಆಧಾರದ ಮೇಲೆ ಕೈಗೊಂಡಿರುವ ಕ್ರಮಗಳನ್ನು ನಮ್ಮ ಪಕ್ಷ ಲೆನಿನ್ ವಾದಿ ದೇಸೀ ಜನಾಂಗ ನೀತಿಯನ್ನು ಅಕ್ಷರಶಃ ಸಾರಶಃ ಪಾಲಿಸುವ ಹೋರಾಟದಲ್ಲಿ ಅವರಿಗೆ ಜಗತ್ತಿನ ಎಲ್ಲ ಕಮ್ಯುನಿಸ್ಟರ ಬೆಂಬಲ ಇದೆ.

★ 70 ವರ್ಷಗಳಿಗಿಂತಲೂ ಹೆಚ್ಚು ದೀರ್ಘವಾದ ಅವಧಿಯ ಸಮಾಜವಾದಿ ವ್ಯವಸ್ಥೆಗೆ ಗಂಭೀರ ಹಿನ್ನಡೆ ತೀರಾ ಅನಿರೀಕ್ಷಿತವೇ?

0 ತೀರಾ ಅನಿರೀಕ್ಷಿತವೇನಲ್ಲ. 1917 ರ ಅಕ್ಟೋಬರ್ ಕ್ರಾಂತಿಯ ನಂತರದ ಅವಧಿ ಬಂಡವಾಳವಾದಿಂದ ಸಮಾಜವಾದ ಹಾದಿಗೆ ಹೋಗುವ ಸಂಕ್ರಮಣ ಕಾಲ. ಈ ಕಾಲದಲ್ಲಿ ಈ ಬೆಳವಣಿಗೆ ನೇರವಾಗಿ ಒಮ್ಮುಖವಾಗಿ ಇರುವುದಿಲ್ಲ. ಇದರಲ್ಲಿ ಭಾರೀ ಮುನ್ನಡೆಗಳು ಇದ್ದ ಹಾಗೆ ಭಾರಿ ಹಿನ್ನಡೆಗಳು ಇರಬಹುದು ಎಂದು ಲೆನಿನ್ ಅವರು ಹಿಂದೆನೇ ಎಚ್ಚರಿಸಿದರು. ಆದರೆ ಅದರ ಅರ್ಥ ಬಂಡವಾಳವಾದಕ್ಕೆ ಹೊಸ ಜೀವನ ದೊರಕಿದೆ ಅಂತ ಅಲ್ಲ. ಅದು ವರ್ಗ ಶೋಷಣೆಯ ಮೇಲೆ ಆಧಾರಿತ ಕೊಳೆಯುತ್ತಿರುವ ವ್ಯವಸ್ಥೆ. ಸಮಾಜವಾದ ಸಮಸ್ಯೆಗಳಿಗೆ ಬಂಡವಾಳ ಪರಿಹಾರವಲ್ಲ. ಮಾರ್ಕ್ಸ್‌ವಾದಿ - ಲೆನಿನ್ ಹಾದಿಯಿಂದ ಚ್ಯುತಿ ಮತ್ತು ವಿಕೃತಿಗಳನ್ನು ತಿದ್ದಿ ಕೊಂಡು, ಬಂಡವಾಳಶಾಹಿಯ ಸಾಮ್ರಾಜ್ಯ ಶಾಹಿಯ ಈ ಸವಾಲನ್ನು ಎದುರಿಸೋಣ.

 KRNW/BGS-312 MAG (2) PRB DECR 319-78/79

ಹೋರಾಟದ ಬದುಕು

ಪುಟ 5 ರಿಂದ.

ಸಾವಿರ ವಿದ್ಯಾರ್ಥಿಗಳು ಒಂದೆಡೆ ಇದ್ದಾಗ ಇಂತಹ ಪರಿಸ್ಥಿತಿ ಸಹಿಸುವುದು ಸಾಧ್ಯವೇ? ಸರಿ ಪ್ರತಿಭಟನೆ ಆರಂಭವಾಯಿತು. ಜೈಲಿನ ಅಧಿಕಾರಿಗಳು ಪೋಲೀಸರನ್ನು ಜೈಲಿಗೆ ಕರೆಸಿ ಲಾಠಿ ಚಾರ್ಜ್ ಮಾಡಿಸಿದರು. ಈ ಪೋಲೀಸರು ರಕ್ಕಸರಂತೆ ವರ್ತಿಸಿದರು. ಶಂಕರಪ್ಪ ಎಂಬ ವಿದ್ಯಾರ್ಥಿಯನ್ನು ತಮ್ಮ ಮಧ್ಯೆ ಸಿಕ್ಕಿಸಿಕೊಂಡು ಬೂಟುಗಳಿಂದಲೇ ತುಳಿದುಕೊಂದರು. ಈಗಲೂ ಮೈಸೂರಿನಲ್ಲಿರುವ ಶಂಕರಪ್ಪ ವಿದ್ಯಾರ್ಥಿ ನಿಲಯ ಈ ವಿದ್ಯಾರ್ಥಿಯ ಸ್ಮರಣೆಗಾಗಿ ಸ್ಥಾಪಿತವಾದದ್ದು.

ಈ ಲಾಠಿ ಚಾರ್ಜ್ ಸಮಯದಲ್ಲಿ ನನಗೂ ತೀವ್ರವಾದ ಪೆಟ್ಟು ಬಿತ್ತು. ಈ ಘಟನೆಯ ನಂತರ ನನ್ನನ್ನೂ ಸೇರಿಸಿ 30-40 ಜನ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸಿ ಕುಕ್ಕರ ಹಳ್ಳಿಯ ಕೆರೆ ಇಂದು ಮೈಸೂರು ವಿಶ್ವ ವಿದ್ಯಾನಿಲಯದ ಮಾನಸ ಗಂಗೋತ್ರಿಯ ಬಳಿ ಇದ್ದ ಬಂದಿಖಾನೆಯೊಂದಕ್ಕೆ ವರ್ಗಾಯಿಸಿದರು.

"ನಾನು ಒಪ್ಪಲಿಲ್ಲ"

ನಮ್ಮ ಅಣ್ಣ ಸರ್ಕಾರದ ನೌಕರ. ಅವನ ಸಂಪಾದನೆಯೇ ನಮ್ಮ ಮನೆಯ ಪ್ರಮುಖ ಆಧಾರ. ಇವನ ಮೇಲೆ ಅಂದು ಮೈಸೂರು ಸಂಸ್ಥಾನದ ಸರ್ಕಾರ ಬ್ರಿಟಿಷ್ ಸರ್ಕಾರ ತನ್ನ ನೌಕರರ ವಿಷಯದಲ್ಲಿ ಮಾಡುತ್ತಿದ್ದಂತೆಯೇ ತಮ್ಮನನ್ನು ಸ್ವಾತಂತ್ರ್ಯ ಹೋರಾಟದಿಂದ ಹಿಂದೆಗೆಸಲು ಸರ್ಕಾರಕ್ಕೆ ತಪ್ಪೊಪ್ಪಿಗೆ ಬರೆದು ಕೊಟ್ಟು ಬಿಡುಗಡೆ ಮಾಡಿಸಲು ಒತ್ತಾಯ ಹೇರುತ್ತಿತ್ತು.

ಅಣ್ಣ ನನ್ನ ಬಟ್ಟೆ ಬರೆಗಳನ್ನು ತೆಗೆದುಕೊಂಡು ಮೈಸೂರಿಗೆ ಬಂದರು. Apology ಬರೆದುಕೊಡಲು ಒತ್ತಾಯಿಸಿದರು. ನಾನು ಒಪ್ಪಲಿಲ್ಲ.


(ಮುಂದುವರೆಯುವುದು)

ಬೀಡಿ ಸೇದಿ, ಬೀಡಿ ಸೇದಿ ಎಂದು ಹೇಳಲು ಸರಕಾರಕ್ಕೆ ಸಾಧ್ಯಬಿಲ್ಲವೆಂದು, ವಿಧಾನ ಸಭೆಯಲ್ಲಿ ಇತ್ತೀಚೆಗೆ ಹೇಳಿದ ಕಾರ್ಮಿಕ ಸಚಿವರ ಹೇಳಿಕೆಯ ಬಗ್ಗೆ ಸಂಘವು ಆಶ್ಚರ್ಯ ವ್ಯಕ್ತಪಡಿಸಿದೆ.

ಕೇರಳ ರಾಜ್ಯದಲ್ಲಿ ಕಾರ್ಮಿಕರ ಸಹಕಾರದೊಂದಿಗೆ ಸೊಸೈಟಿಗಳನ್ನು ಸ್ಥಾಪಿಸುವ ಮೂಲಕ 50 ಸಾವಿರಕ್ಕೂ ಹೆಚ್ಚಿನ ಬೀಡಿ ಕಾರ್ಮಿಕರಿಗೆ ಕೆಲಸ ಕೊಟ್ಟು ಹೆಚ್ಚಿನ ಕೂಲಿ ಮತ್ತಿತರ ಸವಲತ್ತುಗಳನ್ನಿತ್ತು ಲಾಭದಾಯಕವಾಗಿ ಆ ಉದ್ದಿಮೆ ನಡೆಯುತ್ತಿರುವಾಗ ಕರ್ನಾಟಕದಲ್ಲಿ ಸರಕಾರ ಈ ಬಗ್ಗೆ ಮೌನ ವಹಿಸಿದೆ.

ರಾಜ್ಯದ ಬೀಡಿ ಮಾಲಕರ ಕೃಪಾಕಟಾಕ್ಷದಲ್ಲಿರುವ ಕಾಂಗ್ರೆಸ್ ಪಕ್ಷ ಬೀಡಿ ಉದ್ದಿಮೆಯನ್ನು ರಾಷ್ಟ್ರೀಕರಿಸುವುದಿಲ್ಲ ಎಂದು ಹೇಳುವುದು ಸ್ವಾಭಾವಿಕವೇ ಸರಿ.

ಬೀಡಿ ಕೈಗಾರಿಕೆಯ ಪ್ರಸ್ತುತ ಬಿಕ್ಕಟ್ಟಿಗೆ ರಾಜ್ಯ ಮತ್ತು ಕೇಂದ್ರ ಸರಕಾರದ ತೆರಿಗೆ ನೀತಿ ಮತ್ತು ರಾಷ್ಟ್ರ ವ್ಯಾಪಿ ಏಕ ರೂಪದಲ್ಲಿ ಕಾನೂನು ಜ್ಯಾರಿಗೊಳಿಸದೆ ವೇತನ ಮತ್ತಿತರ ಸವಲತ್ತುಗಳಲ್ಲಿ ವ್ಯತ್ಯಾಸಗಳಿರುವುದು ಹಾಗೂ ಮಧ್ಯಪ್ರದೇಶದ ಸರಕಾರದ ಧೋರಣೆ ಕಾರಣ ಅದರೊಂದಿಗೆ ಮಾಲಕರೂ ಕಾರಣ. ಆದ್ದರಿಂದ ಸರಕಾರ ಮತ್ತು ಮಾಲಕ ವರ್ಗದ ವಿರುದ್ಧ ಹೋರಾಟ ತೀವ್ರಗೊಳಿಸಬೇಕು ಎಂದು ಯೂನಿಯನ್ ಕಾರ್ಯದರ್ಶಿ ಸುಕುಮಾರ್ ಬೀಡಿ ಕಾರ್ಮಿಕರಲ್ಲಿ ವಿನಂತಿಸಿದ್ದಾರೆ.



ನಿ[illegible] ಸಮಾಜವಾದ [illegible] ಜನಗಳಿಗೆ –
ಪ್ರಯತ್ನಕ್ಕೆ ಅಧಿಕಾರಿ ಶಾಹಿಗಳು ಅಡಚಣೆ ಹೊಡ್ಡುತ್ತಿದ್ದಾರೆ.
– ಸೋವಿಯತ್ ದೇಶ ಪತ್ರಿಕೆಯ ಒಂದು ಚಿತ್ರ.

ಯಶಸ್ವೀ ಅಧ್ಯಯನ ಶಿಬಿರ

ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ಇತ್ತೀಚೆಗೆ ಅತ್ಯಂತ ಯಶಸ್ವಿಯಾಗಿ SFI ನ ಮಂಜೇಶ್ವರ ಏರಿಯಾ ಮಟ್ಟದ ಅಧ್ಯಯನ ಶಿಬಿರವು ನಡೆಯಿತು.

ಮಂಜೇಶ್ವರದ ಎಲ್ಲ ಶಾಲಾ ಕಾಲೇಜಿನಿಂದಲೂ SFI ನ ವಿದ್ಯಾರ್ಥಿ ನಾಯಕರುಗಳು ಈ ಅಧ್ಯಯನ ಶಿಬಿರದಲ್ಲಿ ಭಾಗವಹಿಸಿ ಈ ಪ್ರದೇಶದಲ್ಲಿ ಬಲಿಷ್ಠ ಚಳವಳಿ ಕಟ್ಟಲು ಕಾರ್ಯಕ್ರಮವನ್ನು ಕೂಡಾ ರೂಪಿಸಲಾಯಿತು. ದಿನಾಂಕ 24.6.90 ರಂದು ಬೆಳಿಗ್ಗೆ ಎ.ಕೆ.ಜಿ. ಮಂದಿರದಲ್ಲಿ ನಡೆದ ಈ ಶಿಬಿರ ಧ್ವಜಾರೋಹಣವನ್ನು SFI ನ ಮಂಜೇಶ್ವರ ಸಮಿತಿಯ ಅಧ್ಯಕ್ಷ ಗಣೇಶ್‌ರವರು ನೆರವೇರಿಸಿದರು. ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ನಾಯಕರಾದ ಬಿ.ಎಂ. ಮಾದವ್‌ರವರು ಉದ್ಘಾಟನೆ ಮಾಡಿದರು. ಎಸ್. ಎಫ್.ಐ. ಕಾಸರಗೋಡು ಜಿಲ್ಲಾ ಸಮಿತಿ ಕಾರ್ಯದರ್ಶಿ ವಿ.ಕೆ. ರಾಜನ್ ಹಾಗು SFI ದ.ಕ. ಜಿಲ್ಲಾ ಸಮಿತಿ ಸಹಕಾರ್ಯದರ್ಶಿ ವಸಂತ ಆಚಾರಿಯವರುಗಳು ಬೇರೆ ಬೇರೆ ಸೈದ್ಧಾಂತಿಕ ಸಂಘಟನಾತ್ಮಕ ವಿಷಯಗಳು ಬಗ್ಗೆ ಉಪನ್ಯಾಸ ನೀಡಿದರು. ಈ ಸಮಯದಲ್ಲಿ ಶುಭಾಷಯ ಕೋರಿ ಮಾತನಾಡಿದ C.P.I.(M) ನ ಏರಿಯಾ ಸಮಿತಿ ಕಾರ್ಯದರ್ಶಿ ಬಿ.ಎಂ. ರಾಮಯ್ಯ ಶೆಟ್ಟಿಯವರು ವಿದ್ಯಾರ್ಥಿ ಚಳುವಳಿಯ ಮಹತ್ವ ವಿವರಿಸಿದರು. SFI ಕಾಸರಗೋಡು ಜಿಲ್ಲಾ ಸಮಿತಿ ನಾಯಕರಾದ ರಮೇಶ್‌ರವರು ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಇಂಗ್ಲೀಷ್ - ಕನ್ನಡ ವಿಜ್ಞಾನ ಶಬ್ದಕೋಶ ಬಿಡುಗಡೆ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ದಶಮಾನೋತ್ಸವದ ಅಂಗವಾಗಿ ದಿನಾಂಕ 8 ರ ಜುಲೈ 1990 ರಂದು ರಾಜ್ಯದ ನಾಲ್ಕು ವಿವಿಧ ಕಡೆಗಳಲ್ಲಿ ಇಂಗ್ಲೀಷ್ - ಕನ್ನಡ ವಿಜ್ಞಾನ ಶಬ್ದ ಕೋಶದ ಬಿಡುಗಡೆಯ ಸಮಾರಂಭವನ್ನು ನಡೆಸಲಾಗಿತ್ತು. ಇದರ ಅಂಗವಾಗಿ ಮಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಶಬ್ದ ಕೋಶದ ಪ್ರಧಾನ ಸಂಪಾದಕರಾದ ಅಧ್ಯನಡ್ಕ ಕೃಷ್ಣಭಟ್ ರವರು ಭಾಗವಹಿಸಿದ್ದರು.

ಒಟ್ಟು 1,200 ಶಬ್ದಗಳಿರುವ ಈ ಶಬ್ದ ಕೋಶದ ತಯಾರಿಕೆಗಾಗಿ ಕಳೆದ ನಾಲ್ಕು ವರ್ಷಗಳಿಂದ ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿಯ ನೆರವಿನೊಂದಿಗೆ ಕರಾವಿಪವು ರಾಜ್ಯದ ವಿಜ್ಞಾನ ಚಳವಳಿಗೆ ಒಂದು ಅಮೋಘವಾದ ಕೊಡುಗೆ ನೀಡಿದೆ.

ಪುಸ್ತಕ ಬಿಡುಗಡೆಯನ್ನು ಡಾ: ಎಂ.ಪಿ. ಷೈ (ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರು) ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವ ವಿದ್ಯಾನಿಲಯದ ಉಪಕುಲಪತಿ ಪ್ರೊ: ಎಂ.ಐ. ಸವದತ್ತಿ ಅವರು ವಹಿಸಿದ್ದರು.

ಪ್ರಾರಂಭದಲ್ಲಿ ಕರಾವಿಪ ದ.ಕ. ಜಿಲ್ಲೆ ಘಟಕದ ಕಾರ್ಯದರ್ಶಿ ವಾಸುದೇವ್ ಉಚ್ಚಿಲ್ ಸ್ವಾಗತಿಸಿದರು. ಕಾರ್ಯಕ್ರಮವನ್ನು ನಿರ್ವಹಿಸಿದ ಕವಿಪದ ಕೋಶಾಧಿಕಾರಿ ಸಂಜೀವ್ ಬಳ್ಕೂರ್ ಕೊನೆಯಲ್ಲಿ ವಂದಿಸಿದರು.

ದೇವರಗೋನಾಲ ಯಶಸ್ವಿ ರಸ್ತಾರೋಖೋ

ದಿನಾಂಕ 9.07.90 ರಂದು ಡಿ.ವೈ.ಎಫ್. ಐ., ಹಾಗೂ ಎಸ್.ಎಫ್.ಐ. ದೇವರಗೋನಾಲ ಶಾಖೆಯವರು ಇಂಡಿ - ಹೊಸ ಪೇಟೆ ಹಾಗೂ ಇಂಡಿ- ಬಳ್ಳಾರಿ - ಬೆಂಗಳೂರು ಎಕ್ಸ್‌ಪ್ರೆಸ್ ಬಸ್ ನಿಲ್ಲಿಸುವುದು - ಮತ್ತು ಮುಂಜಾನೆ 9 ಗಂಟೆಗೆ ಹಾಗೂ 12 ಗಂಟೆಗೆ ಹೆಚ್ಚುವರಿ ಬಸ್‌ಗಳನ್ನು ಓಡಿಸುವುದರ ಬೇಡಿಕೆಗಳನ್ನು ಮುಂದಿಟ್ಟು, ರಸ್ತಾ ರೋಖೋ ಚಳುವಳಿಯನ್ನು ನಡೆಸಿದರು. ಸುರಪೂರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಬಸ್ ನಿಯಂತ್ರಣ ಅಧಿಕಾರಿಗಳು ಮಧ್ಯಸ್ಥಿಕೆಯಲ್ಲಿ ಬೇಡಿಕೆ ಈಡೇರಿಸುವ ಆಶ್ವಾಸನೆಯ ಮೇರೆಗೆ ಚಳುವಳಿಯನ್ನು ನಿಲ್ಲಿಸಲಾಯಿತು ಚಳುವಳಿಯನ್ನುದ್ದೇಶಿಸಿ ಜಿಲ್ಲಾ ಸಿ.ಪಿ.ಐ. (ಎಂ) ಸದಸ್ಯರಾದ ಚನ್ನಪ್ಪ ಆನೆಗುಂದಿ ಯವರು ಮಾತನಾಡಿ, ಅಧಿಕಾರಿಗಳು ನೀಡಿದ ಆಶ್ವಾಸನೆ ಜಾರಿಗೆ ತರದೇ ಇದ್ದಲ್ಲಿ ಉಗ್ರ ಚಳುವಳಿ ಹೂಡುವುದಾಗಿ ಘೋಷಿಸಿದರು. ಈ ಚಳುವಳಿಯ ನೇತೃತ್ವವನ್ನು ಡಿ.ವೈ.ಎಫ್.ಐ ಅಧ್ಯಕ್ಷರಾದ ವೆಂಕಣ್ಣ ದಳವಾಯಿ, ಎಸ್.ಎಫ್.ಐ. ಜಿಲ್ಲಾ ಜಂಟಿ ಕಾರ್ಯದರ್ಶಿ ಸೈಯದ್ ಇಬ್ರಾಹಿಂ ಮುಂತಾದವರು ವಹಿಸಿದ್ದರು.

ಫೆನ್ನಿಗಿಂತ ಬೀಡಿ ಕೆಟ್ಟದೇ?

ಕೆಂಪು ಬೀಡಿ, ಫೆನ್ನಿ ಕುಡಿ ಎನ್ನುವ ಧೋರಣೆ ಹೊಂದಿರುವ ರಾಜ್ಯ ಸರಕಾರಕ್ಕೆ ಬೀಡಿ ಸೇದಿ, ಬೀಡಿ ಸೇದಿ ಎಂದು ಹೇಳುವುದು ಕಷ್ಟವೇ? ರಾಜ್ಯದ 6 ಲಕ್ಷ ಬೀಡಿ ಕಾರ್ಮಿಕರು ಕಳೆದ 10 ತಿಂಗಳಿನಿಂದ 1-2ದಿನ ಕೆಲಸ ಮಾಡಿ ಉಪವಾಸಬಿದ್ದು ಸಾಯುತ್ತಿದ್ದರೂ ರಾಜ್ಯ ಸರಕಾರ ಏನೇನು ಕ್ರಮ ವಹಿಸದೇ ಇರುವುದನ್ನು ಕೋಟೆಕಾರ ಬೀಡಿ ಲೇಬರ್ ಯೂನಿಯನ್ ಖಂಡಿಸುತ್ತದೆ. ಬೀಡಿ ಕೈಗಾರಿಕೆಯನ್ನು ರಾಷ್ಟ್ರೀಕರಿಸಿ ಜನರಲ್ಲಿ

ಯಶಸ್ವಿ ಹೋರಾಟ

ಪುಟ 6 ರಿಂದ

ದಿದ್ದು, 2.7.90 ರಂದು ನಡೆದ ಮಾತುಕತೆ ವೇಳೆ ಕೆಲಸ ಪುನರಾರಂಭಿಸಲು ಒಪ್ಪಿದ್ದಾರೆ. ಕೂಲಿ ಹೆಚ್ಚಳ ಬಗ್ಗೆ ಸಧ್ಯವೇ ತೀರ್ಮಾನ ಆಗಲಿದೆ.

ಸಿ.ಐ.ಟಿ.ಯು. ಮುಖಂಡರಾದ ಎಸ್. ಧರ್ಮರಾಜಾ, ಆರ್. ಉಮಾಪತಿ, ಎಸ್.ಲಕ್ಷ್ಮಣ್‌ನ್, ಮುಕ್ಕರ್‌ಜಾ.ಎಸ್., ನಂದಗೋಪಾಲ್ , ಮುರುಗೇಶ, ಕಣ್ಣನ್ ಹೋರಾಟಕ್ಕೆ ನೇತೃತ್ವ ನೀಡಿದ್ದರು.

ಪಠ್ಯ ಕ್ರಮದ ಹಠಾತ್ ಬದಲಾವಣೆ ವಿರುದ್ಧ ಎಸ್.ಎಫ್.ಐ. ಚಳವಳಿ

ತಿರುಚ್ಚಿ ಕೇಂದ್ರವಾಗಿರುವ ಭಾರತಿ ದಾಸನ್ ವಿಶ್ವವಿದ್ಯಾನಿಲಯದ ಬಿ.ಎ. ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ ಇದ್ದಕ್ಕಿದ್ದಂತೆ ಬದಲಾವಣೆ ಮಾಡಿರುವುದರ ವಿರುದ್ಧ ತಂಜಾವೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಎಸ್.ಎಫ್.ಐ. ನೇತೃತ್ವದಲ್ಲಿ ಮೆರವಣಿಗೆ , ಧರಣಿ ಸತ್ಯಾಗ್ರಹ ನಡೆದವು.

ಕುಂದವೈನಾಚಿಯಾರ್ ಗರ್ಲ್ಸ್ ಕಾಲೇಜಿನ ಸುಮಾರು ವಿದ್ಯಾರ್ಥಿನಿಯರು ಎಸ್.ಎಫ್.ಐ. ನಾಯಕಿಯರಾದ ಅಜಿತಾ ಮತ್ತು ಸಿತ್ರಾ ಮುಖಂಡತ್ವದಲ್ಲಿ ಮೆರವಣಿಗೆ ನಡೆಸಿದರು. ಆದಿರೈ ಖಾದರ್ ಮುಹೈದಿನ್ ಕಾಲೇಜ್, ಕರಂದೈ ಆರ್ಟ್ಸ್ ಕಾಲೇಜ್ ವಿದ್ಯಾರ್ಥಿಗಳಿಗೂ ಎಸ್.ಎಫ್.ಐ. ನಾಯಕತ್ವ ನೀಡಿತು. ಈ ಚಳವಳಿಯ ಸಂದರ್ಭದಲ್ಲಿ ಸೆನೆಟ್, ಸಿಂಡಿಕೇಟ್‌ನಲ್ಲಿ ವಿದ್ಯಾರ್ಥಿಗಳಿಗೂ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಲಾಯಿತು.

ಉಪವಾಸ ಸತ್ಯಾಗ್ರಹ

ಸಾರ್ವಜನಿಕ ರಂಗದ ಮದರಾಸು ಫರ್ಟಿಲೈಸರ್ .ಲಿ. ತಮಿಳುನಾಡು ಜಲ ಸರಬರಾಜು ಮಂಡಳಿ ಮತ್ತು ತಮಿಳುನಾಡು ಗಣಿ ನಿಗಮಗಳ ಕಾರ್ಮಿಕರ ಅನೇಕ ಕೇಳಿಕೆಗಳನ್ನು ಒತ್ತಾಯಿಸಿ ಅವುಗಳಲ್ಲಿನ ಸಿ.ಐ.ಟಿ.ಯು. ಸಂಘಟನೆಗಳ ಸುಮಾರು 500 ಕಾರ್ಯಕರ್ತರು ಜುಲೈ 1, 2 ರಂದು ಮದರಾಸು ಕಾರ್ಪೊರೇಶನ್ ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ ನಡೆಸಿದರು. ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಕೆ.ರಮಣಿ ನೇತೃತ್ವ ವಹಿಸಿದ್ದರು. ಸಹ ಕಾರ್ಯದರ್ಶಿ ಎ.ಕೆ. ಪದ್ಮನಾಭ ಉದ್ಘಾಟಿಸಿದರು.

ವಿವಿಧ ಕಾರ್ಮಿಕ ಹಾಗೂ ರೈತ ಸಂಘಟನೆಗಳ ಮುಖಂಡರು ಹೋರಾಟಕ್ಕೆ ಸೌಹಾರ್ದತೆ ಸೂಚಿಸಿದರು.

ಗೋರ್ಬಚೇವ್ ಪುನರಾಯ್ಕೆ

– ಪುಟ 7 ರಿಂದ –

ಈ ಮೊದಲು (ಪಕ್ಷದ ನಾಯಕತ್ವಕ್ಕೆ) 3 ದಿನ ಎಲ್ಲಾ ಪ್ರತಿನಿಧಿಗಳ ಸಾಮಾನ್ಯ ಸಭೆ ನಡೆದ ಮೇಲೆ ಹೊಸ ಅಪೂರ್ವ ನಿರ್ಧಾರವನ್ನು ಮಹಾಧಿವೇಶನ ತೆಗೆದುಕೊಂಡಿತ್ತು. ಭಾರೀ ಸಂಖ್ಯೆಯಲ್ಲಿ ಪ್ರತಿನಿಧಿಗಳು ಚರ್ಚೆಯಲ್ಲಿ ಸೂಚನೆಗಳು, ನಿಲುಮೆಗಳನ್ನು ಸದಸ್ಯರು ಮಂಡಿಸ ಬಯಸಿದರು. ಈ ಎಲ್ಲಾ ಸೂಚನೆಗಳು , ನಿಲುಮೆಗಳ ಬಗ್ಗೆ ಆಳವಾದ ಚರ್ಚೆ, ಮತ್ತು ಇದರ ಆಧಾರದ ಮೇಲೆ ಮಹಾಧಿವೇಶನದ ದಸ್ತಾವೇಜುಗಳನ್ನು ಪುನರ್ರೂಪಿಸುವ ಉದ್ದೇಶದಿಂದ, ಏಳು 'ಕಾರ್ಯಕಾರಿ ಗುಂಪು'ಗಳೂ ವಿಭಜಿಸಲಾಯಿತು. ಇಂತಹ ಪ್ರತಿಯೊಂದು ಗುಂಪು ತಮಗೆ ಸಂಬಂಧಿಸಿದ ವಿಷಯದ ಬಗ್ಗೆ ತೀವ್ರವಾದ ಚರ್ಚೆ ನಡೆಸಿ ಒಂದು ನಿರ್ಣಯವನ್ನು ತಯಾರಿಸಬೇಕಾಗಿತ್ತು. ಈ ವಿಷಯಗಳು ಈ ರೀತಿ ಇವೆ- ಸಿದ್ಧಾಂತ, ದೇಶೀ ಜನಾಂಗೀಯ ಸಮಸ್ಯೆಗಳು, ಅಂತರಾಷ್ಟ್ರೀಯ (ವಿದೇಶ) ನೀತಿ, ಸೋವಿಯೆತ್‌ಗಳು ಮತ್ತು ಇತರ ಸಾರ್ವಜನಿಕ ರಾಜಕೀಯ ಸಂಸ್ಥೆಗಳ ಬಗ್ಗೆ, ಆರ್ಥಿಕ ನೀತಿ, ಸೋವಿಯೆತ್‌ಗಳು ಮತ್ತು ಇತರ ಸಾರ್ವಜನಿಕ ರಾಜಕೀಯ ಸಂಸ್ಥೆಗಳ ಬಗ್ಗೆ, ಆರ್ಥಿಕ ನೀತಿ, ಕೃಷಿ ನೀತಿ, ಪಕ್ಷದ ಬಗ್ಗೆ. ಹಿಂದಿನ ಪಾಲಿಟ್‌ಬ್ಯೂರೋ ಸದಸ್ಯರ ಕೆಲಸದ ಬಗ್ಗೆ ಮಹಾಧಿವೇಶನ ವೈಯಕ್ತಿಕ ವರದಿ ಮತ್ತು ಪ್ರತ್ಯೇಕ ವಿಮರ್ಶೆ ಮಾಡಲಾಯಿತು. ಆದರೆ ಈ ಎಲ್ಲಾ ಸದಸ್ಯರ ವಿಮರ್ಶೆಯನ್ನು ಮಾಡಲಾಗಲಿಲ್ಲ. ಬಾಕ್ಸ್‌ನಲ್ಲಿ ಕೊಟ್ಟಿರುವ ಕೆಲವು ಪ್ರತಿನಿಧಿಗಳ ಹೇಳಿಕೆಗಳು ಮಹಾಧಿವೇಶನದ ಚರ್ಚೆಯ ಸ್ವಭಾವದ ಬಗ್ಗೆ ತಿಳಿಸುತ್ತವೆ.

ಯಲ್ಲಿ ಕಾಮ್ರೇಡ್ ಲಿಗಚೇವ್ ಸೋತಿದ್ದಾರೆ. ಅವರಿಗೆ ಕೇವಲ 776 ಮತಗಳು ಸಿಕ್ಕಿದರೆ, ಆಯ್ಕೆಯಾಗಿರುವ 'ಪೆರಸ್ತ್ರೋಯಿಕ ವಾದಿ' ಇವಾಷ್ಕೋಗೆ 3109 ಮತಗಳು ಸಿಕ್ಕಿವೆ. ಇಡೀ ಕೇಂದ್ರ ಸಮಿತಿಯನ್ನು ಸಹ ಮಹಾಧಿವೇಶನ ಗುಪ್ತ ಮತದಾನದಿಂದ ಚುನಾಯಿಸಿತು.

ಆ ಮೇಲೆ ಸೇರಿದ್ದ ಕೇಂದ್ರಸಮಿತಿ ಪಾಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು. ಪಕ್ಷ ಮತ್ತು ಸರ್ಕಾರದ ಪಾತ್ರಗಳನ್ನು ಪ್ರತ್ಯೇಕಗೊಳಿಸುವ ದೃಷ್ಟಿಯಿಂದ ಅಧ್ಯಕ್ಷ ಪದವಿ ಬಿಟ್ಟು, ಇತರ ಎಲ್ಲಾ ಸರ್ಕಾರದಲ್ಲಿ ಕೆಲಸ ಮಾಡುವ ನಾಯಕರನ್ನು ಪಾಲಿಟ್‌ಬ್ಯೂರೋದಿಂದ ಇವರನ್ನು ಪಾಲಿಟ್‌ಬ್ಯೂರೋದಿಂದ ಕೈ ಬಿಡಲಾಗಿದೆ. ಸಿದ್ಧಾಂತ, ಪ್ರಚಾರ, ವಿದೇಶೀ ವ್ಯವಹಾರ ಇತ್ಯಾದಿ ವಿಭಾಗಗಳನ್ನು ನೋಡಿಕೊಳ್ಳುವ 7-8 ಸದಸ್ಯರನ್ನು ಬಿಟ್ಟರೆ, ಎಲ್ಲಾ 15 ಸೋವಿಯೆತ್ ಒಕ್ಕೂಟದ ಗಣರಾಜ್ಯಗಳ ಕಮ್ಯುನಿಸ್ಟ್ ಪಕ್ಷಗಳ ಪ್ರಥಮ ಕಾರ್ಯದರ್ಶಿಗಳು ಪಾಲಿಟ್‌ಬ್ಯೂರೋದ ಸದಸ್ಯರಾಗಿರುತ್ತಾರೆ.

ತ್ರಿಪುರಾ

ಪುಟ 1 ರಿಂದ

ಇರುವುದು ಅನಾಗರಿಕ ಶಾಸನ ಎಂದು ಪಿ.ಬಿ. ವರ್ಣಿಸಿದೆ.

ಈ ಭಯೋತ್ಪಾದನೆಯನ್ನು ಬಲವಾಗಿ ಖಂಡಿಸಿ ರಾಜ್ಯದಲ್ಲಿ ಇಂತಹ ಹಲ್ಲೆಗಳನ್ನು ತಕ್ಷಣ ನಿಲ್ಲಿಸಿ ಕಾನೂನು - ವ್ಯವಸ್ಥೆಯ ಪುನರ್ ಸ್ಥಾಪನೆ ಮಾಡಬೇಕೆಂದು ಎಲ್ಲಾ ವಿಭಾಗಗಳ ಜನರು ಒತ್ತಾಯಿಸಬೇಕೆಂದು ಪಿ.ಬಿ. ಕರೆ ನೀಡಿದೆ. ತ್ರಿಪುರಾದಲ್ಲಿ ಭಯೋತ್ಪಾದನೆಯ ವಿರುದ್ಧ ಪ್ರತಿಭಟನಾ ಕಾರ್ಯಚರಣೆ ನಡೆಸಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಪೊಲಿಟ್‌ಬ್ಯೂರೋ ಕರೆ ನೀಡಿದೆ.

Printed and published by P. Ramachandra Rao. on behalf of Communist Party of India (Marxist) Karnataka State Committee, L-56, K.V. Temple Stree,t, Sultanpet, Bangalore-560 053 Editor: P. RAMACHANDRA RAO